PRIVATE MEMBERS BILLS

Karnataka Agricultural Workers Bill, 1975 Introduction

SRI KONANDUR LINGAPPA (Thirthahalli).—Madam, I big leave of the House to introduce the Karnataka Agricultural Workers Bill, 1975.

SRI S. M. YAHYA (Minister for Labour and Excise).— Madam, Government will bring a similar Bill. However, I have nothing to say at the moment.

MADAM SPEAKER.— the question is./-

"That leave be granted to introduce the Karnataka Agricultural Workers Bill, 1975."

The motion was adopted

SRI KONANDUR LINGAPPA.—Madam, I beg to introduce the Bill.

MADAM SPEAKER.— The Bill is introduced. **

PRIVATE MEMBERS' RESOLUTIONS

Re – Constitution of Export Committee to study and fix up reasonable rates for the supply of water for drinking and domestic use in Bangalore City.

† ಶ್ರೀ ಕೆ.ಆರ್ ಶ್ರೀನಿವಾಸಲು ನಾಯುಡು (ಶಾಂತಿನಗರ).—ಸನ್ಮಾನ್ಯ ಸಭಾಧ್ಯಕ್ಷಿಣಿಯವರೆ, ನಿನ್ನೆಯ ದಿವಸ ಬಾಯಾರಿದ ಬೆಂಗಳೂರಿಗೆ ಕಾವೇರಿ ಬಂದಳು ಎನ್ನುವ ಬಗ್ಗೆ ಮಾತನಾಡುತ್ತಿದ್ದೆ. ಈ ದಿವಸವೂ ಅದನ್ನೇ ಮುಂದುವರಿಸುತ್ತೇನೆ. ನಿನ್ನೆಯ ದಿವಸ ಮಾನ್ಯ ಮಿತ್ರರಾದ ಶ್ರೀಮಾನ್ ಶಾಮಣ್ಣ ನವರು ಹಾಗೂ ಕೃಷ್ಣನ್‌ರವರು ತಮಗೆ ಗೊತ್ತಿರುವ ಹಾಗೆ ಈ ಕಾವೇರಿ ನೀರಿನ ಬಗ್ಗೆ ಕೆಲವು ಕಟು ಟೀಕೆಗಳನ್ನೂ ಕೆಲವು ಉತ್ತಮವಾದ ಸಲಹೆಗಳನ್ನೂ ಕೊಟ್ಟರು ಆದರೆ ಅದಕ್ಕೆ ಮುಖ್ಯವಾಗಿ ಯಾರು ಜವಾಬ್ದಾರರು ಎಂಬುದನ್ನೂ ಕೂಡ ಅವರು ಹೇಳಿದರು. ತಮಗೇ ಗೊತ್ತಿರುವಹಾಗೆ ಈ ಯೋಜನೆಯನ್ನು ತರಬೇಕೆಂದು ಬಹಳ ದಿವಸಗಳಿಂದ ಆಸೆ ಇತ್ತು. ಕಾರಣ, ಬೆಂಗಳೂರು ಪಟ್ಟಣ ಅಮಿತವಾಗಿ ಬೆಳೆಯುತ್ತಾ ಬಂತು, ಇನ್ನು ಮುಂದೆಯೂ ಕೂಡ ಈ ಪಟ್ಟಣ ಬೆಳೆಯುತ್ತದೆ. ಇದು ಮೂರು ಹಂತದಲ್ಲಿ ಬೆಳೆದುಕೊಂಡು ಬರುತ್ತಿದೆ. ಒಂದು ಕಾಲದಲ್ಲಿ ಈ ಪಟ್ಟಣ ಸಣ್ಣದಾಗಿದ್ದಾಗ ಹೆಸರುಘಟ್ಟದಿಂದ ನೀರು ತರುತ್ತಿದ್ದೆವು, ನಂತರ ತಿಪ್ಪಗೊಂಡನಹಳ್ಳಿಯಿಂದ ನೀರನ್ನು ತಂದೆವು, ಅನಂತರ ಕಾವೇರಿ ನೀರನ್ನು ತಂದೆವು. ಕಾವೇರಿ ನೀರನ್ನು ತರುವಲ್ಲಿ ಜನರಿಗೆ ಆಶ್ವಾಸನೆ ಕೊಟ್ಟ ಪ್ರಕಾರ ಅದನ್ನು ಕಾರ್ಯಗತ ಮಾಡುವ ಕಾಲ ಬಂತು ಕಾವೇರಿ ನೀರನ್ನು ಬೆಂಗಳೂರಿಗೆ ತರಬೇಕಾದರೆ ಬಹಳ ದೂರದಿಂದ ತರಬೇಕು ಎಂಬುದು ಎಲ್ಲರಿಗೂ ಗೊತ್ತು. ಇದಕ್ಕೆ ಹಣವನ್ನು ಒದಗಿಸುವುದು ಕಷ್ಟಕ್ಕೆ ಬಂದಾಗ ನಾವು ಬೇಕಾದಷ್ಟು ಏಜೆನ್ಸಿಗಳನ್ನು ಅಪ್ರೋಚ್ ಮಾಡಿದೆವು. ನಾನು ನಿನ್ನೆ ಹೇಳಿದಂತೆ ಇಂಟರ್ ನ್ಯಾಷನಲ್ ಲೋನ್ ಎಕ್ಸ್‌ಪರ್ಟ್ಸ್ ನಮ್ಮ ಬ್ಲೂಪ್ರಿಂಟ್ಸ್‌ನ್ನು ತಯಾರು ಮಾಡಿ ಅದನ್ನು ಒಪ್ಪಿಕೊಳ್ಳುವುದಕ್ಕೆ ೩ ವರ್ಷಗಳನ್ನು ತೆಗೆದುಕೊಂಡರು. ಬರೀ ಕನ್‌ಸಲ್ಟೇಟಿವ್ ಫೀಸ್ ೮೬ ಲಕ್ಷ ರೂಪಾಯಿಗಳಾದರೆ ಅದನ್ನು ಕೊಡುವುದಾದರು ಹೇಗೆ ? ನಂತರ ಶ್ರೀಮಾನ್ ಮುಗ್ದುಂರವರು ಅಧ್ಯಕ್ಷರಾಗುವುದಕ್ಕೆ ಮುಂಚೆಯೇ ಅಂದರೆ ಅಷ್ಟು ಹೊತ್ತಿಗೆ ಕೋಟಿ ೨೬ ಲಕ್ಷ ರೂಪಾಯಿಗಳನ್ನು ರಾಜ್ಯದ ಬೊಕ್ಕಸದಿಂದ ಕೊಟ್ಟುಬಿಟ್ಟಿದ್ದರು. ಆದರೂ ಕಾವೇರಿ ನೀರು ನಗರಕ್ಕೆ ಬರುವ ಸೂಚನೆಗಳು ಇರಲಿಲ್ಲ. ಮಾನ್ಯ ಮಿತ್ರರು ಇವರ ಬಗ್ಗೆ ವಿನಾಕಾರಣ ಟೀಕೆ ಟಿಪ್ಪಣಿಗಳನ್ನು ಮಾಡುತ್ತಿದ್ದಾರೆ. ಅದು ಏನೇ ಇರಲಿ, ನನಗನಿಸುತ್ತದೆ, ನಮ್ಮ ಕರ್ನಾಟಕದವರೇ ಆದ ಮಗ್ದುಂರವರ ಕಾಲದಲ್ಲಿ ನಗರಕ್ಕೆ ನೀರು ಬಂತು. ಈಗ ಯಾರ ಕಾಲದಲ್ಲಾದರೂ ಒಂದು ಮುಖ್ಯ

ವಾದ ಕೆಲಸವಾದರೆ ಅವರ ಹೆಸರು ಬರುತ್ತದೆಯೋ ಹೊರತು ಆವರ ಕೈಕೆಳಗೆ ಕೆಲಸಮಾಡಿದವರ ಹೆಸರು ಬರುವುದಿಲ್ಲ. ಉದಾಹರಣೆಗೆ ಹೇಳುವುದಾದರೆ, ವಿಧಾನಸೌಧವನ್ನು ಕಟ್ಟುವಾಗ ಅನೇಕ ಜನ ಇಂಜಿನಿಯರುಗಳು, ಅಸಿಸ್ಟೆಂಟ್ ಇಂಜನಿಯರುಗಳು, ಸಾವಿರಾರು ಜನ ಕೂಲಿಯವರು ಕೆಲಸ ಮಾಡಿದರು. ಆದರೆ ಅವರು ಕೆಲಸಮಾಡಿದ್ದರೂ ಕೂಡ ಹೆಸರು ಬಂದದ್ದು ಮಾನ್ಯ ಹನುಮಂತಯ್ಯನವರಿಗೆ. ಕಾರಣ ಅದು ಅವರ ಕಾಲದಲ್ಲಿ ಆದುದರಿಂದ. ಅದೇ ರೀತಿಯಲ್ಲಿ ಕನ್ನಂಬಾಡಿ ಕಟ್ಟೆ ವಿಶ್ವೇಶ್ವರಯ್ಯನವರ ಕಾಲದಲ್ಲಿ ಆಯಿತು ಎಂದು ಹೇಳುತ್ತಾರೆ. ಅದೇ ರೀತಿ ಬೆಂಗಳೂರಿಗೆ ಕಾವೇರಿ ನೀರು ಯಾವ ಇಂಜಿನಿಯರ್‌ರವರ ಕಾಲದಲ್ಲಿ ಬಂತು ಎಂದಗೆ ಮಗ್ದುಂರವರ ಕಾಲದಲ್ಲಿ ಎಂಬುದು ನಿರ್ವಿವಾದವಾದ ಮಾತು. ಒಳ್ಳೆಯ ದಕ್ಷ ಅಧಿಕಾರಿ, ಈ ಕಾವೇರಿ ನೀರನ್ನು ತರಲೂ ಎಲ್ಲಾ ಏಜನ್ಸಿಯನ್ನು ಟ್ರ್ಯಾಪ್ ಮಾಡಿದ್ದಾರೆ. ಅಂದರೆ ಸರ್ಕಾರ, ಎಲ್. ಐ. ಸಿ. ಮತ್ತು ಡಿಬೆನ್‌ಚರ್‍ಸ್ ಮೂಲಕ ಹಣ ತಂದು ಹಾಕಿದ್ದಾರೆ. ಈ ಕಾವೇರಿ ಸ್ಕೀಮ್‌ಗೆ......

ಶ್ರೀ ಎಂ. ಎಸ್. ಕೃಷ್ಣನ್.—ಒಬ್ಬರು ಇಂಜಿನೀಯರ್ ಇದ್ದಮೇಲೆ ಆ ಕೆಲಸವನ್ನು ಮಾಡಲೇ ಮಾಡಬೇಕಾಗುತ್ತದೆ.

ಶ್ರೀ ಕೆ. ಎಸ್. ಶ್ರೀನಿವಾಸಲು ನಾಯ್ಡು.—ಒಳ್ಳೆಯ ಕೆಲಸ ಮಾಡಿದ ಕಾಲದಲ್ಲಿ ಅವರಿಗೆ ಮನ್ನಣೆ ಕೊಡಬೇಕಾದುದು ನಮ್ಮ ಧರ್ಮ. ನಾವು ಗೌರವಿಸಿದ್ದರೆ ಹೊರಗಡೆಯಾದರೂ ಗೌರವಿಸುತ್ತಿದ್ದಾರೆ? ಕಾವೇರಿ ಯೋಜನೆಯನ್ನು ಸಕಾಲದಲ್ಲಿ ಕಾರ್ಯಗತ ಮಾಡಿದುದರಿಂದ ಬೇರೆಯವರಿಗೂ ಆಶ್ಚರ್ಯವನ್ನು ಮಾಡಿತು. ಈ ಯೋಜನೆಯನ್ನು ಮುಗಿಸಬೇಕಾದರೆ ಕೊನೆಪಕ್ಷ ೬, ೭ ವರ್ಷಗಳಾದರೂ ಬೇಕಾಗುತ್ತದೆ ಎಂದು ಹೊರಗಿನವರು ಹೇಳಿದ್ದು ಉಂಟು. ಆದರೆ ಕೇವಲ ೨೭ ತಿಂಗಳಲ್ಲಿಯೇ ಮುಗಿಸಿದ್ದನ್ನು ನೋಡಿದರೆ, ಇದೊಂದು ಮಹತ್ ಕಾರ್ಯಸಾಧನೆಯೆಂದು ಒಪ್ಪಲೇಬೇಕು. ತಾವು ಇಂಜಿನೀಯರ್ ಆದುದರಿಂದ ತಮಗೆ ಅದರ ಲೋಪದೋಷಗಳು ಗೊತಾಗುತ್ತವೆ ತಾವು ಬರೇ ಲೋಪದೋಷಗಳನ್ನು ಹೇಳಿದಿರೇ ಹೊರತು, ಪ್ರಾಜೆಕ್ಟ್ ಯಶಸ್ವಿಯಾದುದಕ್ಕೆ ಸಂತೋಷ ವ್ಯಕ್ತಪಡಿಸಲಿಲ್ಲ. ತಮಗೆ ಗೊತ್ತಿದೆ, ಈ ಬೋರ್ಡ್ ಒಂದು ಅಟಾನಮಸ್ ಬಾಡಿ ಎಂದು. ನಿರ್ಣಯಗಳನ್ನು ತೆಗೆದುಕೊಂಡು ಜಾಗ್ರತೆ ಕಾರ್ಯಗತ ಮಾಡಿದರು.

ಅಧ್ಯಕ್ಷರು.–ಮಾನ್ಯ ಸದಸ್ಯರು ನಿನ್ನೆಯೇ ೧೮ ನಿಮಿಷಗಳ ಕಾಲ ಮಾತನಾಡಿದ್ದಾರೆ. ಇದಕ್ಕೆ ಕೊಟ್ಟಿರ ತಕ್ಕಂಥದ್ದು ೪೫ ನಿಮಿಷಗಳು.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು.–ಎಗಡೂವರೆ ಗಂಟೆಕಾಲದಲ್ಲಿ ಇಬ್ಬರು ಮಾತನಾಡಿದ್ದಾರೆ.

ಅಧ್ಯಕ್ಷರು.—ಈ ನಿರ್ಣಯದ ಮೇಲೆ ಮಾತನಾಡುವವರು ಇನ್ನೂ ಇದ್ದಾರೆ.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು.— ವಾಟರ್ ಸೀವರೇಜ್ ಬೋರ್ಡ್ ಒಂದು ಅಟಾನಮಸ್ ಬಾಡಿ. ನೀರಿನ ದರವನ್ನು ಬೋರ್ಡ್‌ನವರು ಏರಿಸಿದ್ದಾರೆ. ನಾನು ಅದರ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. ಬಡವರಿಗೆ ಫ್ರೀ ಲೈನ್ಸ್ ಕೊಟ್ಟು ಸಪ್ಲೈ ಕೊಡಬೇಕು ಎಂದು ಹೇಳುವುದರಲ್ಲಿ ನಾನು ಒಬ್ಬ ಎಂಬುದರಲ್ಲಿ ಸಂದೇಹವಿಲ್ಲ. ಹಣ ಖರ್ಚು ಮಾಡಿದ್ದಾರೆ, ಅದನ್ನು ನಾವು ವಹಿಸಬೇಕಾಗಿದೆ. ೩೬ ಕೋಟಿ ೭೨ ಲಕ್ಷ ರೂಪಾಯಿ ಕಾವೇರಿ ನೀರನ್ನು ಬೆಂಗಳೂರಿಗೆ ತರಲು ಖರ್ಚು ಆಯಿತು, ೨ ಕೋಟಿ

** Bill appended as Annexure to this volume.

ರೂಪಾಯಿ ಮೆಂಟನೆನ್ಸ್‌ಗೆ ಆಗುತ್ತದೆ. ಸುಮಾರು ೨೬ ಲಕ್ಷ ರೂಪಾಯಿ ಎಂದರೆ ೧¼ ಕೋಟಿ ರೂಪಾಯಿ ಎಲೆಕ್ಟ್ರಿಸಿಟಿ ಡಿಪಾರ್ಟ್‌ಮೆಂಟಿಗೆ ಹೋಗುತ್ತದೆ. ಹೋದವರ್ಷ ನೀರಿನ ದರವನ್ನು ಕಡಿಮೆ ಮಾಡುತ್ತೇವೆಂದು ಮಾಡಿದ್ದರಿಂದ ಸುಮಾರು ೨೫ ೮ ಲಕ್ಷ ರೂಪಾಯಿ ಇದ್ದುದು ೧೮.೫ ಲಕ್ಷಕ್ಕೆ ಬಂದಿತು. ದುಡ್ಡು ಈ ರೀತಿ ಕ್ರಮೇಣ ಕಡಿಮೆ ಆಗುತ್ತಲೇ ಬರುತ್ತಾ ಇದೆ. ಸ್ಟಾಫ್ ಎಸ್ಟಾಬ್ಲಿಷ್‌ಮೆಂಟಿಗಾಗಿ ೧೩.೭೫ ಲಕ್ಷ ರೂಪಾಯಿ ಅಲ್ಯೂಮಿನಿಯಮ್ ಕೆಮಿಕಲ್‌ಗಾಗಿ ೧೦ ಲಕ್ಷ ರೂಪಾಯಿ, ಮೆಟೀರಿಯಲ್ಸ್‌ಗಾಗಿ ೧೫. ೬ ಲಕ್ಷ. ಹೀಗೆ ಸುಮಾರು ೨ ಕೋಟಿ ರೂಪಾಯಿಗಳು ಆಗಿರುತ್ತದೆ. ಏತಕ್ಕೆ ವಿವರ ಕೊಡುತ್ತಿದ್ದೇನೆಂದರೆ, ಅನಾವಶ್ಯಕವಾಗಿ ಖರ್ಚುಮಾಡಬೇಕೆಂದು ಯಾರಿಗೂ ಇಷ್ಟವಿಲ್ಲ. ನಿನ್ನೆ ಹೇಳಿದ್ದೇನೆ, ನಾಲ್ಕು ಜನ ಇದಕ್ಕೆ ಜವಾಬ್ದಾರರು ಇರುತ್ತಾರೆಂದು. ಒಂದುಕಡೆ ಕಾರ್ಪೊರೇಷನ್‌ನವರು, ಒಂದುಕಡೆ ವಾಟರ್ ಬೋರ್ಡ್‌ನವರು, ಮತ್ತೊಂದು ಕಡೆ ಸರ್ಕಾರದವರು ಮತ್ತು ಸಾರ್ವಜನಿಕರು. ಈ ನಾಲ್ಕು ಜನರು ಈ ಭಾರವನ್ನು ವಹಿಸಿಕೊಳ್ಳಬೇಕಾಗುತ್ತದೆ. ದರ ಕಡಿಮೆ ಮಾಡಬೇಕೆಂದು ಅವರು ಹೇಳುವುದರಲ್ಲಿ ನ್ಯಾಯವಿದೆ, ಅದನ್ನು ಒಪ್ಪಿಕೊಳ್ಳುತ್ತೇನೆ. ಮತ್ತೆ ಯಾರು ಹಣವನ್ನು ಕೊಡಬೇಕು ?

ವಾಟರ್ ಬೋರ್ಡ್, ಆದೊಂದು ಅಟಾನಮಸ್ ಬಾಡಿ, ಅದರಲ್ಲಿ ಎಕ್ಸ್‌ಪರ್ಟ್ಸ್ ಇರುತ್ತಾರೆ. ಕಮಿಟಿ ಮೆಂಬರ್ಸ್ ಮೂರು ನಾಲ್ಕು ಜನ ಇರುತ್ತಾರೆ. ಮುಖ್ಯವಾಗಿ ಸ್ಟಾಂಡಿಂಗ್ ಟೆಕ್ನಿಕಲ್ ಕಮಿಟಿ ಬೇರೆ ಇರುತ್ತದೆ. ಅವರ ಸಹಾಯ ತೆಗೆದುಕೊಳ್ಳುತ್ತಾರೆ. ಹೀಗೆ ಇರತಕ್ಕ ಕಾಲದಲ್ಲಿ ಸರ್ಕಾರದವರು ಬೇಜವಾಬ್ದಾರಿಯಿಂದ ವರ್ತಿಸುತಿದ್ದಾರೆ ಎಂದು ಹೇಳುವುದು ಸರಿಯಲ್ಲ. ವಾಟರ್ ರೇಟ್ ಜಾಸ್ತಿಯಾಗಿದೆ, ಇದರ ಬಗ್ಗೆ ಒಂದು ಕಮಿಟಿಯನ್ನು ಅಪಾಯಿಂಟ್ ಮಾಡತಕ್ಕಂಥದ್ದು ಅವಶ್ಯಕ ಇದೆಯೇ ? ಇಲ್ಲಿ ಇಂದು ವಿಷಯ ಹೇಳುತ್ತೇನೆ. ಇದು ಅಟಾನಮಸ್‌ಬಾಡಿ, ಇಲ್ಲಿ ಒಂದು ಟೆಗ್ನಿಕಲ್ ಸಬ್ ಕಮಿಟಿ ಇದ್ದೂ, ಎಕ್ಸ್‌ಪರ್ಟ್ಸ್ ಕಮಿಟಿ ಇದ್ದೂ, ಬುದ್ಧಿವಂತರು ಇದರಲ್ಲಿ ಇದ್ದೂ ಮತ್ತೆ ಕಮಿಟಿಯನ್ನು ಏತಕ್ಕೆ ಮಾಡಬೇಕು? ಹಿಂದೆ ನಮ್ಮ ಮಿತ್ರರಾದಂಥ ಹಮಿದ್ ಷಾ ರವರು, "ಇವಕ್ಕೆಲ್ಲ ಎಷ್ಟೋ ದುಡ್ಡು ಕರ್ಚಾಗುತ್ತದೆ, ಇವನ್ನೆಲ್ಲ ಯಾವ ಲೆಕ್ಕದೊಳಗೆ ಸೇರಿಸಬೇಕು." ಎಂದು ಹೇಳುತ್ತಾರೆ. ಮತ್ತು "ಈ ಸಲಹೆಯನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲವೆಂದೂ" ಹೇಳುತ್ತಾರೆ. ತಮಗೆ ಗೊತ್ತಿರುವಹಾಗೆ, ೩೨ ಸಾವಿರ ಟನ್ ಫಾರಿನ್ ಸ್ಟೀಲ್ ಪ್ಲೇಟ್ಸ್ ಜಪಾನ್, ರೊಮೇನಿಯಾ, ಫ್ರಾನ್ಸ್ ದೇಶಗಳ ಕಡೆಯಿಂದ ಬಂದಿದೆ. ಇಂಡಿಯನ್ ಇಂಜಿನೀಯರ್ಸ್ ಇರಲಿಲ್ಲ ಎಂದು ಫಾರಿನ್ ಎಕ್ಸ್‌ಪರ್ಟ್ಸ್‌ನ್ನು ಬರಮಾಡಿಕೊಂಡು ಅವರಿಗೆ ಬೇಕಾದಷ್ಟು ಕನ್‌ಸಲ್‌ಟೇಷನ್ ಫೀಸ್ ಕೊಟ್ಟಿದ್ದಾರೆ. ಅದರ ಆವಶ್ಯಕತೆ ಇರಲಿಲ್ಲ. ನಮ್ಮಲ್ಲಿಯೇ ಯೋಗ್ಯರಾದಂಥ, ದಕ್ಷರಾದಂಥ, ಇಂಜಿನೀಯರುಗಳು ಇದ್ದಾರೆ. ಅವರಿಗೆ ಅನುಕೂಲ ಕಲ್ಪಿಸಿಕೊಟ್ಟಿದ್ದರೆ ಅವರೇ ಈ ಕೆಲಸ ಮಾಡುತ್ತಿದ್ದರು ಎಂದು ಈ ಮಾತನ್ನು ಹೇಳುತ್ತಿದ್ದೇನೆ. ಅನಂತರ ಟ್ಯಾಕ್ಸ್ ಬಗ್ಗೆ ಹೇಳುವುದಾದರೆ, ಹಿಂದಿನ ಕಾಲದಲ್ಲಿ ೧೫೦ ರೂಪಾಯಿ ಇದ್ದುದು, ಈಗ ೪ ಸಾವಿರ ರೂಪಾಯಿ ಟ್ಯಾಕ್ಸ್ ಕೊಡಬೇಕಾಗಿದೆ ಎಂದು ಹೇಳಿದ್ದಾರೆ. ತಮಗೆ ಗೊತ್ತಿದೆ, ಬೆಂಗಳೂರು ಪಟ್ಟಣ ಇದಕ್ಕೆ ಒಂದು ಇತಿಹಾಸವಿದೆ, ಚರಿತ್ರೆ ಇದೆ. ೧೯೫೦ರಲ್ಲಿ ಕೆಲವು ಬಾವಿಗಳು ಇದ್ದುವು, ಕೆರೆಗಳು ಇದ್ದುವು. ಆಗ ನೀರಿನ ಅಭಾವ ಕಂಡು ಬರುತ್ತಿರಲಿಲ್ಲ. ಅವುಗಳನ್ನೆಲ್ಲಾ ಕಾರ್ಪೊರೇಷನ್‌ನವರು ಮುಚ್ಚಿ ಬಿಟ್ಟರು. ಪಟ್ಟಣದಲ್ಲಿದ್ದ ಗ್ರೀನ್ ಬೆಲ್ಟ್ ತಮಗೆ ಗೊತ್ತಿರುವ ಹಾಗೆ ಮಾಯವಾಯಿತು. ಕಾವೇರಿ ಬರುವುದಕ್ಕೆ ಮುಂಚೆ ನೀರಿಗೆ ಎಷ್ಟು ಕಷ್ಟವಿತ್ತು, ಕಾರ್ಪೊರೇಷನ್ ವ್ಯಾನುಗಳಲ್ಲಿ ಮತ್ತು ಲಾರಿಗಳಲ್ಲಿ ನೀರನ್ನು ಕಳುಹಿಸುತ್ತಿದ್ದರು. ಇವತ್ತು ಎಲ್ಲಿ ನೋಡಿದರೂ ಕಾವೇರಿ ಮಯವಾಗಿದೆ. ಸಮಾನ್ಯಜನರಿಗೆ ನೀರು ಹೆಚ್ಚಾಗಿ ಸಿಗುತ್ತದೆ. ಮಿಲಿಟರಿ ಪಾಕೆಟ್ಸ್ ಅಂತ ಏನು ಇದೆ ಅವನ್ನು ಬೆಂಗಳೂರಿಂದ ಜಾಗ್ರತೆ ಸ್ಥಳಾಂತರ ಗೊಳಿಸಬೇಕಾಗಿದೆ. ಈ ತರಹ ಪಂಜಾಬಿನಲ್ಲಿ ಇರುತ್ತದೆ, ಹೈದರಾಬಾದ್‌ನಲ್ಲಿ ಇರುತ್ತದೆ, ಪೂನಾದಲ್ಲಿ ಇದೆ. ಹೀಗೆ ಮಿಲಿಟರಿ ಪಾಕೆಟ್ಸ್ ಇರುವುದರಿಂದ ಅವರಿಗೋಸ್ಕರವಾಗಿ ನೀರನ್ನು ನಿಲ್ಲಿಸುವುದಕ್ಕೆ ಆಗುವುದಿಲ್ಲ. ಯಾವ ರೇಟ್ ಇದೆ ಆ ರೇಟಿನಲ್ಲಿ ಅವರಿಂದ ಹಣವನ್ನು ತೆಗೆದುಕೊಳ್ಳಬೇಕು. ಇದನ್ನು ಒಂದು ಸಮನ್ವಯ ದೃಷ್ಟಿಯಿಂದ ನೋಡಬೇಕು. ಆದುದರಿಂದ ನೀರಿನ ದರ ಹೆಚ್ಚಾಗುವುದು ಸಹಜ. ಇನ್ನು ಎಷ್ಟು ಚೀಪ್ ಮಾಡುವುದಕ್ಕೆ ಯಾವರೀತಿ ಕಡಿಮೆ ಮಾಡುವುದಕ್ಕೆ ಸಾಧ್ಯ ಎಂದು ನೀವೇ ಸಲಹೆ ಕೊಡಿ. Cavery water schume should be treated as National project ಎಂಬುದಾಗಿ ಶ್ರೀ ಟಿ. ಆರ್. ಶಾಮಣ್ಣನವರು ಹೇಳುತ್ತಾರೆ. ಅವರು ನ್ಯಾಷನಲ್ ಪ್ರಾಜೆಕ್ಟ್ ತೆಗೆದುಕೊಳ್ಳಬೇಕು ಎಂದು ಹೇಳಿದರು. ಅದನ್ನು ಹೇಗೆ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಕೇಂದ್ರ ಸರ್ಕಾರದವರು ತೆಗೆದುಕೊಳ್ಳಬೇಕೇ ಹೊರತು, ನಮ್ಮ ಕೈಯಲ್ಲಿ ಅದನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ವಿಜಯನಗರ ಸ್ಟೀಲ್ ಪ್ಲಾಂಟ್ ಅಪ್ಪರ್‌ಕೃಷ್ಣ, ಕಾಳಿನದಿ ಪ್ರಾಜೆಕ್ಟ್–ಇದಕ್ಕೆಲ್ಲ ೫೬ ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ. ಇದಕ್ಕೆಲ್ಲ ಹಣ ಕೊಡಿಯೆಂದು ಕೇಳಿದರೆ ಯಾರು ಕೊಡುತ್ತಾರೆ? ಒಂದು ಸಂತೋಷದ ಸಮಾಚಾರವೆಂದರೆ ಸೆಕೆಂಡ್ ಲೈನ್ ಸುಮಾರು ೧೯೮೦ಕ್ಕೆ ಆಗುತ್ತದೆ, ಆಗ ಎನ್ನುತ್ತಾರೆ. ೩೩ ಮಿಲಿಯನ್ ಗ್ಯಾಲನ್ಸ್ ನೀರನ್ನು ಕೊಡುತ್ತೇನೆ ಎಂದ ಹೇಳುತ್ತಾರೆ. ೧೯೮೦ಕ್ಕೆ ಹೇಗೆ ಕಮ್ಮಿ ಬೀಳುತ್ತದೆ. ಡಬ್ಬಲ್ ಲೈನ್ಸ್ ಮಾಡುವುದಕ್ಕೆ ಇಟ್ಟುಕೊಂಡಿದ್ದಾರೆ. ಇದರಲ್ಲಿ ಏನು ಅನುಕೂಲವೆಂದು ಹೇಳಬಹುದು. ಇದರಿಂದ ಲೈನ್ ಕ್ಲೀಯರಿಂಗ್ ಮಾಡುವ ಪ್ರಮೇಯವಿರುವುದಿಲ್ಲ. ಅದೇರೀತಿಯಲ್ಲಿ ನೀರನ್ನು ತರುವ ನಿದರ್ಶನ ಮಾಡಲಾದ ಮತ್ತೊಂದು ಭಾರತದೇಶದಲ್ಲಿ ಇಲ್ಲ. ಇನ್ನೊಂದು ಸಂತೋಷದ ಸಮಾಚಾರವೆಂದರೆ ಕಾವೇರಿ ಪ್ರಾಜೆಕ್ಟ್‌ನ್ನು ಬೇರೆಯವರು ಬಂದು ಮೆಚ್ಚಿಕೊಂಡು ಹೋಗಿರುತ್ತಾರೆ, ಅಲ್ಲದೆ ಶ್ಲಾಘನೀಯ ಸಹ ಮಾಡಿದ್ದಾರೆ. ಮಧ್ಯಪ್ರದೇಶದವರು ಇದೇ ತರಹ ಮಾಡಬೇಕೆಂದು ನಮ್ಮ ಬ್ಲೂಪ್ರಿಂಟ್‌ನ್ನು ತೆಗೆದುಕೊಂಡು ಹೋಗಿರುತ್ತಾರೆ. ಸದ್ಯಕ್ಕೆ ನೀರಿನ ದರವನ್ನು ಕಡಿಮೆ ಮಾಡುವುದಕ್ಕೆ ಸಾಧ್ಯವಿಲ್ಲ, ಇನ್ನೊಂದು ಸೂವಿರೇಜ್ ಬಗ್ಗೆ ಮಾಡಲ್ ಲೈನ್ಸ್ ಸ್ಕೀಮ್ ಹಾಕಿಕೊಂಡಿದ್ದಾರೆ. ಚಳ್ಳಗಟ್ಟ ವೃಷಭಾವತಿ, ಕೋರಮಂಗಲ ನೀರನ್ನು ಕೂಡಿಸಿಟ್ಟು, ಶುದ್ಧಿಮಾಡಿ ಸೀವಿರೇಜ್ ವಾಟರನ್ನು ವ್ಯವಸಾಯಕ್ಕೆ ಉಪಯೋಗಿಸಿಕೊಳ್ಳುತ್ತಾರೆ. ಮೈಸೂರಿಗೆ ಹೋಗತಕ್ಕ ಮಾರ್ಗದಲ್ಲಿ ಗ್ರೀನ್ ಬೆಲ್ಟ್ ಗ್ರೀನ್ ಗ್ರಾಸ್‌ಗೆ ಇದು ಉಪಯೋಗವಾಗುತ್ತಿದೆ. ಕೋರಮಂಗಲ ಮತ್ತು ಚಳಗಟ್ಟ ರೈತರು ನೀರನ್ನು ಉಪಯೋಗಿಸಿ ಕೊಳ್ಳುತ್ತಿದ್ದಾರೆ. ವರ್ತೂರು, ಬೆಳ್ಳೂರು, ಈ ವಿಭಾಗಗಳಲ್ಲಿ ಪ್ರತಿಯೊಂದು ಔನ್ಸ್ ವಾಟರ್ ಉಪಯೋಗವಾಗುತ್ತಿದೆ. ಇದರಿಂದ ಗೊಬ್ಬರವೂ ಕೂಡ ಬರುತ್ತದೆ. ಸುಮಾರು ೫೫ ಸಾವಿರ ರೂಪಾಯಿಗಳು ಅಂದರೆ ೧೯೭೪-

-೭೫ನೇ ವರ್ಷದಲ್ಲಿ ಬಂದಿದೆ. ಇದೇ ತರಹ ಕಾಸ್ಟ್ Compost ಉತ್ಪತ್ತಿಯಾಗುತ್ತಿದೆ. ಗ್ಯಾಸ್ ''Gas-plant'' ಪ್ಲಾಂಟ್‌ಮಾಡಬೇಕು ಗ್ಯಾಸನ್ನು ಸಲಹೆ ಸರ್ಕಾರದಲ್ಲಿ ಇದೆ. ಇದು ಕನ್‌ಸಲ್‌ಟೇಷನ್ ಸ್ಟೇಜ್‌ನಲ್ಲಿ ಇದೆ. ಕಲ್‌ಕತ್ತಾದಲ್ಲಿ ಯಾವ ತರಹ ಗ್ಯಾಸ್ ಪ್ಲಾಂಟ್ ಉಪಯೋಗಿಸುತ್ತಾರೆ, ಫಾರಿನ್ ಕಂಟ್ರೀಸ್‌ನಲ್ಲಿ ಯಾವತರಹ ಗ್ಯಾಸನ್ನು ಉಪಯೋಗಿಸುತ್ತಾರೆ, ಎನ್ನುವುದನ್ನು ತಾವು ಹೋದಂಥ ಕಾಲದಲ್ಲಿ ನೋಡಿದ್ದೀರಿ, ನಾವು ಸಹ ಒಂದು ಗ್ಯಾಸ್ ಪ್ಲಾಂಟ್ ಮಾಡಬೇಕಾಗಿದೆ. ನಮ್ಮ ಮೇಲಿನ ಹೊರೆಯನ್ನು ಪ್ರತಿ ವರ್ಷ ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡಿಕೊಳ್ಳಬೇಕು. ಸಾಧ್ಯವಾದ ಮಟ್ಟಿಗೂ ಈ Scheme ಗೆ ಹಾಕಿರತಕ್ಕ ಹಣ ವಾಪಸ್ಸು ಪಡೆಯಲು ಪ್ರಯತ್ನಿಸಬೇಕು ಮತ್ತು ಸಾಲ ತಂದವರಿಗೆ ವಾಪಸ್ಸು ಕೊಡಬೇಕೆಂಬ ಜವಾಬ್ದಾರಿಯನ್ನು ಅರಿತುಕೊಳಬೇಕು.

ಇವತ್ತಿನ ದಿವಸ ನೀರಿನ ದರವನ್ನು ಕಡಿಮೆ ಮಾಡುವುದಕ್ಕೆ ಹೇಗೆ ಸಾಧ್ಯವಾಗುತ್ತದೆ ಎಂದು ನಾನು ಕೇಳುತ್ತೇನೆ. ಏಕೆಂದರೆ, ಪ್ರತಿ ವರ್ಷವೂ ಪ್ರತಿಯೊಂದು ವಸ್ತುಗಳ ಬೆಲೆ ಏರುತ್ತಾ ಇದೆ. ಇವೊತ್ತು ೩೬ ಕೋಟಿ ರೂಪಾಯಿ ಆಗುತ್ತದೆ ಎಂದು ಅಂದಾಜು ಮಾಡಿದರೆ, ಅದು ಸ್ವಲ್ಪ ದಿವಸದ ನಂತರ ೪೬ ಕೋಟಿ ರೂಪಾಯಿ ಆಗುತ್ತದೆ. ಆದ್ದರಿಂದ ಈಗಿನ ಪರಿಸ್ಥಿತಿಯಲ್ಲಿ ಬೆಂಗಳೂರು ನಗರದ ನೀರಿನ ದರವನ್ನು ಕಡಿಮೆ ಮಾಡುವುದಕ್ಕೆ ಆಗುವುದಿಲ್ಲ ಎಂದು ನಾನು ಒತ್ತಿ ಹೇಳುತ್ತೇನೆ. ಕೆಲವು ಸಂದರ್ಭಗಳಲ್ಲಿ ನೀರು ಸರಬರಾಜು ಬಗ್ಗೆ ಟೆಕ್ನಿಕಲ್ ಡಿಫೆಕ್ಟ್ಸಿ ಇರುತ್ತದೆ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ.

ಇನ್ನು ಪಬ್ಲಿಕ್ ಹೆಲ್ತ್ ಇಂಜಿನಿಯರ್ ಬಗ್ಗೆ ಹೇಳುವುದಾದರೆ, ಅಂತಹವರು ಇದ್ದರೆ ಈ ಇಲಾಖೆಗಳಲ್ಲಿ ಕೆಲಸ ಮಾಡಿದರೆ ಚೆನ್ನಾಗಿ ಇರುತ್ತದೆ ಎಂದು ಕಾಣುತ್ತದೆ. ಅಲ್ಲದೇ ಇಂತಹ ಕೆಲಸಗಳಿಗೆ ಫುಲ್ ಟೈಮ್ full time office ಆಫೀಸರ್‌ಗಳು ಇರಬೇಕು ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ನೆನ್ನೆಯ ದಿವಸದಿಂದ ವಿರೋಧಪಕ್ಷದ ಮಾನ್ಯ ಸದಸ್ಯರುಗಳು ಎಲ್ಲರನ್ನೂ ಸಾಯಿಸುವುದಕ್ಕೆ ಮಾಡಿದ್ದಾರು ಎಂದು ಹೇಳಿದರು, ಆದರೆ ಈ ಉದ್ದೇಶ ನಮಗಿಲ್ಲ ಎಂದು ಹೇಳುತ್ತೇನೆ. ಅಲ್ಲದೇ ಈ ಪಬ್ಲಿಕ್ ಹೆಲ್ತ್ ಇಂಜಿನಿಯರ್ ರವರ ಕೆಲಸ ಬಹಳ ಪ್ರಾಮುಖ್ಯವಾದುದಾಗಿದೆ. ಏತಕ್ಕೆಂದರೆ, ಕೆಲವು ಸಂದರ್ಭಗಳಲ್ಲಿ ವಾಟರ್ ಪೈಪ್‌ಗಳು ಬರ್‌ಸ್ಟ್ ಆಗುವುದು ಉಂಟು. ಅಂತಹ ಸಂದರ್ಭಗಳಲ್ಲಿ ವಾಟರ್ ತಡೆ ಹಿಡಿಯಲಾಗಿದೆ ಎಂದು ವ್ಯಾನ್‌ಗಳ ಮುಖಾಂತರ ಮತ್ತು ಪತ್ರಿಕೆಗಳ ಮುಖಾಂತರ, ಮತ್ತು ರೇಡಿಯೋ ಮುಖಾಂತರ ಪ್ರಸಾರ ಮಾಡುವುದನ್ನು ನಾವು ಕೇಳಿದ್ದೇವೆ. ಆದುದರಿಂದ ವಾಟರ್ ಸರಬರಾಜು ಮಾಡತಕ್ಕ ಸ್ಥಳಗಳಲ್ಲಿ ಜಾಗರೂಕತೆಯಿಂದ ಇರಬೇಕಾಗುತ್ತದೆ ಎಂದು ಹೇಳುತ್ತೇನೆ. ಈಗ ವಾಟರ್ ಸಪ್ಲೈಗಾಗಿ ಪೈಪುಗಳನ್ನು ಹಾಕಿಕೊಂಡು ಬಂದಿರುವುದನ್ನು ನೋಡಿದರೆ ಮನುಷ್ಯನ ಶರೀರದ ನರಗಳು ನುಲಿದುಕೊಂಡ ಹಾಗೆ ಕಾಣಿಸುತ್ತದೆ. ಈಗ ಪೈಪುಗಳನ್ನು ಹಾಕಬೇಕಾದರೆ, ಹೊಸ ಎಕ್ವಿಪ್‌ಮೆಂಟ್ ಸಹಾಯದಿಂದ ಪ್ರತಿಯೊಂದು ಪೈಪುಗಳನ್ನು ಟೆಸ್ಟ್ ಮಾಡಿ ಹಾಕುತ್ತಿದ್ದಾರೆ. ಈ ರೀತಿ ಸುಮಾರು ೧೦ ಸಾವಿರ ಪೈಪುಗಳನ್ನು ಟೆಸ್ಟ್ ಮಾಡಿರಬಹುದು ಎಂದು ಹೇಳುತ್ತೇನೆ. ಇದಕ್ಕೆ ಕಾರಣ ಏನು ಎಂದರೆ, ಈ ಪೈಪುಗಳು ಫೋರ್ಸ್ ಆಗಿ ಬರತಕ್ಕ ನೀರಿನ ಪ್ರೆಷರ್ ತಡೆಯುವುದಕ್ಕೆ ಸಾಧ್ಯವಿದೆಯೋ ಇಲ್ಲವೇ ಎನ್ನುವ ಕಾರಣದಿಂದ ಪ್ರತಿಯೊಂದು ವಾಟರ್ ಪೈಪನ್ನು ಟೆಸ್ಟ್ ಮಾಡಿದ್ದಾರೆ. ಯಾವರೀತಿ ಮಾಡಿದರೂ ಕೂಡ ಟೀಕೆ ಟಿಪ್ಪಣಿಗಳಂತೂ ಬಂದೇ ಬರುತ್ತಿರುತ್ತವೆ. ಮಾನ್ಯ ಶಾಮಣ್ಣನವರು ಈಗ ನೀರಿನ ದರದ ಬಗ್ಗೆ ಏನೊಂದು ನಿರ್ಣಯ ತಂದಿದ್ದಾರೆ ಇದನ್ನು ತರತಕ್ಕ ಪ್ರಮೇಯವಿರಲಿಲ್ಲ, ಇದಕ್ಕೆ ಯಾವ ಒಂದು ಕಮಿಟಿಯು ಬೇಕಾಗಿಲ್ಲ ಎಂದು ಹೇಳುತ್ತೇನೆ. ಅಲ್ಲದೇ ಈಗ ಇರತಕ್ಕ ವಾಟರ್ ಸಪ್ಲೈ ಬೋರ್ಡ್ ಅವರಿಗೆ ನಡೆಸತಕ್ಕ ಶಕ್ತಿ ಇದೆ ಎಂದು ಹೇಳುತ್ತೇನೆ. ಈಗ ಬೇರೆ ಒಂದು ಕಮಿಟಿ ಮಾಡಿ ಅದಕ್ಕೆ ಬೇರೆ ಹಣ ಏತಕ್ಕೆ ಖರ್ಚುಮಾಡಬೇಕು ಎಂದು ಕೇಳುತ್ತೇನೆ? ಈಗ ಎಸ್ಟಿಮೇಟ್ ಕಮಿಟಿ ಇದೆ, ಪಬ್ಲಿಕ್ ಅಕೌಂಟ್ಸ್ ಕಮಿಟಿ ಇದೆ, ಅಲ್ಲದೇ ಆಡಿಟ್ ರಿಪೋರ್ಟ್ ಬೇರೆ ಬರುತ್ತದೆ. ಇಷ್ಟೆಲ್ಲಾ ಇದ್ದಮೇಲೆ ಈ ಕಮಿಟಿ ಆಗತಕ್ಕ ಅವಶ್ಯಕತೆ ಏನು ಇದೆ ಎಂದು ಯೋಚನೆ ಮಾಡಬೇಕು. ಮತ್ತೇ ಈ ಡೊಮೆಸ್ಟಿಕ್ ಮತ್ತು ನಾನ್ ಡೊಮೆಸ್ಟಿಕ್ ಏನು ಇದೆ ಇದರ ಬಗ್ಗೆ ಜಾಗರೂಕರಾಗಿರಬೇಕು. ಇದರಲ್ಲಿ ಹಣ ಸೋರಿ ಹೋಗುತ್ತಾ ಇರಬಹುದು, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಈಗ ಏನಾಗಿದೆ ಎಂದರೆ, ಕೆಲವು ಸಂದರ್ಭಗಳಲ್ಲಿ ದೊಡ್ಡ ದೊಡ್ಡ ಹೋಟಲುಗಳಲ್ಲಿ, ಮತ್ತೆ ಇಂಡಸ್ಟ್ರಿಯಲ್ ಫರಮ್‌ಗಳಲ್ಲಿ ವಾಟರ್ ಬೋರ್ಡ್‌ನವರು ಫಿಕ್ಸ್ ಮಾಡಿರತಕ್ಕ ಮೀಟರ್ ಬೋರ್ಡ್‌ನ್ನು ಕೆಡಿಸಿ, ನೀರನ್ನು ಉಪಯೋಗ ಮಾಡಿಕೊಳ್ಳುತ್ತಾರೆ. ಅಂತಹ ಕಡೆಗಳಲ್ಲಿ ಚೆಕ್ ಮಾಡುವುದಕ್ಕೋಸ್ಕರ ಒಂದು ಸ್ಪೆಷಲ್ ಸ್ಟಾಫ್ ಇಟ್ಟು ಅದರ ಬಗ್ಗೆ ಪರಿಶೀಲನೆ ಮಾಡುವುದಕ್ಕೆ ಅನುಕೂಲವಾಗಬೇಕು ಎಂದು ನಾನು ಸಲಹೆ ಮಾಡುತ್ತೇನೆ. ಈಗ ಮಾನ್ಯ ಶಾಮಣ್ಣನವರು ತಂದಿರತಕ್ಕ ನಿರ್ಣಯವನ್ನು ನಾನು ಸಂಪೂರ್ಣವಾಗಿ ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಈಗ ನಾವು ಮಾಡುತ್ತಾ ಇರತಕ್ಕ ಕ್ರಮ ಸರಿಯಾಗಿ ಇದೆ ಎಂದು ಹೇಳುತ್ತೇನೆ. ಇನ್ನೊಂದು ವಿಷಯ ಹೇಳಬೇಕು ಎಂದರೆ, ನಮ್ಮ ಬಡವರು ಎಲ್ಲಿ ಇದ್ದಾರೆ, ಮತ್ತು ಸ್ಲಮ್ ಏರಿಯಾಗಳಲ್ಲಿ ಏನು ಜನರು ಇದ್ದಾರೆ ಅಂತಹ ಸ್ಥಳಗಳಲ್ಲಿ ಈ ನೀರಿನ ಸೌಲಭ್ಯ ಹೆಚ್ಚು ಒದಗಿಸಬೇಕು ಮತ್ತು ಉಚಿತವಾಗಿ ಕೊಡ

ಬೇಕು ಎಂದು ಹೇಳುತ್ತೇನೆ. ಈಗ ನಾವು ಕಾವೇರಿ ನೀರನ್ನು ತರುವುದಕ್ಕೆ ಖರ್ಚುಮಾಡಿರುವ ಹಣ ತೀರಿಸಬೇಕಾಗಿದೆ. ಅಲ್ಲದೇ ನಾನು ಮೊದಲೇ ಹೇಳಿದ್ದೇನೆ, ೧೯೮೦ ರಲ್ಲಿ ಮತ್ತೆ ನೀರಿನ ತೊಂದರೆ ಬರುತ್ತದೆ ಎಂದು ಅದಕ್ಕೆ ನಾವು ಹಣ ಒದಗಿಸಿಕೊಳ್ಳಬೇಕಾದ್ದು ಇದೆ. ಇಷ್ಟು ಹೇಳಿ ಅಧ್ಯಕ್ಷರು ನಾಲ್ಕು ಮಾತುಗಳನ್ನು ಹೇಳುವುದಕ್ಕೆ ಕಾಲಾವಕಾಶ ಮಾಡಿಕೊಟ್ಟಿದ್ದರಿಂದ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಹೆಚ್. ಡಿ. ದೇವೇಗೌಡ (ಹೊಳೆನರಸೀಪುರ). —ಮಾನ್ಯ ಸಭಾಧ್ಯಕ್ಷಣಿಯರೇ, ವಾಟರ್ ಸಪ್ಲೈ ಅಂಡ್ ಸಿವರೇಜ್ ಬೋರ್ಡ್‌ನವರು ಬೆಂಗಳೂರಿನ ನಾಗರೀಕರಿಗೆ ನೀರನ್ನು ಒದಗಿಸುತ್ತಿದ್ದಾರೆ, ಅದಕ್ಕೆ ಒಂದು ತಜ್ಞರ ಸಮಿತಿ ನೇಮಕ ಮಾಡಿ ನೀರಿನ ದರವನ್ನು ನಿಗಧಿಮಾಡಬೇಕು ಎನ್ನುವ ಬಗ್ಗೆ ಶ್ರೀಮಾನ್ ಶಾಮಣ್ಣನವರು ಸಭೆಯ ಮುಂದೆ ಏನು ಒಂದು ಖಾಸಗಿ ನಿರ್ಣಯವನ್ನು ಮಾಡಿಸಿದ್ದಾರೆ ಇದನ್ನು ನಾನು ಮೊದಲನೆಯದಾಗಿ ಅನುಮೋದಿಸುತ್ತೇನೆ. ಇದರ ಬಗ್ಗೆ ನಾನು ಕೆಲವು ವಿಚಾರಗಳನ್ನು ವ್ಯಕ್ತಪಡಿಸುವುದಕ್ಕೆ ಪೂರ್ವಭಾವಿಯಾಗಿ ಸರ್ಕಾರಕ್ಕೆ ಕೆಲವು ಸೂಚನೆಗಳನ್ನು ಕೊಡಲಿಕ್ಕೆ ಇಚ್ಛೆಪಡುತ್ತೇನೆ. ಈಗ ನಾನು ಕೆಲವು ಪ್ರಾಮುಖ್ಯವಾದ ವಿಚಾರಗಳನ್ನು ಪ್ರಸ್ತಾಪ ಮಾಡುತ್ತೇನೆ. ಅದರ ಬಗ್ಗೆ ಈ ಸಭೆಯಲ್ಲಿ ಎಲ್ಲಾ ವಿವರಗಳನ್ನು ಒದಗಿಸಬೇಕು ಎಂದು ಪ್ರಥಮದಲ್ಲೇ ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ. ಏತಕ್ಕೆಂದರೆ, ಅಡ್ಮಿನಿಸ್ಟ್ರೇಷನ್ ರಿಪೋರ್ಟ್ ಮೇಲೆ ಚರ್ಚೆಯಾಗಲಿಕ್ಕೆ ಸಾಧ್ಯವಾಗುವುದಿಲ್ಲ. ಆದಕಾರಣ, ನಾನು ಈ ಖಾಸಗಿ ನಿರ್ಣಯದ ಮೇಲೆ ಮಾತನಾಡುವಾಗ ಎಲ್ಲಾ ವಿಷಯಗಳನ್ನು ಬರೆದುಕೊಂಡು ನಾನು ಹೇಳತಕ್ಕ ಪ್ರತಿ ವಿಷಯಕ್ಕೂ ಪೂರ್ಣ ಸಮಜಾಯಿಷಿ ಕೊಡಬೇಕು ಎಂದು ಮಾನ್ಯ ಮಂತ್ರಿಗಳಲ್ಲಿ ಸವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇವೊತ್ತಿನ ದಿವಸ ಬೆಂಗಳೂರಿನ ನಾಗರೀಕರಿಗೆ ನೀರನ್ನು ಒದಗಿಸತಕ್ಕ ಹೊಣೆಗಾರಿಕೆಯನ್ನು ರಾಜ್ಯ ಸರ್ಕಾರದವರು ವಹಿಸಿಕೊಂಡಿದ್ದಾರೆ. ಇವೊತ್ತು ಈ ಮನೆಯಲ್ಲಿ ಒಂದು ತಪ್ಪು ಅಭಿಪ್ರಾಯ ಬರತಕ್ಕ ರೀತಿಯಲ್ಲಿ ಮಾತನಾಡಿದ್ದು, ಅದು ಸರಿಯಲ್ಲ, ಇವೊತ್ತಿನ ದಿವಸ ಬೆಂಗಳೂರಿನ ನಾಗರೀಕರು ತಮ್ಮನ್ನು ಪುಕ್ಕಟ್ಟೆ ನೀರನ್ನು ಕೊಡಿ ಎಂದು ಯಾರು ಕೇಳಲಿಕ್ಕೆ ಬಂದಿಲ್ಲ. ಇವೊತ್ತು ಬೆಂಗಳೂರಿಗೆ ನೀರನ್ನು ಒದಗಿಸತಕ್ಕ ಕಾಲದಲ್ಲಿ ಅಪ್ರಕೃತವಾದ ವೆಚ್ಚದ ಹೊರೆಯನ್ನು ನಮ್ಮ ಮೇಲೆ ಹಾಕಬೇಡಿ ಎಂದು ಹೇಳುತ್ತೇನೆ. ಇವೊತ್ತು ಯೋಗ್ಯವಾದಂಥ ಒಂದು ನಿರ್ಣಯವನ್ನು ತೆಗೆದುಕೊಳ್ಳಬೇಕಾಗಿದೆ. ಈ ಒಂದು ಯೋಜನೆಯನ್ನು ಕಾರ್ಯರೂಪಕ್ಕೆ ತರತಕ್ಕ ಕಾಲದಲ್ಲಿ ಸರ್ಕಾರದ ಒಂದು ಅಜಾಗರೂಕತೆಯಿಂದ ಯಾವ ಒಂದು ಅಪ್ರಕೃತ ವೆಚ್ಚ ತಗಲಿದೆ ಅದರ ಪರಿಣಾಮವಾಗಿ ಇವೊತ್ತು ಜನತೆಯ ಮೇಲೆ ನೀರಿನ ತೆರಿಗೆ ಬೀಳುತ್ತಿದೆ ಎನ್ನುವ ವಾದವನ್ನು ಮುಂದೊಡ್ಡಿ ಇದಕ್ಕೆ ಒಂದು ಪ್ರತ್ಯೇಕ ತಜ್ಞರ ಸಮಿತಿ ನೇಮಕ ಮಾಡಬೇಕೆಂದು ಜನತಾ ಪ್ರತಿನಿಧಿಯಾಗಿರತಕ್ಕ ಮಾನ್ಯ ಶಾಮಣ್ಣನವರು ಈ ಒಂದು ನಿರ್ಣಯವನ್ನು ಮಂಡಿಸಿದ್ದಾರೆ. ಇವೊತ್ತು ಬೆಂಗಳೂರಿನ ನಾಗರೀಕರಿಗೆ ನೀರನ್ನು ಒದಗಿಸುವುದಕ್ಕೆ ಸುಮಾರು ೩೬ ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದಾರೆ, ಈ ಯೋಜನೆ ೧೯೭೧ಕ್ಕೆ ಮುಗಿಯಬೇಕಾಗಿತ್ತು ಎಂದು ಮೊದಲೇ ಒಂದು ಅಂದಾಜು ಆಗಿತ್ತು. ಅದು ಆಗದೇ ಇರುವುದಕ್ಕೆ ಕಾರಣಗಳು ಏನೇ ಇರಲಿ ಅವುಗಳ ಬಗ್ಗೆ ಈಗ ನಾನು ಚರ್ಚೆ ಮಾಡಲಿಕ್ಕೆ ಹೋಗುವುದಿಲ್ಲ.

3-30 P.M.

ಮೊದಲು ಆಗಿದ್ದಂಥ ನಿರ್ಣಯದ ಆಧಾರದ ಮೇಲೆ ಮತ್ತು ಟೆಂಡರಿನ ಆಧಾರದ ಮೇಲೆ ಈ ಒಂದು ಯೋಜನೆ ೩೦ ಕೋಟಿ ರೂಪಾಯಿಗಳಿಗೆ ಪೂರ್ಣಗೊಳ್ಳಬೇಕಾಗಿತ್ತು. ಆದರೆ, ಕಳೆದ ಮೂರು ವರ್ಷಗಳಲ್ಲಿ ಈ ಯೋಜನೆಯ ಅಂದಾಜು ವೆಚ್ಚವು ಎರಡು ಸಲ ಮಾರ್ಪಾಡು ಆಗಿ, ಸುಮಾರು ೬ ಕೋಟಿ ರೂಪಾಯಿಗಳಷ್ಟು ಹಣವು ಪುನರ್‌ವಿಮರ್ಶಿಸಿ ಅಂದಾಜು ವೆಚ್ಚವಾಗಿ ಬಿಟ್ಟಿದೆ ಆದುದರಿಂದ, ಇವೊತ್ತಿನ ದಿವಸ ಬೆಂಗಳೂರು ನಾಗರೀಕರ ಮೇಲೆ ನೀರಿನ ತೆರಿಗೆಯ ಹೊರೆಯನ್ನು ಹೇರತಕ್ಕಂಥ ಮತ್ತು ಒತ್ತಡವನು ಹಾಕತಕ್ಕಂಥ ಸನ್ನಿವೇಶದಲ್ಲಿ ಸರ್ಕಾರ ಇದೆ. ೧೯೬೭-೬೮ರಲ್ಲಿ ಈ ಯೋಜನೆಯನ್ನು ಕಾರ್ಯರೂಪಕ್ಕೆ ತರಬೇಕೆಂದು ಯೋಜನೆ ಮಾಡಿದಾಗ, ಮೂವತ್ತು ಮಿಲಿಯನ್ ಗ್ಯಾಲನ್ ನೀರನ್ನು ಕಾವೇರಿ ನದಿಯಿಂದ ಒದಗಿಸುವುದಕ್ಕೆ ಸುಮಾರು ೨೨ ಕೋಟಿ ರೂಪಾಯಿಗಳಲ್ಲಿ ಈ ಒಂದು ಕೆಲಸವನ್ನು ಪೂರೈಸಿಕೊಡುತ್ತೇವೆ ಎಂದು ಒಂದು ಟೆಂಡರ್ ಕೂಡ ಬಂದಿತ್ತು. ನಾನು ಈ ವಿಷಯವನ್ನು ಪ್ರಸ್ತಾಪ ಮಾಡುವಾಗ, ಹಿಂದಿನ ಸರ್ಕಾರವನ್ನೂ ಕೂಡ ಒಳಗೊಂಡು ಹೇಳುತ್ತಿದ್ದೇನೆ. ಆದರೆ, ಬೋರ್ಡಿನವರು ಒಪ್ಪಿಕೊಂಡಿರತಕ್ಕ ಒಂದು ನಿರ್ಣಯದ ಆಧಾರದ ಮೇಲೆ, ಈ ಒಂದು ಯೋಜನೆ ೩೦ ಕೋಟಿ ರೂಪಾಯಿ ವೆಚ್ಚದಲ್ಲಿ ಪೂರ್ಣಗೊಳ್ಳಬೇಕಾಗಿತ್ತು. ಪ್ರೀ ಸ್ಟ್ರೆಸ್ಡ್ ಪೈಪ್ಸ್ ಬಗ್ಗೆ ಈ ಹಿಂದೆಯೇ ಸಾಕಷ್ಟು ಚರ್ಚೆಯಾಗಿದೆ. ಹಿಂದಿನ ಮುಖ್ಯ ಮಂತ್ರಿಗಳು, ಇದರ ಬಗ್ಗೆ ಸಾಕಷ್ಟು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಆದರೆ, ಈ ಒಂದು ಯೋಜನೆಗೆ ಇನ್ನೂ ೬ ಕೋಟಿ ರೂಪಾಯಿಗಳು ಹೆಚ್ಚು ವೆಚ್ಚವಾಗಿರುವ ಬಗ್ಗೆ ಕಾರಣ ವನ್ನು ಈ ಮಾನ್ಯ ಸಭೆಯೇ ವಿಮರ್ಶಿಸಬೇಕಾಗುತ್ತದೆ. ನಾನು ಪ್ರಪ್ರಥಮದಲ್ಲಿ ಹೇಳಬಯಸುವುದೇ ನೆಂದರೆ ಕಾವೇರಿ ಯೋಜನೆಗೆ ತಗುಲಿರಕ್ಕ ವೆಚ್ಚದ ಅಂದಾಜಿನ ಮೇಲೆ, ನೀರಿನ ದರವದ್ನು ನಿಗದಿ ಮಾಡುವುದಾದರೆ, ಪ್ರತಿ ಸಾವಿರ ಗ್ಯಾಲನ್‌ಗೆ ೧೧ ರೂಪಾಯಿ ವೆಚ್ಚ ತಗಲುತ್ತದೆ ಎಂಬುದನ್ನು ತಾವು ಮರೆಯಬಾರದು. ತಿಪ್ಪಗೊಂಡನಹಳ್ಳಿ ಜಲಾಶಯದಿಂದ ತರತಕ್ಕ ನೀರಾಗಲೀ ಅಥವಾ ಅರ್ಕಾವತಿ ನದಿಯಿಂದ ತರತಕ್ಕ ನೀರಾಗಲೀ—ಒಟ್ಟು ಸರಾಸರಿ ದರವನ್ನು ನಿಗದಿ ಮಾಡುವುದಾದರೆ, ಸುಮಾರು ೨-೩-೪ ರೂಪಾಯಿಗಳು ಪ್ರತಿ ಸಾವಿರ ಗ್ಯಾಲನ್‌ಗೆ ಆಗಬಹುದು. ಆದರೆ, ಕಾವೇರಿ ನದಿಗೆ ನಾವು ಯೋಜನೆಯನ್ನು ನಿರ್ಮಾಣ ಮಾಡಿ, ನೀರನ್ನು ಬೆಂಗಳೂರು ನಗರಕ್ಕೆ ಒದಗಿಸಲಿಕ್ಕೆ ಪ್ರಯತ್ನ ಮಾಡಿದಾಗ, ಪ್ರತಿ ಒಂದು ಸಾವಿರ ಗ್ಯಾಲನ್ನಿಗೆ ೧೧ ರೂಪಾಯಿಗಳಿಗಿಂತ ಕಡಿಮೆ ಇಲ್ಲದೇ ಬೀಳುತ್ತದೆ ಎಂದು ನಾನು ತಮ್ಮಲ್ಲಿ ಪ್ರಪ್ರಥಮವಾಗಿ ಹೇಳುತ್ತೇನೆ.

ಮಾನ್ಯ ಸದಸ್ಯರಾದ ಶ್ರೀಮಾನ್ ಶಾಮಣ್ಣನವರು ನೀರಿನ ದರವನ್ನು ನಿಗದಿ ಮಾಡುವ ಬಗ್ಗೆ ಒಂದು ತಜ್ಞರ ಸಮಿತಿಯನ್ನು ಮಾಡಬೇಕೆಂದು ಕೇಳಿದ್ದಾರೆ. ನಾನು, ಈ ಯೋಜನೆ ಪ್ರಾರಂಭವಾದ ದಿವಸದಿಂದ ಹಿಡಿದು ಮುಕ್ತಾಯ ಗೊಂಡಿರತಕ್ಕ ಕೊನೆಯ ಹಂತದವರೆಗೂ ಪೂರ್ಣವಾದ ತನಿಖೆಯಾಗ ಬೇಕೆಂದು ಹೇಳುತ್ತೇನೆ. ಪ್ರೀ ಸ್ಟ್ರೆಸ್ಡ್ ಪೈಪ್ಸ್ ಹಾಕಿರತಕ್ಕ ಘಟನೆಯಾಗಲೀ, ಅಥವಾ ಯಾವುದೇ ಘಟನೆಯಾಗಲೀ ಇದರ ಬಗ್ಗೆ ನಿಷ್ಪಕ್ಷಪಾತವಾದ ಒಂದು ತನಿಖೆಯಾಗಬೇಕಾಗಿದೆ ೩೬ ಕೋಟಿ ರೂಪಾಯಿಗಳ ಈ ಒಂದು ಯೋಜನೆಯಲ್ಲಿ ನಡೆದಿರತಕ್ಕ ಅವ್ಯವಹಾರಗಳು ಬೆಳಕಿಗೆ ಬರಬೇಕಾದರೆ, ಈ ಯೋಜನೆಗೆ ಯೋಗ್ಯವಾದಂಥ ಮತ್ತು ನಿಖರವಾದಂಥ ವೆಚ್ಚ ಎಷ್ಟು ಎಂಬುದು ಬೆಳಕಿಗೆ ಬರಬೇಕಾದರೆ, ಇವತ್ತಿನದಿವಸ ಪ್ರಾಮಾಣಿಕವಾದಂಥ ಒಂದು ತನಿಖೆ ಆಗಬೇಕಾಗಿದೆ. ಅದಕ್ಕಾಗಿ ನಾನು ಸಲಹೆ ಮಾಡು ವುದೇನೆಂದರೆ, ಈ ಒಂದು ತನಿಖಾ ಸಮಿತಿಗೆ ಒಬ್ಬ ಹೈಕೋರ್ಟ್ ನ್ಯಾಯಾಧೀಶರೊಬ್ಬರು ಅಧ್ಯಕ್ಷರಾಗಿರ ಬೇಕು; ನಿವೃತ್ತ ಅಕೌಂಟೆಂಟ್ ಜನರಲ್ (ಅವರು ಬೇರೆ ಯಾವುದೇ ರಾಜ್ಯದವರಾಗಿರಬಹುದು) ಅವರು ಸಮಿತಿಯ ಸದಸ್ಯರಾಗಿರಬೇಕು; ಕರ್ನಾಟಕ ರಾಜ್ಯದವರಲ್ಲದ ಒಬ್ಬರು ಟೆಕ್ನಿಕಲ್ ಎಕ್ಸ್‌ಪರ್ಟ್ ಅವರು ಸದಸ್ಯರಾಗಿರಬೇಕು. ಹಿಂದೆ ಮೈಸೂರು ಜಿಲ್ಲೆಯಲ್ಲಿ ಮಧ್ಯಮ ನೀರಾವರಿ ಯೋಜನೆಯು ಒಡೆದು ಹೋದಂಥ ಕಾಲದಲ್ಲಿ ಮಹಾರಾಷ್ಟ್ರ ರಾಜ್ಯದ ಒಬ್ಬ ತಜ್ಞರನ್ನು ನೇಮಕ ಮಾಡಿ ವಿಚಾರಣೆ ಮಾಡಿದ್ದೇವೆ. ಅದೇ ರೀತಿ ಹೊರಗಡೆ ರಾಜ್ಯದಿಂದ, ಒಬ್ಬ ಯೋಗ್ಯರಾಗಿರತಕ್ಕ ಒಬ್ಬರು ನಿವೃತ್ತ ಇಂಜಿನಿಯರ್, ಒಬ್ಬರು ನಿವೃತ್ತ ಅಕೌಂಟೆಂಟ್ ಜನರಲ್ ಮತ್ತು ಒಬ್ಬರು ಹೈಕೋರ್ಟ್ ನ್ಯಾಯಾಧೀಶರು—ಈ ಮೂರು ಜನರನ್ನೊಳಗೊಂಡಂತೆ ಒಂದು ಸಮಿತಿಯನ್ನು ಮಾಡಿ, ಈ ಒಂದು ಯೋಜನೆ ಪ್ರಾರಂಭವಾದ ದಿವಸ ದಿಂದ ಇವತ್ತಿನವರೆಗೂ ಕೂಲಂಕಷವಾದ ತನಿಖೆಯಾಗಬೇಕಾಗಿದೆ ಎಂದು ನಾನು ಈ ಸಂದರ್ಭದಲ್ಲಿ ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಇಲ್ಲಿ ಯಾವುದೇ ಸರಕಾರವಾಗಲಿ, ಯಾರೇ ಅಧಿಕಾರದಲ್ಲಿರಲಿ—ಅದು ನನಗೆ ಪ್ರಾಮುಖ್ಯವಲ್ಲ ಎಂದು ಈ ಸಂದರ್ಭದಲ್ಲಿ ಸೂಚನೆ ಕೊಡಬಯಸುತ್ತೇನೆ. ಇವತ್ತಿನ ದಿವಸ ಏನಾಗಿದೆ ಎಂದರೆ, ೩೬ ಕೋಟಿ ರೂಪಾಯಿಗಳ ವೆಚ್ಚ ಏನು ಈ ಯೋಜನೆಗೆ ಆಗಿದೆ ಅದನ್ನು ಸರಿಯಾಗಿ ಲೆಕ್ಕ ಇಡತಕ್ಕ ಬಗ್ಗೆ ಬೋರ್ಡಿನಲ್ಲಿ ಅವಕಾಶವೇ ಇಲ್ಲ. ಆದರೆ, ಇದನ್ನು ತನಿಖೆ ಮಾಡತಕ್ಕ ಅಧಿಕಾರ ಇವತ್ತಿನ ದಿವಸ ಅಕೌಂಟೆಂಟ್ ಜನರಲ್ ಅವರಿಗೆ ಇಲ್ಲ. ಇಂಟರ್ನಲ್ ಆಡಿಟರ್ಸ್ ಇದ್ದಾರೆ; ಅಲ್ಲಿ ಸ್ಟೇಟ್ ಅಕೌಂಟ್ ಡಿಪಾರ್ಟ್‌ಮೆಂಟಿನವರು ಆಡಿಟ್ ಮಾಡುವುದಕ್ಕೆ ವ್ಯವಸ್ಥೆ ಇದೆ. ಆ ಅಕೌಂಟ್ಸ್‌ನ್ನು ಸರಿಯಾದ ರೀತಿಯಲ್ಲಿ ಪರಿಶೀಲನೆ ಏತಕ್ಕೆ ಮಾಡಬೇಕಾಗಿದೆ ಎಂಬುದಕ್ಕೆ ಒಂದು ನಿದರ್ಶನ ವನ್ನು ಕೊಟ್ಟರೆ ಬಹಳ ಒಳ್ಳೆಯದಾಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ತಮ್ಮ ಪಕ್ಷದ ಮಂತ್ರಿಗಳೇ ನಡೆಸುತ್ತಿರುವ ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ದಿನಾಂಕ ೭-೬-೧೯೭೪ ರಲ್ಲಿ ವರದಿ ಯಾಗಿರುವುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಅದರಲ್ಲಿ ಹೀಗೆ ಇದೆ —

> "ಕೆಲಸವಿಲ್ಲವೆಂದು ಕೆಲಸ ಹುಡುಕಿ ಮಾಡುವ ಆತುರ ಇವರಿಗೆ. ಬಾಕಿ ವಸೂಲಿ ಕಾರ್ಯದಲ್ಲಿ ತರಾತುರಿ, ಇದರಿಂದಾಗಿ ವಸೂಲಾದ ಸುಮಾರು ಒಂದೂವರೆ ಕೋಟಿ ರೂಪಾಯಿಗಳಿಗೂ ಹೆಚ್ಚಿನ ಹಣ ಯಾವ ಲೆಕ್ಕದೆಂಬ ಗೊಂದಲ ಇದುವರೆಗೆ ಇದು ಯಾವ ಲೆಕ್ಕದ್ದು ಎಂಬುದನ್ನು ಪತ್ತೆ ಹಚ್ಚಲಾಗಿಲ್ಲ. ಈ ಹಣ ಈಗ ಬ್ಯಾಂಕಿನಲ್ಲಿ ಅನಾಥ"

ಮಾನ್ಯ ಅಧ್ಯಕ್ಷರೇ, ತಾವು ಇದನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ. ತಮ್ಮ ಮುಖಾಂತರ ಈ ವಿಷಯವನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಇವತ್ತು ಬ್ಯಾಂಕಿನಲ್ಲಿ ಇರತಕ್ಕ ಒಂದೂವರೆ ಕೋಟಿ ರೂಪಾಯಿಗಳ ಹಣ ಯಾವ ಲೆಕ್ಕದ ಹಣ ಎನ್ನತಕ್ಕದ್ದನ್ನು ವಿಮರ್ಶೆ ಮಾಡುವುದಕ್ಕೆ ಸಾಧ್ಯವಿಲ್ಲ ಎಂದರೆ, ೩೦ ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿರತಕ್ಕ ಈ ಯೋಜನೆಯಲ್ಲಿ ಎಷ್ಟು ಅವ್ಯವಹಾರ ಗಳು, ಎಷ್ಟು ಅಕ್ರಮಗಳು ನಡೆದಿದೆ ಎಂಬುದನ್ನು ಊಹಿಸುವುದಕ್ಕೆ ಸಾಧ್ಯವೇ ಎಂದು ನಾನು ಈ

ಸಂದರ್ಭದಲ್ಲಿ ಕೇಳಬಯಸುತ್ತೇನೆ. ಇದಕ್ಕೆ ಬೆಂಬಲವಾಗಿ ಮತ್ತೊಂದು ಮಾತನು ತಮ್ಮ ಮುಖಾಂತರ ಸಭೆಯ ಗಮನಕ್ಕೆ ತರಬಯಸುತ್ತೇನೆ. ಇಂಥಾ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಸಭೆಯಲ್ಲಿ ಇರಬೇಕಾಗಿತ್ತು, ಈ ಒಂದು ನಿರ್ಣಯದ ಮೇಲೆ ಮಾತನಾಡತಕ್ಕ ಕಾಲದಲ್ಲಿ ನಾನು ಮುಖ್ಯ ಮಂತ್ರಿಗಳ ಮೇಲೆ ನೇರವಾದಂಥ ಅಪಾದನೆಗಳನ್ನು ಮಾಡತಕ್ಕದ್ದು ಉಂಟು. ೧೯೬೫ ರಿಂದ ೧೯೭೪ ರವರೆಗೆ ಇದರ ಡಿ.ಸಿ.ಬಿ ಲೆಕ್ಕ ಏನು ಇದೆ, ಅದರಲ್ಲಿ ಸುಮಾರು ೪೨,೪೦,೯೭೦ ರೂಪಾಯಿಗಳು ಏರುಪೇರು ಆಗಿದೆ. ಈಗ ಡಿ. ಸಿ. ಬಿ, ಲೆಕ್ಕ ನನ್ನ ಕೈಯಲ್ಲೇ ಇದೆ. ಇದು ಅವರೇ ತಯಾರು ಮಾಡಿರತಕ್ಕ ಲೆಕ. ೧೯೬೫ ರಿಂದ ೧೯೭೪ರ ವರೆಗೆ ಅವರು ತಯಾರು ಮಾಡಿರತಕ್ಕ ಲೆಕ್ಕದಲ್ಲಿ ಸುಮಾರು ೪೨,೪೦,೯೭೦ ರೂಪಾಯಿಗಳು ವ್ಯತ್ಯಾಸವಾಗಿದೆ, ತಾರತಮ್ಯವಾಗಿದೆ. ಹೀಗಿರುವಾಗ, ಬೆಂಗಳೂರು ನಾಗರೀಕರಿಗೆ ಈ ಯೋಜನೆಗಾಗಿ ೩೬ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ, ಅದನ್ನು ನೀವು ಕೊಡಬೇಕು ಎಂದು ಹೇಳತಕ್ಕದ್ದರಲ್ಲಿ ನನಗೂ ಕೂಡ ಸಮಾಧಾನವಾಗಬೇಕಾಗುತ್ತದೆ. ತಾವೇನು ಇದನ್ನು ಪುಕ್ಕಟೆ ಯಾಗಿಯೇ ಕೊಡಿ ಎಂದು ವಾದವನ್ನು ಮಂಡಿಸುತ್ತಾ ಇಲ್ಲ. ಆದರೆ, ಖರ್ಚು ಮಾಡಿರತಕ್ಕ ಹಣದಲ್ಲಿ ಅಕ್ರಮವಾದುದು ಎಷ್ಟು? ಪ್ರಾಮಾಣಿಕವಾಗಿ ಖರ್ಚು ಮಾಡಿರುವುದು ಎಷ್ಟು ಎಂದು ನಿರ್ಣಯ ಮಾಡಬೇಕಾದರೆ, ಒಬ್ಬ ನಿವೃತ್ತ ಅಕೌಂಟೆಂಟ್ ಜನರಲ್ ಅವರನ್ನು ಈ ಒಂದು ತನಿಖಾ ಸಮಿತಿಗೆ ಹಾಕಬೇಕಾಗಿದೆ. ಮತ್ತು ಹೈಕೋರ್ಟ್‌ನ ನ್ಯಾಯಾಧೀಶರೊಬ್ಬರನ್ನೂ ಮತ್ತು ರಾಜ್ಯದ ಹೊರಗಿನವ ರಾದ ಒಬ್ಬ ಚೀಫ್ ಇಂಜಿನಿಯರ್ ಅವರನ್ನೂ ಒಳಗೊಂಡಂತೆ ಒಂದು ಸಮಿತಿಯನ್ನು ಮಾಡಿ, ಆ ಸಮಿತಿ ಯವರು ಕೂಲಂಕಷವಾಗಿ ತನಿಖೆಮಾಡಿ ಈಗ ವೆಚ್ಚವಾಗಿರುವ ಬಗ್ಗೆ ಅಕ್ರಮಗಳನ್ನು ಹೊರಗೆ ಎಳೆಯು ವುದಕ್ಕೆ ಅವಕಾಶ ಮಾಡುವುದು ಅತಿ ಪ್ರಾಮುಖ್ಯವಾಗಿದೆ ಎಂದು ಹೇಳುತ್ತೇನೆ. ಇದರಲ್ಲೇನಾದರೂ ಸರಕಾರ ಹಿಂದೆ ಬಿದ್ದರೆ, ಸರಕಾರಕ್ಕೆ ತಗಲತಕ್ಕ ಕಳಂಕವನ್ನು ಎಂದೆಂದಿಗೂ ಯಾವುದೇ ರೀತಿಯಿಂದ ಉತ್ತರ ಕೊಟ್ಟು ನಿವಾರಣೆ ಮಾಡಿಕೊಳ್ಳಲಿಕ್ಕೆ ಸಾಧ್ಯವಿಲ್ಲ ಎಂದು ಈ ಸಂದರ್ಭದಲ್ಲಿ ನಾನು ಪೂರ್ವಭಾವಿ ಯಾಗಿ ಹೇಳಬೇಕಾಗಿದೆ. ಮತ್ತೊಂದು ವಿಷಯವನ್ನು ನಾನು ಇಲ್ಲಿ ಹೇಳಬೇಕಾಗಿದೆ. ಈಗ ಈ ಒಂದು ಯೋಜನೆ ಕಾರ್ಯಗತವಾಗಿದೆ. ಅಡಿಷನಲ್ ಸೆಕ್ರೆಟರಿ ಮತ್ತು ಛೇರ್ಮನ್ ಅವರು ಭಗೀರಥರು ಎಂದು ಹೆಸರು ಕರೆಸಿಕೊಂಡಿದ್ದಾರೆ. ಈ ಒಂದು ಸಂಸ್ಥೆ ಯಾವ ರೀತಿ ಕೆಲಸ ಮಾಡುತ್ತಿದೆ ಎನ್ನತಕ್ಕದ್ದನ್ನೂ ಕೂಡ ನಾನು ತಮ್ಮ ಮುಖಾಂತರ ಸಭೆಯ ಗಮನಕ್ಕೆ ತರಬಯಸುತ್ತೇನೆ.

ಸುಮಾರು ೬೦೦ ಜನ ಬೇರೆ ಬೇರೆ ಇಲಾಖೆಗಳಿಂದ ಹೋಗಿರತಕ್ಕಂಥ ಅಧಿಕಾರಿಗಳು ಆನ್ ಡೆಪ್ಯುಟೇಷನ್ ಇವತ್ತು ಅಲ್ಲಿ ಕೆಲಸ ಮಾಡುತ್ತಿದ್ದಾರೆ. ಈ ಒಂದು ಯೋಜನೆಯ ಕೆಲಸ ಮುಗಿದಮೇಲೆ ಆ ಅಧಿಕಾರಿಗಳು ಮುಂದುವರೆಯುವುದಕ್ಕೆ ಅವಶ್ಯಕತೆ ಇದೆಯೆ ಎನ್ನುವುದನ್ನು ಕೇಳುತ್ತೇನೆ ಇವತ್ತು ಎಸ್ಟಾಬ್ಲಿಷ್‌ಮೆಂಟ್ ಮೇಲೆ ಆಗತಕ್ಕಂಥ ಚಾರ್ಜು ಯಾರು ಹೊರಬೇಕು ? ಕೇವಲ ಮೈಂಟೆನೆನ್ಸ್ ಮಾತ್ರ ಮಾಡುವುದಕ್ಕೆ ದೊಡ್ಡ ಪ್ರಮಾಣದ ಸಿಬ್ಬಂದಿ ವರ್ಗ ಬೇಕೆ ? ಇದು ಪ್ರಾಮುಖ್ಯವಾದಂಥ ಪ್ರಶ್ನೆ, ಮತ್ತೊಂದು ವಿಷಯ; ಇಲ್ಲಿ ಒಬ್ಬರು ಛೀಫ್ ಇಂಜಿನಿಯರ್ ಇದ್ದಾರೆ, ಮತ್ತು ಒಬ್ಬರು ಅಡ್ವೈಸರ್ ಇದ್ದಾರೆ. ಅವರು ಟೆಕ್ನಿಕಲ್ ಕಮಿಟಿ ಛೇರ್ಮನ್ ಕೂಡ ಆಗಿದ್ದಾರೆ. ಎಗ್ಸಿಕ್ಯುಟೀವ್ ಇಂಜಿನಿಯರ್, ಸೂಪರಿಂಟೆಂಡಿಂಗ್ ಇಂಜಿನಿಯರ್ ಹೀಗೆ ಸುಮಾರು ೬೦೦ ಜನ ಬೇರೆ ಬೇರೆ ಇಲಾಖೆ ಗಳಿಂದ ಹೋಗಿರತಕ್ಕಂಥ ಸಿಬ್ಬಂದಿವರ್ಗ ಮುಂದುವರೆಯುತ್ತಿದೆ. ಇದರ ಜೊತೆಗೆ ಒಬ್ಬ ಐ.ಎ.ಎಸ್. ಅಧಿಕಾರಿಯನ್ನು ಛೇರ್ಮನ್ನರಾಗಿ ನೇಮಕ ಮಾಡಿದ್ದಾರೆ. ನೇಮಕ ಮಾಡಿದಮೇಲೆ ಟೆಕ್ನಿಕಲ್ ಕಮಿಟಿ ಛೇರ್ಮನ್ನರಾಗಿ ಅಡಿಷನಲ್ ಸೆಕ್ರೆಟರಿಯವರು ಮುಂದುವರಿಯುತ್ತಿದ್ದಾರೆ. ಇದಕ್ಕೆ ಒಂದು ಸ್ಪೆಷಲ್ ಜಿ.ಓ. ಮಾಡಿದರು. ಟೆಕ್ನಿಕಲ್ ಕಮಿಟಿ ಛೇರ್ಮನ್ ಮತ್ತು ಅಡ್ವೈಸರ್ ಏನಿದ್ದಾರೆ ಅವರಿಗೆ ಒಂದು ಸ್ಪೆಷಲ್ ಸ್ಟಾಫ್ ನೇಮಕ ಮಾಡಿದ್ದಾರೆ. ವಾಟರ್ ಸಪ್ಲೈ ಸುಯೆರೇಜ್ ಬೋರ್ಡ್ ಛೇರ್ಮನ್ ಆಗಿದ್ದಂಥ ಕಾಲದಲ್ಲಿ ಏನು ಸಲವತ್ತುಗಳು ಇತ್ತು ಅವುಗಳನ್ನು ಟೆಕ್ನಿಕಲ್ ಕಮಿಟಿ ಛೇರ್ಮನ್ ಮತ್ತು ಅಡ್ವೈಸರ್ ಆಗಿ ನೇಮಕ ಮಾಡಿದ ಮೇಲೂ ಸಹ ಕೊಡುವುದರ ಮುಖಾಂತರ ಸರ್ಕಾರ ಔದಾರ್ಯ ತೋರಿಸಿದೆ. ಈ ಮನೆಯಲ್ಲಿ ಯಾರೂ ತಪ್ಪು ತಿಳಿದುಕೊಳ್ಳಬಾರದು. ನಾನು ಈ ಮಾತನು ಹೇಳುವಾಗ ಯಾರನ್ನು ಕುರಿತು ಈ ಮಾತನ್ನು ಹೇಳುತ್ತೇನೆ ಎನ್ನುವ ಅಭಿಪ್ರಾಯಕ್ಕೆ ಬರಬಾರದು. ಪಂಜಾಬಿನಲ್ಲಿ ಹಿರಿಯ ಅಧಿಕಾರಿಗಳು ರಾತ್ರಿ ವೇಳೆ ತಮ್ಮ ವರ್ತನೆ ಸರಿಯಾಗಿ ಇಲ್ಲದೆ ಕೆಲವು ಸೂಳೆಗಾರಿಕೆ ಮನೆಯಲ್ಲಿ ಇರುವುದನ್ನು ಪತ್ತೆ ಹಚ್ಚಿ ಪೋಲೀಸ್ ಅಧಿಕಾರಿಗಳು ಬಂಧಿಸಿರುವುದು ವರದಿಯಾಗಿದೆ. ನಮ್ಮ ರಾಜ್ಯದ ಆಡಳಿತ ಎಷ್ಟರಮಟ್ಟಿಗೆ ಕುಸಿದಿದೆ ಎಂದು ಹೇಳಿದರೆ ಇವತ್ತು ಈ ಅಧಿಕಾರಿ ಎಲ್ಲಿ ಕೆಲಸ ಮಾಡುತ್ತಾರೆ ಅಲ್ಲಿ ಅವರಿಗೆ ಬೇಕಾದಂಥ ಕೆಲವು ಸಿಬ್ಬಂದಿ ಕೊಟ್ಟಿದ್ದಾರೆ ಅವರು ಟೆಕ್ನಿಕಲ್ ಅಡ್ವೈಸರ್ ಆಗಿರಲಿ ಚೀಫ್ ಇಂಜಿನಿಯರ್ ಆಗಿರಲಿ ಅಥವಾ ಇವತ್ತು ಬೋರ್ಡ್ ಛೇರ್ಮನ್ ಆಗಿರಲಿ ಅಡಿಷನಲ್ ಸೆಕ್ರೆಟರಿಗಳಾಗಿರಲಿ ಅವರಿಗೆ ಲೇಡಿ ಸ್ಟೆನೋ ಯಾರು ಮೊದಲಿನಿಂದ ಇರುತ್ತಾರೆ ಅವರೇ ಎಲ್ಲಾ ಕಡೆಗೂ ಬರಬೇಕು; ಕ್ಲಾರ್ಕ್ ಯಾರು ಇರುತ್ತಾರೆ ಅವರೇ ಬರಬೇಕು. ಅವರನ್ನು ಸರಿಯಾಗಿ ನೋಡಿಕೊಳ್ಳುವ ಜವಾನ ಅವನೇ ಬರಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ಜೊತೆಗೆ ಬಾಟಲ್‌ಗಳೂ ಅದೇ ಬರಬೇಕು.

SRI H. D. DEVE GOWDA.—I will allow the inference to be drawn by the Hon. Members of the house and through this house the people of the state.

ಶ್ರೀ ಎಂ. ಎಸ್. ಕೃಷ್ಣನ್.—ಈ ಸಲಕರಣೆಗಳನ್ನೂ ಕೂಡ ಮಾಡಿಕೊಡುತ್ತಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.—ಎರಡನೇ ದರ್ಜೆ ಗುಮಾಸ್ತ ಟೈಪಿಸ್ಟ್ ಅವರ ಚಾರಿತ್ರಹೀನ ಮಾಡಬೇಕು ಎಂದು ಹೇಳುತ್ತಾ ಇಲ್ಲ. ಅವರು ಇವತ್ತು ನಮ್ಮ ವಿಧಾನಸೌಧದಲ್ಲಿ ಅಡಿಷನಲ್ ಸೆಕ್ರೆಟರಿಯವರ ರೂಂನಲ್ಲಿ ಪ್ರೈವೇಟ್ ಸೆಕ್ರೆಟರಿಗಳಾಗಿ ಕೆಲಸ ಮಾಡುವುದಕ್ಕೆ ಅವರಿಗೆ ಪ್ರತಿ ತಿಂಗಳು ೭೦೦ ರೂಪಾಯಿನಿಂದ ೮೦೦ ರೂಪಾಯಿಗಳವರೆಗೆ ಸಂಬಳಸಾರಿಗೆ ಒದಗಿಸುತ್ತಿದ್ದಾರೆ ಎಂದು ಕೇಳಿದ್ದೇನೆ. ನಾನು ಕೇಳುತ್ತೇನೆ ಇದು ಯಾರ ಹಣ ಎಂದು.

ಶ್ರೀ ಟಿ. ಆರ್. ಶಾಮಣ್ಣ.—ಅಲ್ಲಿದ್ದ ಜವಾನ ಕೂಡ ಇಲ್ಲಿಗೆ ಬಂದಿದ್ದಾರೆ.

SRI H. D. DEVE GOWDA.—I am going to spell out all this information. I have tried to collect as much as possible. ಬೋರ್ಡಿಗೆ ಛಾರ್ಜ್ ಮಾಡಿ ಇಲ್ಲಿ ಕೆಲಸ ಮಾಡತಕ್ಕಂಥಾದ್ದು ಸರಿಯೆ? ಮಾನ್ಯ ಚನ್ನಬಸಪ್ಪನವರು ಕೇಳಬೇಕು. ಬಹಳ ಗಹನವಾದ ವಿಷಯ ಚರ್ಚೆ ಮಾಡುತ್ತಿದ್ದೇನೆ. ತಾವು ಲೋಕೋಪಯೋಗಿ ಇಲಾಖೆಯಲ್ಲಿ ಮಂತ್ರಿಗಳಾಗಿ ಕೆಲಸ ಮಾಡತಕ್ಕಂಥಾದ್ದು ಪ್ರಥಮವಲ್ಲ. ಆದರೆ ದುರ್ದೈವದ ಸಂಗತಿ ಎಂದರೆ, ನಿಮ್ಮ ಮಾತಿಗೆ ಇವತ್ತು ರಾಜ್ಯದಲ್ಲಿ ಪುರಸ್ಕಾರ ಇಲ್ಲ. ತಾವು ಲೋಕೋಪಯೋಗಿ ಇಲಾಖೆ ಬೇಡಿಕೆಯ ಬಗ್ಗೆ ಚರ್ಚೆ ನಡೆದ ಸಂದರ್ಭದಲ್ಲಿ ಉತ್ತರ ಕೊಡತಕ್ಕ ಕಾಲದಲ್ಲಿ ಯಾರು ಜೂನಿಯರ್ ಆಫೀಸರುಗಳು ಇವತ್ತು ಬೇರೆ ಬೇರೆ ಮೇಲ್ದರ್ಜೆಯ ಹುದ್ದೆಗಳನ್ನು ಪಡೆದಿದ್ದಾರೋ ಅವುಗಳನ್ನೆಲ್ಲಾ ಖಾಲಿ ಮಾಡಲಿಕ್ಕೆ ಆಜ್ಞೆ ಮಾಡಿದ್ದೇನೆ ಎಂದು ಹೇಳಿದಿರಿ. ಇವತ್ತು ಬೋರ್ಡಿನಲ್ಲಿ ಹೇಗೆ ಕೆಲಸವಾಗುತ್ತಿದೆ ಎಂಬುದನ್ನು ಕೇಳಲಿಕ್ಕೆ ಇಚ್ಛೆಪಡುತ್ತೇನೆ. ಒಬ್ಬ ಎಗ್ಸಿಕ್ಯುಟೀವ್ ಇಂಜಿನಿಯರ್ ಎರಡು ಡಿವಿಜಿನ್ ಛಾರ್ಜ್‌ನಲ್ಲಿ ಇದ್ದಾರೆ. ಒಬ್ಬರು ಸೂಪರಿಂಟೆಂಡಿಂಗ್ ಇಂಜಿನಿಯರ್ ಆ ಒಂದು ಸರ್ಕಲ್ ಇನ್‌ಛಾರ್ಜಿನಲ್ಲಿ ಇದ್ದಾರೆ. ಮಾನ್ಯ ಚನ್ನಬಸಪ್ಪನವರೇ ತಮಗೆ ಕೈ ಜೋಡಿಸಿ ಕೇಳುತ್ತೇನೆ, ತಾವು ವಯಸ್ಸಿನಲ್ಲಿ ದೊಡ್ಡವರು ಆದರೆ ಸಭೆಯಲ್ಲಿ ತಾವು ದೊಡ್ಡವರು ಎಂದು ಭಾವಿಸಲಿಕ್ಕೆ ನಾನು ತಯಾರಿಲ್ಲ. ಆತ್ಮಗೌರವವಿದ್ದರೆ, ತಾವು ಈ ಸಭೆಯಲ್ಲಿ ಕೊಟ್ಟಂಥ ಉತ್ತರವನ್ನು ಕಾರ್ಯರೂಪಕ್ಕೆ ತರುವುದಕ್ಕೆ ಸಾಧ್ಯವಿಲ್ಲದಿದ್ದರೆ...

SRI H. M. CHANNABASAPPA.—It is true that ordere have been issued to all Departments both of Government and outsid Government where our Engineers are functioning on deputation. It is also true that in some institution some adhoc arrangements have been made where junior people are in-charge of senior posts. It is incorrect pra-ctive and not a healthy practice. So, orders been have issued and have given 3 months time to set matters right. I have also directed that if senior officers are wanted Government would be pleased to give senior officers.

ಶ್ರೀ ಎಚ್.ಡಿ. ದೇವೇಗೌಡ—ಒಬ್ಬರು ಎಗ್ಸಿಕ್ಯುಟೀವ್ ಇಂಜಿನಿಯರ್ ಎರಡು ಡಿವಿಜನ್ನಿನ ಚಾರ್ಜ್‌ನಲ್ಲಿದ್ದಾರೆ. ಒಬ್ಬ ಎಕ್ಸಿಕ್ಯುಟೀವ್ ಇಂಜಿನಿಯರ್‌ರವರಿಗೆ ಒಂದು ಸರ್ಕಲ್ ಸೂಪರಿಂಟೆಂಡಿಂಗ್ ಇಂಜಿನಿಯರ್ ಕೆಲಸ ಮಾಡತಕ್ಕ ಹೊಣೆಗಾರಿಕೆ ಕೊಟ್ಟಿದ್ದಾರೆ. ಮುಹಮ್ಮದ್‌ಬಿನ್ ತೊಗಲಕ್ ಕೂಡ ಈ ಒಂದು ಮಟ್ಟಕ್ಕೆ ಹೋಗಿರಲಿಲ್ಲ, I am to charge to-day that the Additional Secretary who was the Chief Engineer of the State once has used every Engineer of the State for his personal whims and fancies to meet his personal desires. He is treating the Chief Engineer of the Board like a slave. I will use this word with all humanity at my command. He will tell him 'You idiot' These are the words he is going to express for the Chief Engineer. What audacity he has got ? Who is behind the

back ? Is it your Chief Minister or your Government? I would like to ask that question. ಮಾನ್ಯ ಸಭಾಧ್ಯಕ್ಷರೆ, ನೊಂದು ಹೇಳಬೇಕಾಗಿದೆ ಇವತ್ತು ಕರ್ನಾಟಕ ರಾಜ್ಯದಲ್ಲಿ ಅವರ ಮುಂದೆ ನಿಂತು ಮುಖ್ಯ ಇಂಜಿನಿಯರ್ ಆಗಿ ಕೆಲಸ ಮಾಡುವುದಕ್ಕೆ ನೈತಿಕ ಶಕ್ತಿ ಇಲ್ಲ ಎಂದರೆ ಅದು ದುರ್ದೈವದ ಸಂಗತಿ. ಕಾರಣವೇನೆಂದರೆ, ಇವತ್ತು ಅವರಿಗೆ ಮುಖ್ಯ ಮಂತ್ರಿಯವರ ಬೆಂಬಲ ಇದೆ ಎಂಬ ಒಂದೇ ಒಂದು ಕಾರಣದಿಂದ ಎಲ್ಲಾ ಇಂಜಿನಿಯರ್‌ಗಳು ಅವರಿಗೆ ಗುಲಾಮರಾಗಿ ಕೆಲಸ ಮಾಡುವ ಕಾಲ ಬಂದಿದೆ. ನಾನು ಹೇಳುತ್ತೇನೆ, ಇದು ಕರ್ನಾಟಕ ರಾಜ್ಯದ ಇಂಜಿನಿಯರಿಂಗ್ ಇಲಾಖೆಗೆ ಗೌರವ ತರತಕ್ಕಂಥಾದ್ದು ಅಲ್ಲ ಎಂದು. ಒಬ್ಬ ಎಕ್ಸಿಕ್ಯುಟಿವ್ ಇಂಜಿನಿಯರ್ ಎರಡು ಛಾರ್ಜು ತೆಗೆದುಕೊಳ್ಳುವುದಕ್ಕೆ ಕಾರಣವೇನು? ಕೂರು ಎಂದರೆ ಕೂರಬೇಕು, ಏಳು ಎಂದರೆ ಏಳಬೇಕು, ಅವರು ಹೇಳಿದಹಾಗೆ ಕೇಳದಿದ್ದರೆ You get out ಎಂದು ಹೇಳುತ್ತಾರೆ. Is this the why the Officer behaves? Are we in a demaoratic set up? What nonsense is this?

There are Executive Engineers who are holding charge as Superinteding Engineers, Assistant Engineers holding charge as Executive Engineers, Junior Engineers holding charge as Assistant Engineers. I will leave this matter at that stage. ಮಾನ್ಯ ಸಭಾಧ್ಯಕ್ಷರೆ, ಈ ಒಬ್ಬ ಅಧಿಕಾರಿಯ ವರ್ತನೆ ಇವತ್ತು ನಮ್ಮ ಮುಖ್ಯಮಂತ್ರಿಗಳಿಗೆ ಬಹಳ ಅಪ್ಯಾಯಮಾನವಾಗಿದೆ. ನಾನು ಮೊದಲೇ ಹೇಳಿದಂತೆ, ಈ ಒಂದು ಯೋಜನೆ ಪ್ರಾರಂಭ ಮಾಡಿದ ದಿವಸದಿಂದ ಹಿಡಿದು ಈ ತಹಲ್‌ವರೆಗೆ ಕೂಲಂಕಷವಾಗಿ ವಿಚಾರಣೆಯಾಗಬೇಕು. I am not bothered whether 'A' is going to be involved or 'B' is going to be involved in it. I am not at all concerned about these things.

This is the letter written by Sri D. Devaraj Urs to Sri Veerendra Patil, Chief Minister on 29th March 1970. I am reading the relevant portions.

"I referred at length in my speech to the disposal of tenders in respect of B.W.S. Scheme. After having studied the Water Supply Scheme, I came to the conclusion that the Board has failed to discharge its responsibility to the best advantage of the citizens of Bangalore while deciding to accept the highest tender for laying steel pipe line at a cost of Rs. 13.0 crores."

"All the factors go to show that the use of pre-stressed concrete pipes for Bangalore Water Supply Scheme is to be agreed upon without any thought."

"Wit great reluctance, I am forced to conclude in the absence of any other valid excuse or reason that there is something more than meets the eye in the decision that the Board appears to have taken."

"The Chairman of the Board has apparently posed this difficulty of foreign exchange procurement before the Board without making any effort to secure the same, with naive object of throwing a smoke to hide the facts the revelation of which would otherwise enable the Board to take a decision in favour of more economical propertion."

SRI T. R. SHAMANNA.—The letter is written by the present Chief Minister when he was not a Minister. He now says that every citizen has to pay through his nose, the extra fee.

ಶ್ರೀ ಎಚ್. ಡಿ. ದೇವೇಗೌಡ.—ಇವೊತ್ತು ಈ ಅಧಿಕಾರಿಯ ದಕ್ಷತೆ, ಈ ಅಧಿಕಾರಿಯ ಪ್ರಾಮಾಣಿಕತೆ, ಈ ಅಧಿಕಾರಿಯ ಒಂದು ಅವಶ್ಯಕತೆ ಈ ರಾಜ್ಯದ ಒಳತಿಗಾಗಿ ಬೇಕಾಗಿರುವಂತೆ ಕಾಣುತ್ತದೆ. ಟೆಕ್ನಿಕಲ್ ಕಮಿಟಿಯ ವಿಚಾರವನ್ನು ಮಾನ್ಯ ನಾಯ್ಡು ಅವರು ಹೇಳಿದರು. ಅವರು ಸಹ ಬೋರ್ಡಿನ ಒಬ್ಬರು ಮೆಂಬರ್ ಆಗಿರುವ ಕಾರಣ, ಅವರಲ್ಲಿ ಸವಿನಯ ಪ್ರಾರ್ಥನೆ ಮಾಡುವುದೇನೆಂದರೆ, ಆ ಕಮಿಟಿ ಮೊದಲು ಯಾವ ರೀತಿ ರಚನೆಯಾಯಿತು ಎಂಬುದನ್ನು ಅವರು ಅರ್ಥ ಮಾಡಿಕೊಳ್ಳಬೇಕು. ಇಲ್ಲಿಯವರೆಗೆ ಯಾರು ಬೋರ್ಡಿನ ಅಧ್ಯಕ್ಷರಾಗಿರುತ್ತಿದ್ದರು, ಅವರೇ ಟೆಕ್ನಿಕಲ್ ಕಮಿಟಿಯ ಅಧ್ಯಕ್ಷರಾಗಿರುತ್ತಿದ್ದರು ; ಆ ರೀತಿ ಯಾರು ಯಾರು ಟೆಕ್ನಿಕಲ್ ಕಮಿಟಿಯ ಅಧ್ಯಕ್ಷರಾಗಿದ್ದರೆಂಬುದನ್ನು ಹೇಳುತ್ತೇನೆ.

From 20-12-46 to 20-10-65—Sri K. Narayanaswamy
From 21-10-65 to 10-6-68—Sri K. Narayanaswamy
From 11-6-68 to 11-8-68—Sri K. Balasubramanyam
From 12-8-68 to 26-1-69—Sri K. Balasubramanyam
From 27-1-69 to 16-2-69—Sri I. M Mugdam
From 17-2-69 to 11-5-69—Sri I. M. Mugdam
From 12-5-69 to 25-6-69—Sri M. S. Shankar Rao
From 26-6-69 to onwards—Sri I. M. Mugdam

The Chairman of the Water Board used to be the Chairman of the Technical Committee. After Mr. Laxman Rao went there, why Mr. Mugdum has been re-appointed as Chairman of the Technical Committee ? Is Mr. Laxman Rao incapable of holding that post ? When Mr. Balasubramanyam is made Chairman of the Committee, when Mr. Narayanaswamy is made the Chairman of Committee, and when Mr. Mugdum is made Chairman, when Mr. Laxmana Rao was appointed as Chairman of the Water Board, why was not the same principal applied ? Why did the Government issue a special order appointing Mr. Mugdum as Chairman of the Technical Committee, after Mr Laxamana Rao is appointed as Chairman of the Board ? What is the reason ? There is a Chief Engineer. He also not made the Chairman of the Technical Committee. Is it to suppress the frauds and infructuous expenditure made by this gentleman ? How long can he do that ? How long can he hide the fact ? It is not his personal property. He cannot shut the eyes of the citizens of Bangalore. ಇವೊತ್ತು ಅಲ್ಲಿರತಕ್ಕಂಥ ಡಾಕ್ಯುಮೆಂಟ್‌ಗಳನ್ನು ಹೊರಗೆ ತೆಗೆಯದಂತೆ ಮಾಡಿದ್ದಾರೆ. ಅದಕ್ಕೆ ಸರ್ಪ ಕಾವಲಿದ್ದಾರೆ. ಅವರು ಮಾಡಿರತಕ್ಕಂಥ ಅಕ್ರಮಗಳು ಹೊರಗೆ ಬರದಂತೆ ಮಾಡಬೇಕು, ಮುಖ್ಯವಾಗಿ ಅವರು ನಿವೃತ್ತರಾಗುವವರೆಗೆ ಅವು ಹೊರಗೆ ಬರಬಾರದೆಂಬುದೇ ಅವರ ಮುಖ್ಯ ಉದ್ದೇಶವಾಗಿದೆ. I am going to warn the Government. There are severe charges against this officer. Unless these charges are cleared, he should not be allowed to retire, and the enquiry, as I said earlier, must be impartial, to clear all these charges. I must compliment the Chief Minister of Maharashtra who has suspended the Chairman of the Electricity Board. Your own party is ruling there. When he has done good things, it is the duty of every citizen of this country to compliment him. The Cheif Minister of Maharashtra has to be complimented. The Chairman of Electricity Board has been suspended by him. Is this Government not capable of handling this officer ? I am going to give you the charges. ಮಾನ್ಯ ಚೆನ್ನಬಸಪ್ಪನವರು ಸಹ ಇಲ್ಲಿ ಕುಳಿತಿದ್ದಾರೆ. ಈ ಅಧಿಕಾರಿ ಪವರ್ ಕಾರ್ಪೊರೇಷನ್‌ನ ಕಂಟ್ರಾಕ್ಟರ್ ಜೊತೆಯಲ್ಲಿ ಇದ್ದರು ಎಂಬ ಕಾರಣದಿಂದ ಚೀಫ್-ಸೆಕ್ರೆಟರಿಯವರ್ಯ

ಎಕ್ಸ್‌ಪ್ಲನೇಷನ್ ಕೇಳಿದರೆ; He has asked the permission of the Chief Minister to prosecute Mr. Channabasappa. My God; Where are we? Has the Minister's post become so low in the eyes of an officer! Whoever may be in that post to-day, I tell you this situation should not arise.

ಶ್ರೀ ಎಂ. ಎಸ್. ಕೃಷ್ಣನ್.—ಆ ವಿಚಾರದಲ್ಲಿ ಮಾನ್ಯ ಚೆನ್ನಬಸಪ್ಪನವರು ಏನು ಹೇಳಿದ್ದಾರೆ?

ಶ್ರೀ ಎಚ್. ಎಂ. ಚೆನ್ನಬಸಪ್ಪ—ಅದಕ್ಕೆಲ್ಲಾ ವಿಧಿನಿಯಮಗಳಿವೆ;

ಶ್ರೀ ಎಂ. ಎಸ್. ಕೃಷ್ಣನ್.—ವಿಧಿನಿಯಮಗಳ ಪ್ರಕಾರ ನಡೆದುಕೊಳ್ಳುವ ಹೊತ್ತಿಗೆ ತಮ್ಮನ್ನು ಆ ತಿಮಿಂಗಿಲ ನುಂಗಿಹಾಕಿಬಿಡುತ್ತದೆ.

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಅದು ಬರುವುದು ಇನ್ನೂ ಬಹಳ ದೂರವಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಅದು ನಿಮ್ಮನ್ನು ನುಂಗುತ್ತದೋ ಅಥವಾ ನೀವೇ ಅದನ್ನು ಕೊಲ್ಲುತ್ತೀರೋ ಎಂಬುದೇ ಇಲ್ಲಿರತಕ್ಕಂಥ ಛಾಲೆಂಜ್;

ಶ್ರೀ ಎಚ್. ಎಂ ಚೆನ್ನಬಸಪ್ಪ.—ಅನೇಕ ತಿಮಿಂಗಿಲಗಳು ನನ್ನನ್ನು ನುಂಗಲು ಬಂದು ಕೊನೆಗೆ ದಾರಿ ಬಿಟ್ಟು ಹೊರಟು ಹೋದವು.

ಶ್ರೀ ಎಚ್. ಡಿ. ದೇವೇಗೌಡ.—ನನಗಿರುವ ವ್ಯಥೆಯಾದರೂ ಇಷ್ಟೆ. ಇವೊತ್ತು ರಾಜ್ಯ ಸರ್ಕಾರಕ್ಕೆ ಇಷ್ಟೊಂದು ಅನಾಥ ಪರಿಸ್ಥಿತಿ ಬರುವುದಕ್ಕೆ ಕಾರಣವಾದರೂ ಏನು ಎಂದು, ಇಷ್ಟೊಂದು ಪ್ರಮುಖವಾದಂಥ ಅಪಾದನೆಗಳು ಇದ್ದರೂ ಸಹ ಅವುಗಳು ಹೊರಗೆ ಬರದಂತೆ, ಆ ಒಂದು ಟೆಕ್ನಿಕಲ್ ಕಮಿಟಿಯಲ್ಲಿ ಒಂದು ಚಕ್ರವ್ಯೂಹವನ್ನು ರಚನೆ ಮಾಡಿಕೊಂಡಿದ್ದಾರೆ.

4–00 P.M

ಇವತ್ತು ನಾನು ಒಂದು ಸಲಹೆಯನ್ನು ಕೊಡಲಿಕ್ಕೆ ಇಚ್ಛೆ ಪಡುತ್ತೇನೆ. ೬೦೦ ಜನ ಏನು ಎಂಪ್ಲಾಯೀಸ್ ಇದ್ದಾರೆ ಆನ್ ಡೆಪ್ಯುಟೇಷನ್ ಅವರನ್ನು ಕಡಿಮೆ ಮಾಡಬೇಕು, ಮೆಯ್ಂಟೆನೆನ್ಸ್‌ಗೆ ಎಷ್ಟು ಬೇಕೋ ಅಷ್ಟು ಮಾತ್ರ ಇರಬೇಕು. ಪ್ರತಿ ತಿಂಗಳು ಸುಮಾರು ೩೫ ಲಕ್ಷ ರೂಪಾಯಿ ಮೆಂಟೆನೆನ್ಸ್‌ಗೆ ಖರ್ಚಾಗುತ್ತಾ ಇರುವುದನ್ನು ಸಭೆಗೆ ಒದಗಿಸಬೇಕಾಗುತ್ತದೆ. ಇದರ ಬಗ್ಗೆ ಅತಿ ಜರೂರಾಗಿ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಟೆಕ್ನಿಕಲ್ ಕಮಿಟಿ ಛೇರ್ಮನ್ ಆಗಿರತಕ್ಕವರನ್ನು ಕಿತ್ತುಹಾಕುವುದಕ್ಕೆ ಸರ್ಕಾರ ಪ್ರಯತ್ನಮಾಡಬೇಕು. ಇವತ್ತು ಅಪಾಯಿಂಟ್‌ಮೆಂಟ್ಸ್‌ನಲ್ಲೂ ಒಂದು ರೀತಿ ದರ್ಬಾರು ಆಗುತ್ತಿದೆ ಶ್ರೀಮಾನ್ ಜಯಪ್ರಕಾಶ್ ನಾರಾಯಣ್ ಅವರೂ ಇದ್ದಾರೆ, ಶ್ರೀಮಾನ್ ಬಸವಲಿಂಗಪ್ಪನವರೂ ಇದ್ದಾರೆ, ೧೮ ಪರ್ಸೆಂಟ್ ಅಮೇಲೆ. ಶ್ರೀಮಾನ್ ಬಸವಲಿಂಗಪ್ಪನವರಿಗೆ ಶಾರ್ಟ್ ಇತ್ತು ಅವರು ಇದರ ಕಡೆ ನೋಡಲಿಕ್ಕೆ ಆಗಲಿಲ್ಲ, ಅಪಾಯಿಂಟ್‌ಮೆಂಟ್ಸ್‌ನಲ್ಲಿ ಒಂದು ರೀತಿ ತುಘಲಕ್ ದರ್ಬಾರು ನಡೆಯುತ್ತಿದೆ. ಮೊದಲು ಅಪಾಯಿಂಟ್ ಮಾಡುವುದು ಅಮೇಲೆ ರ್‍ಯಾಟಿಫೈ ಮಾಡಿಕೊಳ್ಳುವುದು, ಈ ರೀತಿ ಮಾಡಿಕೊಂಡು ಹೋಗುತ್ತಿದ್ದಾರೆ. ಈಗ ನಾನು ಇದರ ಬಗ್ಗೆ ವಿವರವಾಗಿ ಚರ್ಚೆ ಮಾಡಲಿಕ್ಕೆ ಹೋಗುವುದಿಲ್ಲ ಈಗ ನಾನು ಪ್ರಮುಖವಾದಂಥ ಕೆಲವು ಅಪಾದನೆಗಳನ್ನು ಹೇಳುತ್ತೇನೆ ಮೊದಲನೆಯದಾಗಿ, ಈ ಯೋಜನೆಗೆ ಸಂಬಂಧಪಟ್ಟ ಹಾಗೆ ವಿವರಣೆಗಳನ್ನು ತರಿಸಬೇಕು ಎಂದು ಪ್ರಯತ್ನ ಮಾಡಿದೆ ನಾನು ವಿವರಣೆಗಳನ್ನು ಸಂಗ್ರಹಣೆಮಾಡುವುದರಲ್ಲಿ ಶಕ್ತಿಮೀರಿ ಪ್ರಯತ್ನ ಮಾಡುತ್ತೇನೆ ನಾನು ಇಷ್ಟಲ್ಲಾ ಮಾತನಾಡಬೇಕಾದರೆ ಆಧಾರವಿಲ್ಲದೆ ಮಾತನಾಡುವುದಿಲ್ಲ. ಇಲ್ಲದೇ ಹೋದರೆ ಏನಪ್ಪ ದೇವೇಗೌಡರು ಆಧಾರವಿಲ್ಲದೆ ಮಾತನಾಡುತ್ತಾರೆ ಎಂದು ಆಕ್ಷೇಪಣೆ ಮಾಡುತ್ತಾರೆ ಜನಗಳು. ದೇವೇಗೌಡರು ಏನೇನೋ ಪ್ರಯತ್ನ ಮಾಡುತ್ತಾರೆ, ಸರ್ಕಾರ ತಳ್ಳಿಹಾಕುತ್ತದೆ ಎಂದು ಹೇಳುತ್ತಾರೆ. ಅದಕ್ಕೆ ನಾನೇನು ಮಾಡಲಿ, ನಾನು ಅವರನ್ನು ಹೊಡೆಯಲಿಕ್ಕೆ ಆಗುತ್ತದೆಯೇ, ನಾವು ೩೦ ಜನ ಇದ್ದೇವೆ, ಅವರು ೧೬೦ ಜನ ಇದ್ದಾರೆ, ಅವರು ಒಟ್ಟಿಗೆ ನಮ್ಮ ಮೇಲೆ ಬಿದ್ದರೆ ನಾವು ಏನು ಮಾಡುವುದಕ್ಕೂ ಆಗುವುದಿಲ್ಲ. ನಾವು ಪ್ರಜಾಪ್ರಭುತ್ವದ ನಿಯಮ ಪ್ರಕಾರ ಇವತ್ತು ಸರ್ಕಾರದ ತಪ್ಪು. ದೋಷಗಳು ಏನಿವೆ ಅವನ್ನು ಹೊರಗಡೆ ಇಡುತ್ತೇನೆ. ನಿರ್ಮಲ ಇಂಜನಿಯರಿಗ್ ಕಂಪನಿ ವಿಚಾರವನ್ನು ಇಟ್ಟೆ. ಆದುದರಿಂದ ನಾನು ವಿವರಣೆಯನ್ನು ಸಂಗ್ರಹಣೆ ಮಾಡಲಿಕ್ಕೆ ಶಕ್ತಿಮೀರಿ ಪ್ರಯತ್ನ ಮಾಡಿದ್ದೇನೆ $1\frac{1}{4}$ ವರ್ಷದ ಹಿಂದೆ ವಾಟರ್ ಸಪ್ಲೈ ಬೋರ್ಡಿನ ಹಗರಣದ ಬಗ್ಗೆ ಒಂದು ಸ್ಟಾರ್ಡ್ ಕೊಶ್ಚನ್‌ನ್ನು ಕಳಿಸಿದ್ದೆ. ನಮ್ಮ ಸೆಕ್ರೆಟರಿಯವರ ಭೇಟಿಯಲ್ಲಿ ಕೆಲವರು ಅಧಿಕಾರಿಗಳು ಬಂದಿದ್ದರು. ಆ ಕೊಶ್ಚನ್‌ಗೆ ಉತ್ತರ ಹೇಳಬೇಕಾದರೆ ನಮಗೆ ಬಹಳ ಕಷ್ಟವಾಗುತ್ತದೆ, ಅದಕ್ಕೆ ನೀವು ಸಹಾಯ ಮಾಡಿ ಎಂದು ನನಗೆ ಹೇಳಿದರು ನಾನು ಸಹಾಯ ಕೊಡುತ್ತೇನೆ ನೀವು ಏನಾದರೂ ಇನ್‌ಫರ್ಮೇಷನ್ ಕೊಡಿ, ನೀವು ಕೊಟ್ಟಷ್ಟೇ ಕೊಡಿ ನೋಡೋಣ ಎಂದು ಹೇಳಿದೆ.

ಬೋರ್ಡ್ ಬಿಲ್ಡಿಂಗ್ ಬಗ್ಗೆ, ಇದ್ದ ಆ ಕೊಶ್ಚನ್ ಶಾಸನಸಭೆಯ ಮುಂದೆ ಬರಲಿಕ್ಕೆ ಸಾಧ್ಯವಾಗಲಿಲ್ಲ ಅದು ಇರಲಿ ಗ್ರಾಂಡ್ ಲೆವೆಲ್ ರಿಸರ್ವಾಯರ್ಸ್ ಬಗ್ಗೆ ಹೇಳುತ್ತೇನೆ. ಮಂತ್ರಿಗಳು ನೋಟ್ ಮಾಡಿಕೊಳ್ಳಬೇಕು, ಪ್ರತಿಯೊಂದಕ್ಕೂ ಉತ್ತರ ಕೊಡದೇ ಹೋದರೆ ಕಷ್ಟವಾಗುತ್ತದೆ. ಗ್ರೌಂಡ್ ಲೆವೆಲ್ ರಿಸರ್ವಾಯರ್ ಬೈರಸಂದ್ರ ೩ ಮಿಲಿಯನ್ ಗ್ಯಾಲನ್ಸ್, ಅದರ ಎಸ್ಟಿಮೇಸ್ಟ್ ಕಾಸ್ಟ್ ೨.೯೦ ಅಂದರೆ ೨ ಲಕ್ಷ ೯೦ ಸಾವಿರ. ಅದನ್ನು ಕಂಟ್ರಾಕ್ಟರ್ ಯಾರಿಗೆ ಕೊಟ್ಟರೋ ಅದು ಬೇಕಾಗಿಲ್ಲ. ಕೆ.ಜಿ ಟವರ್ ೨ ಎಂ.ಜಿ.ಗೆ ೫–೯೨ ಲಕ್ಷ ಕ್ಲೆವೆಲ್ಯಾಂಡ್ ಟೌನ್ ಹತ್ತಿರ ೩ ಮಿಲಿಯನ್ ಗ್ಯಾಲನ್‌ದು ೧೧ ೩೫ ಎಸ್ಟಿಮೇಟ್, ಇದು ಹೇಗೆ? How the estimates were manipulated? I am going to come to that point. ಬೈರಸಂದ್ರದಲ್ಲಿ ೩ ಎಂ,ಜಿ.ಗೆ ೨.೯೦ ಲಕ್ಷ ಆದರೆ ಕ್ಲೆವೆಲ್ಯಾಂಡ್ ಟೌನ್‌ನಲ್ಲಿ ೩.ಎಂ.ಜಿ.ಗೆ ೧೧.೩೫. ಆಮೇಲೆ ಎಂ.ಎನ್. ಕೃಷ್ಣರಾವ್ ಪಾರ್ಕ್ ಹತ್ತಿರ ೨ ಎಂ.ಜಿ.ಗೆ ೮.೫೫ ಲಕ್ಷ. ಆನೇಲೆ ಬುಲ್‌ಟೆಂಪಲ್ ಹತ್ತಿರ ೫ ಎಂ.ಜಿ.ಗೆ ೧೬.೨೮ ಲಕ್ಷ How the Board took decisions while deciding the Excess Item Rate? ಇದು ಬಹಳ ಪ್ರಾಮುಖ್ಯವಾದಂಥ ವಿಷಯ. ಟೆಕ್ನಿಕಲ್ ಕಮಿಟಿ ಹೇಗೆ ನಿರ್ಣಯ ಮಾಡಿದೆ ಎನ್ನುವುದೇ ಇಲ್ಲಿ ಪ್ರಮುಖ್ಯವಾದ ಪ್ರಶ್ನೆಯಾಗಿದೆ, ಟೆಕ್ನಿಕಲ್ ಕಮಿಟಿ ಛೇರ್ಮನ್, ಬೋರ್ಡ್ ಅಧ್ಯಕ್ಷರು ಹೇಗೆ ನಿರ್ಣಯಮಾಡಿದ್ದಾರೆ ಎನ್ನುವುದು ಪ್ರಮುಖವಾದ ಪ್ರಶ್ನೆ. ಬುಲ್‌ಟೆಂಪಲ್ ಗ್ರೌಂಡ್ ಲೆವೆಲ್ ರಿಸರ್ವಾಯರ್ ಬಗ್ಗೆ ಮೊದಲು ಅಂದಾಜು ಮಾಡಿದಗಂ ಶ್ರೀಮಾನ್ ಕೃಷ್ಣ ಅವರು ಜಿ ಇ. ಇಂಜಿನಿಯರಿಂಗ್ ಗ್ರಾಜುಯೇಟ್ ನಾನು ಎಲ್.ಸಿ.ಇ, ಓದಿದ್ದೇನೆ. 5900 Cubic matter of earth work excavation in rockey soil.

ಎಸ್ಟಿಮೇಟ್ ೫೯೦೦ ಕ್ಯುಬಿಕ್ ಮೀಟರ್ಸ್ ಇರುವುದನ್ನು ಟೆಂಡರ್ ಹಾಕಿದಾಗ ೧೨೫ ಕ್ಯುಬಿಕ್ ಮೀಟರ್ಸ್‌ಗೆ ಇಳಿಸಿಕೊಂಡರು. The rate quoted by the Contractor is Rs. 57 per C.M. and the actual work done is 6000 c.ms. ಬೋರ್ಡಿನಲ್ಲಿ ಮಾನ್ಯ ನಾಯ್ಡು ಅವರೂ ತಿರ್ಮಾನ ಮಾಡಿದರು.

ಶ್ರೀ ಕೆ.ಆರ್ ಶ್ರೀನಿವಾಸಲು ನಾಯ್ಡು.— ನಾನು ಬೋರ್ಡಿನಲ್ಲಿ ಇಲ್ಲ, ಕನ್‌ಸಲ್ಟೇಟಿವ್ ಕಮಿಟಿಯಲ್ಲಿದ್ದೇದೆ.

SRI H.D. DEVE GOWDA.— I am going to read out the Agreement Plan. It says;

"In case the addition is more than 10%, then such additional qunatity shall be paid at the rates entered in the schedule of rates prevalent at the time of making the additions and alterations plus or minus the overall percentage of original tender rates over the estimate. (as per the comparative statement prepared at the time of acceptance of tender). ನಾನು ಇದನ್ನು ತಮ್ಮ ಗಮನಕ್ಕೆ ತಂದಿದ್ದೇನೆ ಬುಲ್‌ಟೆಂಪಲ್ ಹತ್ತಿರದ ರಿಸರ್ವಾಯರ್ ಬಗ್ಗೆ ಬೋರ್ಡ್‌ನವರು ಮಾಡಿರುವ ನಿರ್ಣಯವನ್ನು ಒಂದೊಂದಾಗಿ ಓದುತ್ತೇನೆ. ಇದಕ್ಕೆ ಸ್ಪೆಷಲ್ ಫೈನಾನ್ಷಿಯಲ್ ಅಡ್ವೈಸರ್ ರೇವಡಿ ಎನ್ನುವವರು ಇದ್ದಾರೆ. ತಲೆ ಹೊಡೆಯುವವರಿಗೆ ಗಲ್ಲೆ ಹುಣ್ಣಿಗೆ ಔಷಧಿ ಕೇಳಿದ ಹಾಗೆ ಇವರು ಒಬ್ಬರು ಫೈನಾನ್ಷಿಯಲ್ ಅಡ್ವೈಸರ್. ಅವರ ಅಡ್ವೈಸನ್ನು ನಾನು ಓದುತ್ತೇನೆ.

"The claims of the Contrators to the following works were discuss with the Chairman on 21-6-1973. The Adviser and the Chief engineer were also persent during the discussions.

Construction of 5 M.G. Ground Level Reservoir near Bugle rock, at Bull Temple:— The alternative proposals made as in above case on pages 48-49 of the case file were considered. It was opined that in the normal course, the Contractor has to be paid at the tendered rate for the tender quantity + 10% there on, and at S.R rate + tendered premium for the balance excess quantity......+"

ಅದು "ಎ'' ನಲ್ಲಿ ಇನ್ನು 'ಬಿ' ನಲ್ಲಿ '(b) If he is not agreeable to the above proposal then he may be paid at the tendered rate for the entire quantity or at the tendered rate for the tender quantity plus 10 per cent thereon and at date rate for the balance quantity, whichever is less, as per the views expressed in the first case'

ಸ್ವಾಮಿ, ಟೆಂಡರ್ ರೇಟ್ ಏನು ಇತ್ತು ಅಂದರೆ ೫೭ ರೂಪಾಯಿ. ಅದರೆ ಟೆಂಡರ್ ಕ್ವಾಂಟಿಟಿ ಪ್ಲಸ್ ೧೦ ಪರ್ಸೆಂಟ್ ಆಫ್ ದಿ ಕ್ವಾಂಟಿಟಿಗೆ ಮಾತ್ರ. He is entitled according to clause 13 (2) of the agreement. But here the Board took a decision to pay the tendered rate for the entire quntity of 6000 Cubic metter; where is 175 and where is 6000 you calculate it and the scheduled rate is somewhere Rs. 30 to 40/.......

ಇದು ಇಲ್ಲಿಯ ರಾಜ್ಯದ ಚೀಫ್ ಇಂಜಿನಿಯರ್‌ರವರ ನಿರ್ಣಯ. I will take out the next item. In Byrasandra the tendered rate was twenty rupees for the same specification ನಲ್ಲಿ ಕೊಟ್ಟಿದ್ದಾರೆ. ಕಂಟ್ರಾಕ್ಟರ್ ಏನು ಟೆಂಡರ್ ರೇಟನ್ನು ಕೋಟ್ಟಿದ್ದಾನೆ ಆ ೨೦ ರೂಪಾಯಿಯಂತೆಯೇ ಮುಂದುವರಿಸಿದರೆ ಅವರ ಮನೆ ಹಾಳಾಗುತ್ತದೆ. I will not be advantageous to him. Then the same Board takes a decision to give the schedule Rate plus tender premium. ಅವನನ್ನು ಉಳಿಸಿಬೇಕು ಎಂಬುದು ಮುಖ್ಯ ಉದ್ದೇಶ. ಇವರು ದುಡ್ಡು ಕಾಸೂ ಮುಟ್ಟುವವರಲ್ಲ. ಆ ಡಬ್ಬುಗಳು ಏನಿವೆ ಅವುಗಳನ್ನು ಯಾವುವನ್ನೂ ಮುಟ್ಟಿಲ್ಲ. ಇನ್ನು ಬೈರಸಂದ್ರ ಗ್ರೌಂಡ್ ಲೆವೆಲ್ ರಿಸರ್ವಾಯಿರ್ ಟೆಂಡರ್ ರೇಟ್ ೨೦ ಲಕ್ಷ ರೂಪಾಯಿಗಳು. Over and above the tendered quantity schedule rate plus tender premium ಕೊಡಬೇಕೆಂದರೆ ಯಾರ ತಾತನ ಮನೆಯ ಗಂಟು. ನೀವು ಮಾಡಿರತಕ್ಕಂಥ ರಸ ಕ್ರೀಡ, ರತಿ ಕ್ರೀಡೆ, ಇನ್ನೂ ಇತ್ಯಾದಿ ನಿಮ್ಮ ಇಚ್ಛೆಗಳನ್ನು ಪೂರೈಸುವುದಕ್ಕೆ ಮಾಡಿರತಕ್ಕಂಥ ವೆಚ್ಚವನ್ನು ಈ ಬೆಂಗಳೂರು ನಗರದ ನಾಗರೀಕರು ಯಾವ ತೀಟೆಗಾಗಿ ಕೊಡಬೇಕೆಂದು ಕೇಳುತ್ತೇನೆ. ಇಲ್ಲಿ ಎಷ್ಟು ಕ್ವಾಂಟಿಟಿ ಕೆಲಸ ಮಾಡಿದ್ದಾರೆ ಎಂದರೆ ೧೭೬೦ ಕ್ಯುಬಿಕ್ ಮೀಟರ್ ಎಕ್ಸೆಸ್ ಕೆಲಸ ಮಾಡಿದ್ದಾರೆ. ಅಲ್ಲಿ ಟೆಂಡರ್ ರೇಟ್ ಕೊಡುವುದಿಲ್ಲ. They are going to give the scheduled rates because it is advantageous to the Contractor.

ಇನ್ನು ವೃಷಭಾವತಿ ವ್ಯಾಲಿ. This is the copy of the resolution passed in the Board. ನಿಮ್ಮ ಆಯುಸ್ಸು ಇನ್ನು ೧ ವರ್ಷ. ಆಮೇಲೆ ನಿಮ್ಮನ್ನು ನಾವು ಸಸ್ಪೆಂಡ್ ಮಾಡುತ್ತೇವೆ. ನಾನು ಈ ಕಾಗದಗಳನ್ನು ಬಹಳ ಪ್ರಯಾಸ ಪಡುತ್ತಕೊಂಡು ಕಲೆಕ್ಟ್ ಮಾಡಿದ್ದೇನೆ. ಇದನ್ನೆಲ್ಲಾ ನೋಡಿದಮೇಲೆ, ಯಾರು ಯಾರನು ಸಸ್ಪೆಂಟ್ ಮಾಡಬೇಕೆಂದು ಡಿವಿಜನಲ್ ಸೆಕ್ರೆಟರಿಯವರ ರೂಮಿನಲ್ಲಿ ಈಗಾಗಲೇ ಕುಳಿತುಕೊಂಡು ಲೆಕ್ಕಾಚಾರ ಹಾಕುತ್ತಾ ಇರಬಹುದು. I know that. You cannot live long by running the administration like this. If you improve well and good. People may excuse. you.

ಮಾನ್ಯ ಸಭಾ ಅಧ್ಯಕ್ಷರೆ.— ಇದರ ಬ್ಯಾಂಕ್ ಗ್ರೌಂಡನ್ನು ಸ್ವಲ್ಪ ಹೇಳುತ್ತೇನೆ ಇಲ್ಲಿ ಸೈಡ್ ಟ್ರೀಟ್‌ಮೆಂಟ್‌ನ್ನು ಜಿ.ಎಂ. ಮಿಲ್ಲರ್ಸ್‌ಗೆ ಕೊಟ್ಟರು. ಅವರು ಅದನ್ನು ಸಬ್‌ಲೆಟ್ ಮಾಡಿದರು.

ಶ್ರೀ ಕೋಣಂದೂರು ಲಿಂಗಪ್ಪ.—ಅ.ನ.ಕೃ. ಅವರ ಸಂಬಂಧಿಗಳು ಒಬ್ಬರು ಕಂಟ್ರಾಕ್ಟರ್ ಇದ್ದಾರೆ ಅವರಿಗೆ ಸಬ-ಲೆಟ್ ಮಾಡಿದರು. ಸ್ವಾಮಿ, ಎಕ್ಸ್‌ಕವೇಟೆಡ್ ಸ್ಟಫ್‌ನ್ನು ರಿಮೂವ್ ಮಾಡುವುದಕ್ಕೆ, ಅಂದರೆ ಪಕ್ಕದಲ್ಲೇ ಇರುವ ಹಳ್ಳಕ್ಕೆ ಡಂಪ್ ಮಾಡುವುದಕ್ಕೆ ೫-೬ ಕಿಲೋಮಿಟರ್ ಲೇಡ್ ಛಾರ್ಜಸ್ ಎಂದು ಸುಮಾರು ೪ ಲಕ್ಷ ರೂಪಾಯಿ ಫಾಲ್ಸ್ ಪೇಮೆಂಟ್ ಮಾಡಿದ್ದಾರೆ. ತಾವೇ ಲೆಕ್ಕ ಹಾಕಬೇಕು.

Mr. Deputy Speaker in the Chair

SRI H.D. DEVEGOWDA.— If you want measurement book Number it is M.Book No 147, Voucher No 272 dated 20-9-1972. ಇದರೊಳಗೆ ಎಕ್ಸ್‌ಟ್ರಾ ಐಟಂಸ್‌ಗೆ ಪೇಮೆಂಟ್ ಆಗಿದೆ. Extra payment for the rock and collars, rock, rxcavation for pipelines concrete craddle ಇದರಲ್ಲಿ ಸುಮಾರು ೯೫ ಸಾವಿರ ರೂಪಾಯಿ ಬೋಗಸ್ ಪೇಮೆಂಟ್ ಆಗಿದೆ.

ಇನ್ನು ಚಳ್ಳಘಟ್ಟ ವ್ಯಾಲಿ ಮೈನ್ ಸೂರೇಜ್ Second stage from the compost yard to HAL treatment site. The payment made is Rs 22.31 lakhs; the extra payment the bogus payment is Rs. 3.60 lakhs. In the same Challaghatta valley from Ulsoor tank to compost lane the total payment is Rs. 19.22 lakhs, the extra payment is about Rs 2 lakhs; laying of duplicate lines from the Arcot Srinivasachar Road to City Market''.

Laying duplicate sewerage line from Arcot Srinivasachar Road to City Market, ಲೆವಲ್‌ನಲ್ಲಿ ಹೆಚ್ಚು ಕಡಿಮೆ ಆದರೆ ಅದು ಪಿತಕ್ಕೂ ಪ್ರಯೋಜನ ಬರುವುದಿಲ್ಲ. The payment made is Rs. 4.4 lakhs. The extra payment is 1 lakhs in addition to this, the line is not going to serve any purpose. The entire expenditure is infructiuous. ಇದರ ಜೊತೆಗೆ ಡೂಪ್ಲಿಕೇಟ್ ಲೈನ್ಸ್ ಎಂದು ಹೇಳಿ ಸಿಟಿ ಡಿಸ್ಟ್ರಿಬ್ಯೂಷನ್ ಪ್ರದೇಶದಲ್ಲಿ ಈ ಲೈನ್ಸ್‌ಗೆ ಸೀಮೆಂಟ್ ಪಾಯಿಂಟಿಂಗ್ ಮಾಡಿತು. ಅರ್ಕಾವತಿ ವಾಟರ್ ಸಪ್ಲೈ ಲೈನ್ ಏನು ಇತ್ತು ಅದೇ ಲೈನ್ ಕೊರೆದು ಸಿಮೆಂಡ್ ಪಾಯಿಂಟಿಂಗ್ ಮಾಡಲಾಯಿತು. ಇದೇರೀತಿ ಅನೇಕ ಕೆಲಸಗಳು ಆಗಿವೆ ಎಂದು ನಾನು ಮುಂಚೆಯೇ ಹೇಳಿದ್ದೇನೆ. A committee with a high Court Judge with an Expert and an A.G. of neighbouring State must be constituted. A number of bogus Bills were drawn. I can read out the names. ಆಮೇಲೆ ಗ್ರಾನೋಲೇತಿಕ್ ಫ್ಲೋರಿಂಗ್. Rectification of the pipe line at Harohalli. ಸ್ವಾಮಿ, ಪ್ಲಾಸ್ಟರಿಂಗ್ ಸರಿಯಾದ ರೀತಿಯಲ್ಲಿ ಮಾಡಲಿಲ್ಲ. The Board has taken a decision. I have got a copy of the resolution, according approval to carry out improvement work involving an additional cost of about 4.4 lakhs. The rectification was done due to defective work ಧರ್ಮಕ್ಕೆ ಕೊಡುತ್ತಾರೆಯೇ? ಪಾಸ್ ಮಾಡಿದರೆ ಕೊಡುವುದಕ್ಕೆ ಆಗುವುದಿಲ್ಲವೆ? ರತಿ ಕ್ರೀಡೆ ಎಲ್ಲಾ ನಡೆದಿದೆ.

ಶ್ರೀ ಎಸ್. ಬಂಗಾರಪ್ಪ.— ಹಾಗೆಂದರೆ ಏನು ದಯಮಾಡಿ ವಿವರಣೆ ಕೊಡಬೇಕು.

SRI H. D. DEVE GOWDA.— Sri Konandur Lingappa knows much more than me. ಅನಂತರ ಬೆಳ್ಳಂದೂರು ಅಮಾನಿಕೆರೆ ವೇಸ್ಟ್ ವೈರ್ ಸುಮಾರು ಮೂರುವರೆ ಅಡಿ ಇಳಿಸಬೇಕಾಗಿ ಬಂದಿದೆ ಟ್ಯಾಂಕ್ ವಾಟರ್ ಪೈಪ್‌ನಲ್ಲಿ ವಾಪಸ್ ಬರುವ ಸ್ಥಿತಿಯಲ್ಲಿ ಬಂತು ಇದಕ್ಕೆ ಕಾರಣ it is completely defective in design. ಕರೆ ಒಡೆಯಬೇಕೆಂದು ಅವರು ಹೈಕೋರ್ಟಿಗೆ ಹೋಗಿದ್ದರು. ಕೆರೆ ಒಡೆದದ್ದು ಪ್ರಜಾವಾಣಿ ಮುಖಪುಟದಲ್ಲಿ ಅಚ್ಚು ಹಾಕಿದ್ದರು. ಇದಕ್ಕೆ ತಗಲತಕ್ಕ ವೆಚ್ಚ ಎಷ್ಟು? ಅಡಿಶನಲ್ ಕಾಸ್ಟ್ ಎಂದರೆ ಮೂರು-ಮೂರುವರೆ ಲಕ್ಷ ರೂಪಾಯಿ. ಕೆರೆಯ ಕೈಪಾಸಿಟಿ ಕಡಿಮೆ ಮಾಡಿದರೆ ರೈತರಿಗೆ ತೊಂದರೆಯಾಗುವುದಿಲ್ಲವೆಂದು ಆರ್ಗುಮೆಂಟ್ ಬೇರೆ ಅಡ್ವಾನ್ಸ್ ಮಾಡುತ್ತಾರೆ. ಅದು ಗೊತ್ತಿದೆ On account of defective design what was the extra cost? ಶ್ರೀಮಾನ್ ಪುಟ್ಟಸ್ವಾಮಿಯವರು ಹೇಳುತ್ತಾ ಇದ್ದಾರೆ ಇದನ್ನು ಬೆಂಗಳೂರು ನಾಗರಿಕರು ಕೊಡಬೇಕಾಗುತ್ತದೆ ಎಂದು. ಕೊಡಬೇಕಾದ್ದು ನ್ಯಾಯವಾಗಿ ಖರ್ಚಾಗಿದ್ದರೆ ಕೊಡಬೇಕು. ಅಕ್ರಮವಾಗಿ ಖರ್ಚಾಗಿದ್ದರೆ ಕೊಡಬೇಕಾಗುವುದಿಲ್ಲ. ನೆಟ್‌ಕಲ್ ಬ್ಯಾಲೆನ್ಸಿಂಗ್ ರಿಸರ್ ವಾಯರ್ ೩೦೦ ಪರ್ಸೆಂಟ್ ಎಕ್ಸಸ್ ಆಗಿದೆ. ೩ ಲಕ್ಷ ೭೭ ಸಾವಿರ ಒರಿಜನಲ್ ಎಸ್ಟಿಮೇಟ್, ಆಸ್ ಪರ್ ಆಕ್ಚುಯಲ್ಸ್ ೮ ಲಕ್ಷ ೪೨ ಸಾವಿರ ೨೫೦ ರೂಪಾಯಿಗಳು. ಬೆಂಗಳೂರು ಡಿವಿಜನಲ್‌ನಲ್ಲಿ ಯಾವ ರೇಟ್ ಕೊಡುತ್ತಾರೆ? ಬಿಲ್ಡಿಂಗ್ ಡಿವಿಜನ್ ಆದರೂ ತೆಗೆದುಕೊಳ್ಳಿ. ಯಾವುದೇ ಡಿವಿಜನ್ ತೆಗೆದುಕೊಳ್ಳಿ. You compare the scheduled rate ಇದು ೩೦೦ ಪರ್ಸೆಂಟ್ ಎಕ್ಸೆಸ್ ಎಂದರೆ ಅರ್ಥ ಏನು? ನುಂಗುವುದಕ್ಕೆ ಸ್ವಲ್ಪ ಪರ್ಸೆಂಟೇಜ್ ಮಾರ್ಜಿನ್ ಇಡೋಣ. ೩೦೦ ಪರ್ಸೆಂಟ್ ಎಂದರೆ ಏನು? I am stressing that point. Next Item purchases of release valve, Air valve and Reflex valve. Procurment, errection, commissioning ಇದಷ್ಟೂ ಕಂಟ್ರಾಕ್ಟರರ ಜವಾಬ್ದಾರಿ. ರೇಟ್ ಜಾಸ್ತಿ ಆಗಿದೆ ಇದನ್ನು ತರಲಿಕ್ಕೆ ಆಗುವುದಿಲ್ಲವೆಂದು ಈಗ ಒಂದು ಸಬೂಬು ಹೇಳುತ್ತಾನೆ every body agree. This Board is not a charitable Institution. ಬೋರ್ಡ್‌ನವರು ಪರ್ಚೇಸ್ ಮಾಡೋಣ, ಬರೇ ಇರೆಕ್ಷನ್ ಚಾರ್ಜಸ್ ಕೊಟ್ಟು

ಬಿಡೋಣವೆಂದು ತೀರ್ಮಾನ ಮಾಡಿಬಿಟ್ಟರು. ಬೋರ್ಡ್ ಹೇಗೆ ತೀರ್ಮಾನ ಮಾಡಿದೆ ಎನ್ನುವುದನ್ನು ಓದುತ್ತೇನೆ. On account of this, the additional cost is Rs. 25 lakhs. ಇದನ್ನು ಒಂದು ಫಾರಿನ್ ಫರ್ಮ್‌ನಿಂದ ಪರ್ಚೇಸ್ ಮಾಡಿದರು. ಅದು ಕ್ಲೀನ್ ಫೀಲ್ಡ್ ಕೆನೆಡಿ, ಯು.ಕೆ. ಅದೇ ಫಾರಿನ್ ಫರ್ಮ್ ಬ್ಲಾಕ್ ಬಾರೋ ಅವನು ಕಡಿಮೆ ಕೊಡುತ್ತಿದ್ದ.

4–30 P.M.

It was the obligatory duty of the contracter to procure it according to the terms of the contract Please spell out whether that amount has been recovered from the contractor. That has not been recovered. Then, what punishment does he or the Board deserve? ಬೆಂಗಳೂರು ನಗರದ ಜನರಿಗೆ ದುಡ್ಡು ಹೆಚ್ಚಾಗಿ ಬೋರ್ಡಿನವರ ಖರ್ಚಿಗೆ ಕೊಟ್ಟಿದ್ದರು ಎಂದು ಕಾಣುತ್ತದೆ. ಅಲ್ಲದೇ ಈ ಪೈಪ್ ಲೈನ್ ಎಕ್ಸ್‌ಕವೇಷನ್ ಬಗ್ಗೆ ಈ ಪೈಪ್‌ಲೈನುಗಳನ್ನು ಎಲ್ಲಾ ಹಾಕಿಕೊಂಡು ಬಂದು ಅವುಗಳನ್ನು ಮುಚ್ಚಿದ ಮೇಲೆ A false payment of about Rs. 40 lakhs was made. ನಂತರ ಈ ಪೈಪುಗಳನ್ನು ಇಡಲಿಕ್ಕೆ ಎಕ್ಸ್‌ಟ್ರಾ ವಿಡತ್ ಕಟ್ ಮಾಡಿದ್ದ ಬಗ್ಗೆ, ಎಕ್ಸಿಕ್ಯುಟೀವ್ ಇಂಜಿನಿಯರ್ ಓರಲ್ ಇನ್‌ಸ್ಟ್ರಕ್ಷನ್ ಹೇಳಿದ್ದರು, ಅದು ರೆಕಾರ್ಡ್ ಆಗಿದೆ. ಅಲ್ಲದೇ ಈ ಪೈಪುಗಳನ್ನು ಇಡಬೇಕಾದರೆ ಸೈಡ್ಸ್‌ಗಳಿಗೆ ಕಾಂಕ್ರಿಟ್ ಹಾಕಬೇಕಾಗಿತ್ತು, ಅದನ್ನು ಹಾಕಿಲ್ಲ. ಇವೊತ್ತು ಮುಂಗ್ಡಂ ಅವರು ಮಾಡಿರುವ ಕೆಲಸಗಳ ಬಗ್ಗೆ ಮೈಸೂರು ಪಿ.ಡಬ್ಲ್ಯು.ಡಿ. ಅವರು ಕಾಯ್ದುಕೊಂಡಿದ್ದಾರೆ. ಏಕೆಂದರೆ, ಒಬ್ಬ ಮನುಷ್ಯ ಕೆಳಗೆ ಬಿದ್ದ ಎಂದರೆ ಎಲ್ಲರೂ ಕಾದಿರುತ್ತಾರೆ. ಮತ್ತೆ ನಾನು ಕೆಲವು ಸಂದರ್ಭದಲ್ಲಿ ನೋಡಿದ್ದೇನೆ ಚೀಫ್ ಇಂಜಿನಿಯರ್ ಅವರನ್ನೇ ಈಡಿಯಟ್ ಎಂದು ಹೇಳಿರುವುದನ್ನು. ಇನ್ನು ಪರ್ಚೇಸ್ ಆಫ್ ರಾ ಮೆಟೀರಿಯಲ್ಸ್ ಬಗ್ಗೆ ಹೇಳುತ್ತೇನೆ. ಇವರು ಪರ್ಚೇಸ್ ಆಫ್ ರಾ ಮೆಟೀರಿಯಲ್ಸ್‌ಗೆ ಬಹಿರಂಗ ಮಾರುಕಟ್ಟೆಗಿಂತ ೪೦—೫೦ ಪರ್‌ಸೆಂಟ್ ಎಕ್ಸ್‌ಸ್ ಕೊಟ್ಟಿದ್ದಾರೆ. ಇವರು ಒಂದು ಟೆಕ್ನಿಕಲ್ ಕಮಿಟಿ ಮಾಡಿಕೊಳ್ಳುವುದು ಅದರಲ್ಲಿ. ಏನ್ರಿ ಇಷ್ಟೊಂದು ಜಾಸ್ತಿ ರೇಟ್ ರೆಕಮೆಂಡ್ ಮಾಡಿದ್ದೀರಾ ಎಂದು ಹೇಳುವುದು, ಅನಂತರ ಹಾಗೆ, ಹೀಗೆ ಎಂದು ಹೇಳಿ ಕಡೆಗೆ ಬೋರ್ಡ್‌ನವರು ಓಪನ್ ಮಾರ್ಕೆಟ್ ರೇಟಿಗಿಂತ ೩೦—೪೦ ಪರ್‌ಸೆಂಟ್ ಎಕ್ಸ್‌ಸ್ ಆಗಿ ಅಪ್ರೂವ್ ಮಾಡುವುದು. The Executive Engineer says: "I have sufficiently ascertainned the information." Sri Magdum: "Is that so? Then all right. 'Approve it'' and the Board has approved it. Can we call this a Board? ಕಾವೇರಿ ಪ್ರಾಜೆಕ್ಟ್ ಡಿಸ್ಟ್ರಿಬ್ಯೂಷನ್‌ಗೆ ಒಬ್ಬರು ಆಫೀಸರು ನಾನು ಅವರ ಹೆಸರನ್ನು ಹೇಳಲಿಕ್ಕೆ ಹೋಗುವುದಿಲ್ಲ. I do not want to give out the name of the officers because they have to function like that. They have no other alternative. ಒಂದು ಸಾರಿ ನಾನು ನನ್ನ ಕಿವಿಯಿಂದ ಕೇಳಿದ್ದೇನೆ ಮತ್ತೆ ತನ್ನ ಕಣ್ಣಿನಿಂದ ನೋಡಿದ್ದೇನೆ. ಒಬ್ಬ ಎಸ್.ಸಿ. ಅವರನ್ನು ಈಡಿಯೆಟ್ ಎಂದು ಬಯ್ದರು, ಆಗ ನನಗೆ ಹೊಟ್ಟೆ ಉರಿದು ಹೋಯಿತು, ಆಗ ಅವರನ್ನು ಕೇಳಿದೆ ಈ ದೇಶದಲ್ಲಿ ನಿಮಗೆ ಜೀವನ ಮಾಡಲಿಕ್ಕೆ ಬೇರೆ ಮಾರ್ಗ ಇಲ್ಲವೇ ಎಂದು. ಈ ತರಹ ಜೀವನ ಯಾತಕ್ಕಾಗಿ ಮಾಡುತ್ತೀರಾ ಎಂದು ಈಗ ಸಿಟಿ ಡಿಸ್ಟ್ರಿಬ್ಯೂಷನ್ ಲೈನ್‌ಗೆ ಒಬ್ಬರು ಆಫೀಸರು ಮತ್ತೆ ಕಾವೇರಿ ಡಿಸ್ಟ್ರಿಬ್ಯೂಷನ್‌ಗೆ ಒಬ್ಬರು ಆಫೀಸರ್, ಇವರು ಸೆವರಲ್ ಕ್ರೋರ್ಸ್ ಆಫ್ ರುಪೀಸ್ ನಷ್ಟ ಐಟಂಸ್ ಪರ್ಚೇಸ್ ಮಾಡಿದ್ದಾರೆ. ಆ ಐಟಂಗಳನ್ನು ಅನಂತರ ಓದುತ್ತೇನೆ. ಮೊದಲು ಈ ಎಲೆಕ್ಟ್ರಿಸಿಟಿ ಫಂಡ್ ಡಿಪಾಸಿಟ್ ಮಾಡುವ ಬಗ್ಗೆ ಮಾನ್ಯ ಸಿದ್ದವೀರಪ್ಪನವರು ರವ ರವ ಎಂದು ಹಾರಂತ್ತಾ ಇದ್ದರು. ಈಗ ಸಿಂಡಿಕೇಟ್ ಬ್ಯಾಂಕ್, ಚಿಕ್ಕಪೇಟೆ ಬ್ರಾಂಚ್, ನಾನು ಮೊದಲೇ ಹೇಳಿದ್ದೆ. ಲೇಡಿ ಸ್ಟೆನೋ ಟೈಪಿಸ್ಟ್ ಅವರ ಯಜಮಾನರು ಅಲ್ಲಿ ಕೆಲಸದಲ್ಲಿ ಇದ್ದಾರೆ. ಇದನ್ನು ಇಲ್ಲಿಗೆ ನಿಲ್ಲಿಸುತ್ತೇನೆ.

SRI B. BASAVALINGAPPA.— Sir, I think we going too far into the personal relationship with the subordinates and other persons who are working with him. I do not think it would be in the interest of public policy to enter into such details when we are discussing a non-official resolution. As far as possible, let us not go into the affairs of individuals; let us not drag the names of persons who are not

members of this House because they cannot come and defend. But whoever is responsible to control them, they can be taken to task because they are members of this House. This is my honest submission and I hope my friend Sri Deve Gowda will listen to me.

SRI H. D. DEVE GOWDA.— In Punjab two seniormost I.A.S. officers were prosecuted for indulging in immoral acts. I hope my friend Sri Basavalingappa will agree that the conduct of officers also must be above board.

SRI B. BASAVALINGAPPA.— that is a case of prosecution.

SRI H. D. DEVE GOWDA.— What for were they prosecuted? They were in a prostitute's house. I do not want to go further I would have it at that leaving the Hoose of draw its own conclusion. I have not made further allegation.

MR. DEPUTY SPEAKER.— The scope of discussion on a non-official resolution is limited. However, the acts of omission or commission which are responsible for shooting up the costs can be criticised. To that extent, it is permissible. Beyond that, to go into other details which are not concerned with the resolution is not permissble.

SRI H D. DEVE GOWDA — I know that. What is the extra money that is involved on account of the mal-admistration? That must also be highlighted. ಅದನ್ನು ನಾನು ತೋರಿಸಲಿಕ್ಕೆ ತಾರೀಖು ೧೧–೪–೧೯೭೨ ರಂದು ಎಷ್ಟು ಜನ ಎಂ.ಎಲ್.ಎ ಗಳನ್ನು ಕರೆದುಕೊಂಡು ಹೋಗಿದ್ದಿರಿ? ಸುಮಾರು ೨೫ ಜನ ಎಂ.ಎಲ್.ಎ.ಗಳು ಇರ ಬಹುದು. ಇದಕ್ಕಾಗಿ ಖರ್ಚು ಮಾಡಿರುವುದು ಹನ್ನೆರಡೂವರೆ ಸಾವಿರ ರೂಪಾಯಿಗಳು. ಎಂ.ಎಲ್.ಎ. ಗಳು ಹೋದದ್ದು ತಪ್ಪು ಎಂದು ನಾನು ಹೇಳುವುದಿಲ್ಲ. ಆದರೆ ಖರ್ಚು ತೋರಿಸಿರುವುದು ಹನ್ನೆರಡೂವರೆ ಸಾವಿರ ರೂಪಾಯಿ ಎಂದು. ಸ್ವಾಮಿ, ನನ್ನ ಹತ್ತಿರ ಎಲ್ಲಾ ಪಟ್ಟಿಯೂ ಇದೆ ಇವೆಲ್ಲವನ್ನೂ ಓದಲಿಕ್ಕೆ ಸುಮಾರು ಒಂದೂವರೆ ಗಂಟೆಯಾದರೂ ಹಿಡಿಯುತ್ತದೆ. ಈಗ ಟೆಂಡರ್ ಹೇಗೆ ಹಾಗುವುದು ಎಂದರೆ, ೭–೮ ಜನ ತಮಗೆ ಬೇಕಾದವರೇ ಆದ ಕಂಟ್ರ್ಯಾಕ್ಟರುಗಳಿಂದ ಹಾಕಿಸುವುದು ಈ ಐಟಂಗೆ ಹಾಕಬೇಕು ಎಂದು ಇವರು ಹೇಳಿದರೆ, ಅವರು ಆ ಐಟೆಂಗೆ ಹಾಕುವುದು ಅಷ್ಟೆ. ಸೂಮಾರು ೧೫೦ ಪರ್ಸೆಂಟ್, ೯೦ ಪರ್ಸೆಂಟ್, ೧೮೦ ಪರ್ಸೆಂಟ್, ಒಂದೊಂದು ವೇಳೆ ೨೮೦ ಪರ್ಸೆಂಟ್ ಎಕ್ಸೆಸ್ ಬರುತ್ತದೆ. ಇದನ್ನು ತಾವು ಒಪ್ಪಿಕೊಳ್ಳುತ್ತೀರಾ? ಇದು ಯಾರ ಮನೆಯ ಗಂಟು? ಇದನ್ನು ಬೆಂಗಳೂರು ನಗರದ ನಾಗರೀಕರು ಏತಕ್ಕೆ ಕೊಡಬೇಕು? ಇದನ್ನು ಯಾವುದೇ ಸರ್ಕಾರ ಮಾಡಿರಲಿ; ಇಲ್ಲಿ ಮಾಡಿರುವುದು ತೀರಾ ದುಂದು ವೆಚ್ಚವಾಗಿದೆ ಎಂದು ನಾನು ಹೇಳುತ್ತೇನೆ. ಅಲ್ಲದೆ, ಇವತ್ತಿನ ದಿವಸ ಸ್ಲಂ ಏರಿಯಾಗಳಲ್ಲಿರತಕ್ಕ ಪಬ್ಲಿಕ್ ನಲ್ಲಿಗಳನ್ನು ತೆಗೆಯುತಕ್ಕದ್ದು ಬೇರೆ ಇದೆ. ಸ್ಲಂ ಏರಿಯಾಗಳಲ್ಲಿ ವಾಸ ಮಾಡತಕ್ಕ ಬಡವರಿಗೆ ನೀರು ಕೊಡತಕ್ಕ ಹೊಣೆಗಾರಿಕೆ ನಮಗೆ ಇಲ್ಲವೇ? ಇಲ್ಲಿ ಲಕ್ಷಾಂತರ ರೂಪಾಯಿ ದುಂದು ವೆಚ್ಚ ಮಾಡುವುದು; ಆಮೇಲೆ ಎಕಾನಮಿ ಮಾಡುತ್ತಿದ್ದೇವೆ ಎಂದು ಹೇಳುವುದು.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯಿಡು.— ಸ್ಲಂ ಏರಿಯಾಗಳಲ್ಲಿ ನಾವು ನಲ್ಲಿಗಳನ್ನು ತಗೆದಿಲ್ಲ. ಹಾಕಬೇಕೆಂದು ಹೇಳುತ್ತಿದ್ದೇವೆ.

ಶ್ರೀ ಹೆಚ್. ಡಿ. ದೇವೇಗೌಡ.—ನಲ್ಲಿಗಳನ್ನು ತೆಗೆದಿದ್ದಾರೆ. ತೆಗೆಯುವಾಗ, ತಾವು ಏತಕ್ಕೆ ಸುಮ್ಮನೆ ಇದ್ದಿರಿ? ನಾವು ಇದನ್ನು ಉಗ್ರವಾಗಿ ಖಂಡಿಸಬೇಕಾಗುತ್ತದೆ. ಸ್ಲಂ ಏರಿಯಾಗಳಲ್ಲಿ ಜನಸಂಖ್ಯೆಗೆ ಆಧಾರವಾಗಿ ಹೆಚ್ಚು ಹೆಚ್ಚು ಪಬ್ಲಿಕ್ ನಲ್ಲಿಗಳನ್ನು ಕೊಡಬೇಕಾಗಿದೆ.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯಿಡು.— ಹಾಗೆ ಮಾಡುವುದೇ ನಮ್ಮ ನೀತಿ.

ಶ್ರೀ ಹೆಚ್. ಡಿ. ದೇವೇಗೌಡ — ಈಗ ನಾನು ನೀತಿಯನ್ನೆ ಹೇಳುತ್ತಾ ಇರುವುದು. ಇದು ಸಾಕಲ್ಲ. ಸ್ವಾಮಿ, ಮತ್ತೊಂದು ಘಟನೆಯನ್ನು ಇದು ದುರಂತ ಎಂದು ಹೇಳಬೇಕಾಗುತ್ತದೆ. ಆದರೆ, ಇದರ ವಿಚಾರವಾಗಿ ಚರ್ಚೆ ಮಾಡುವುದು ನನ್ನ ಪಾಲಿಗೆ ಬಂದಿದೆ ಎಂದು ವಿಷಾದದಿಂದ ಹೇಳಬೇಕಾಗುತ್ತದೆ. ಜಲಮಂಡಲಿ, ವಿದ್ಯುಚ್ಛಕ್ತಿ ಮಂಡಲಿ ಮತ್ತು ಗೃಹ ಮಂಡಲಿಗಳಿಗಾಗಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಕಟ್ಟಡದ ಬಳಿ "ಕಾವೇರಿ" ಎಂದು ಒಂದು ದೊಡ್ಡ ಕಟ್ಟಡವನ್ನು ಕಟ್ಟಿದ್ದಾರೆ. ೩೬ ಕೋಟಿ ರೂಪಾಯಿ ವೆಚ್ಚದಲ್ಲಿ ಇದೂ ಕೂಡ ಸೇರಿದೆ. ಈ ಕಟ್ಟಡಕ್ಕೆ ಕಾಂಬೈನ್ಡ್ ಬೋರ್ಡ್ ಬಿಲ್ಡಿಂಗ್ ಎಂದೂ ಹೆಸರು ಇದೆ. ಇದನ್ನೂ ಕೂಡ ಅಡಿಷನಲ್ ಸೆಕ್ರೆಟರಿಯವರೇ ಕಟ್ಟಿಸಿರುವುದು ಇದನ್ನು ಬಿಲ್ಡಿಂಗ್ ಡಿವಿಜನ್‌ಗೆ ಕೊಡಲಿಲ್ಲ. ಅವರೇ ನೇರವಾಗಿ ಇಟ್ಟುಕೊಂಡು ಕಟ್ಟಿಕೊಂಡಿದ್ದಾರೆ. ಅದಕ್ಕಾಗಿ ೧ ಕೋಟಿ ೨೪ ಲಕ್ಷ ಅಂದಾಜಾಗಿದ್ದು, ಈಗ ಎರಡು ಕೋಟಿ ಪೇಮೆಂಟ್ ಮಾಡಿದ್ದಾರೆ. ಮಾನ್ಯ ಮಂತ್ರಿಗಳು ಇದಕ್ಕೆ ಬಹಳ ಚೆನ್ನಾಗಿಯೇ ಉತ್ತರ ಕೊಟ್ಟುಬಿಡುತ್ತಾರೆ. ಆದರೆ, ಆ ಉತ್ತರವನ್ನು ನಾವು ಸ್ವೀಕರಿಸಲಿಕ್ಕೆ ತಯಾರು ಇಲ್ಲ. ಟೆಕ್ನಿಕಲ್ ಕಮಿಟಿ ಇದೆ ದೇವೇಗೌಡರೇ, ಅವರು ಇದನ್ನು ನೋಡಿದ್ದಾರೆ ಕಮಿಟಿಯವರು ಇದನ್ನು ಸರಿಯಾಗಿ ಅಪ್ರೂವ್ ಮಾಡಿದ್ದಾರೆ, ಹಾಗೆಲ್ಲಾ ದುರ್ವ್ಯವಹಾರಗಳು ನಡೆಯುವುದಕ್ಕೆ ಅವಕಾಶವಿಲ್ಲ ಎಂದು ಒಂದೇ ಮಾತಿನಲ್ಲಿ ಮಂತ್ರಿಗಳು ಉತ್ತರ ಕೊಡಬಹುದು ೦.೩೩ ಪರ್ಸೆಂಟ್ ಎಕ್ಸೆಸ್ ಟೆಂಡರ್ ಕರೆದಾಗ ಯಾರು ಟೆಂಡರ್ ಕೊಟ್ಟಿರುವವರು ಎಂದರೆ. ಶಂಕರನಾರಾಯಣ ಕನ್‌ಸ್ಟ್ರಕ್ಷನ್ ಕಂಪೆನಿಯವರು. ನಾನು ಮುಖ್ಯಮಂತ್ರಿಗಳ ಮೇಲೆ ಮಾಡಿರುವ ೧೦ ಆಪಾದನೆಗಳಲ್ಲಿ ಇದೂ ಒಂದು. ಇದಕ್ಕೆ ಸಿವಿಲ್ ಪೋರ್ಷನ್ ೯೦ ಲಕ್ಷ. ಲಿಫ್ಟ್ ಹಾಕುವುದಕ್ಕೆ ೧೫ ಲಕ್ಷ. ಇದಕ್ಕೆ ಒಂದು ಪರ್ಸೆಂಟ್ ಎಕ್ಸೆಸ್ ಟೆಂಡರ್ ಕರೆದಾಗ ಕೊಟ್ಟಿರುವುದು. ಎಲೆಕ್ಟ್ರಿಕಲ್ ಇನ್‌ಸ್ಟಲೇಷನ್ಸ್ ೧೧ ಲಕ್ಷದಿಂದ ರಿವೈಜ್ಡ್ ಆಗಿ ೧೩.೪೬ ಲಕ್ಷ ಎಕ್ಸೆಸ್ ಆಗಿದೆ. ಇದೆಲ್ಲಾ ಸೇರಿ ಎಂಟೈರ್ ಬಿಲ್ಡಿಂಗ್‌ಗೆ ಎರಡು ಕೋಟಿ ರೂಪಾಯಿ ಆಗಿದೆ. ಈ ಕಟ್ಟಡದ ಡೀಸೈನ್, ಪ್ಲಾನ್, ಶಿಲ್ಪಕಲೆ ಇವನ್ನೆಲ್ಲಾ ಕೊಡಲಿಕ್ಕೆ ನಮ್ಮ ಇಂಜಿನಿಯರ್ ಯಾರೂ ಇಲ್ಲವೆಂದು ಹೇಳಿ, ಬಾಂಬೆಯಲ್ಲಿನ ಒಂದು ಪ್ರೈವೇಟ್ ಆರ್ಕಿಟೆಕ್ಟ್ ಸಂಸ್ಥೆಯನ್ನು ನೇಮಕ ಮಾಡಿಕೊಂಡಿದ್ದಾರೆ. ಅದರ ಹೆಸರು ಏನು ಎಂದರೆ, ಮೇಸರ್ಸ್ ಫೋಟಾಗ್ ಅಂಡ್ ಡೋಂಗ್ರೆ, ಬೊಂಬೈ ಎಂದು. ಇವರನ್ನು ನೇಮಕ ಮಾಡಿಕೊಂಡು, ಈ ಕಟ್ಟಡದ ಬಗ್ಗೆ ಅಂದಾಜು ಮಾಡಿಸಿದ್ದಾರೆ. ಅವರಿಗೆ ಮೂರು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಹಾಗೆ ಕೊಡುವುದು ಪ್ರಕೃತವೇ, ಅಪ್ರಕೃತವೇ, ಅಥವಾ ಯೋಗ್ಯವೇ ಎನ್ನತಕ್ಕದ್ದನ್ನು ನಾನು ಇಲ್ಲಿ ಪ್ರಶ್ನೆ ಮಾಡುವುದಿಲ್ಲ. ಅಂತೂ ಅವರಿಗೆ ಕೊಟ್ಟಿದ್ದಾರೆ.

ಸ್ವಾಮಿ, ಆ ಒಂದು ಟೆಂಡರ್ ಕರೆದಾಗ ಸ್ಪೆಸಿಫಿಕೇಶನ್ ಟೆಂಡರ್ ಕ್ವಾಂಟಿಟಿ ಏನು ಇತ್ತು ಅದು ಯಾವುದೂ ಇವತ್ತು ಉಳಿದಿಲ್ಲ. Every item has been altered to the advantage of the Contractor. ಟೆಂಡರ್ ಕರೆದಾಗ ಸ್ಟೀಲನ್ನು ತರತಕ್ಕಂಥದ್ದು ಅವನದೇ ಜವಾಬ್ದಾರಿ. ಆದರೆ ನಮ್ಮ ಬೋರ್ಡಿನವರು ತೀರ್ಮಾನ ಮಾಡುತ್ತಾರೆ. ಅವನಿಗೆ ತರುವುದಕ್ಕೆ ಆಗಲಿಲ್ಲ, ಅದಕ್ಕೋಸ್ಕರ ನಾವೇ ಸಪ್ಲೈ ಮಾಡಿದೆವು ಎಂದು, ಅದು ಹೇಗೆ? ಓಪನ್ ಮಾರ್ಕೆಟ್ಟಿನಲ್ಲಿ ೩೦೦೦ ರೂಪಾಯಿಗಳನ್ನು ಒಂದು ಮೆಟ್ರಿಕ್ ಟನ್ನಿಗೆ ಕೊಟ್ಟು ಕೊಂಡಿರುವುದು It was the obligatory function of the Contractor to procure steel. ಆದರೆ ಅದನ್ನು ಕೈತಪ್ಪಿಸಿದರು. ಅದರಿಂದ ಡಿಫರೆನ್ಸ್ ಎಷ್ಟು? ೧೬ ಲಕ್ಷ ರೂಪಾಯಿಗಳು ಬೋರ್ಡಿನ ತಲೆಯ ಮೇಲೆ ಬಿತ್ತು. ಅವನು ಫ್ಯಾಬ್ರಿಕ್ ಮಾಡುವುದಕ್ಕೆ ಚಾರ್ಜ್ ಕೊಡೋಣ, ಸ್ಟೀಲ್ ಕೊಡೋಣ ಎಂದು ಮಾಡಿದರು. ಅವರ ಒಂದು ಬಿಲ್ ೧೦ ಲಕ್ಷ ಜಾಸ್ತಿಯಾಯಿತು

ಶ್ರೀ ಟಿ. ಆರ್. ಶಾಮಣ್ಣ —ಹಿಂದೂಸ್ತಾನ್ ಸ್ಟೀಲ್ ಬೆಲೆ ೧೬೭೦ ರೂಪಾಯಿಗಳು ಇದ್ದರೂ ೩೦೦೦ ರೂಪಾಯಿ ಕೊಟ್ಟು ಓಪನ್ ಮಾರ್ಕೆಟ್ಟಿನಲ್ಲಿ ತೆಗೆದುಕೊಂಡಿರುವುದು.

SRI H. D. DEVEGOWDA —The civil works were commenced on first February 1969 and were scheduled to be completed by the end of July 1971. The work could not, however, be completed within the scheduled period due to unavoidable delays in furnishing the intricate and complicated designs and for delay in supply of steel which becomes subsequently the responsibility of the Board. Due to the non-availability of steel in the open market and in view of the difficulties experienced by toe contractors in procuring steel for construct

ion of the combined Board administrative building the Chairmen's committee in its meeting held on 11-3-1970 resolved that the entire balance quantity of steel required for the construction of the combined Board administrative buildings be procured by the department and supplied to the contractors and pay only fabrication charges at mutually agreed rates. Consequent on the decision of the Chairmen's committee the department initiated procurement of steel. With the rigid procedure followed by the Steel Priority Committee and the accute scarcity of materials in the open market it was inevitable to go in for quotations on all India basis. The quantity of steel used on the combined Board administrative Building works is 3,000 metric tonnes approximately. ೩೦೦೦ ಮೆಟ್ರಿಕ್ ಟನ್ಸ್ ಸ್ಟೀಲ್ ತೆಗೆದು ಕೊಂಡಿದ್ದಾರೆ, ಆವರೇಜ್ ಇಷ್ಯೂ ರೇಟ್ ೧೫೭೫-೦೦ ಆವರೇಜ್ ಟೆಂಡರ್ ರೇಟ್ ೧೦೪೫-೦೦ and the difference is Rs. 530. That comes to 16 lakhs and all ಅನಂತರ ೨ನೇ ಐಟಂಗೆ ಅಡಿಷನಲ್ ರೇಟ್ ಬೇರೆ ಕೊಡಬೇಕು ಎಂದು ತೀರ್ಮಾನ ಮಾಡಿದರು. ಶೇಕಡ ೨೯ ಅಡಿಷನಲ್ ರೇಟು ಕೊಟ್ಟರು. ಕಂಟ್ರಾಕ್ಟರ್ ಏನು ಮಾಡಿದರು? ಸಕಾಲದಲ್ಲಿ ಕೆಲಸ ಮಾಡಿಲ್ಲ. ಅದಕ್ಕೆ ಟರ್ಮ್ಸ್ ಆಫ್ ರೆಫರೆನ್ಸ್ ಪ್ರಕಾರ ನಾಮಿನಲ್ ಫೈನ್ ಹಾಕುತ್ತಾರೆ. ಎಷ್ಟು ಫೈನ್? ೧೧೦೪೫ ರೂಪಾಯಿ ಶ್ರಮಪಟ್ಟು ಫೈನ್ ಹಾಕಿದ್ದಾರೆ ಅದೇ ಕಂಟ್ರಾಕ್ಟರ್‌ಗೆ ಶೇಕಡ ೨೯ ಅಡಿಷನಲ್ ರೇಟ್ ಕೊಡುತ್ತಾರೆ. "The delay caused by the above factors and in view of the claims for enhancement of rates putforth by the civil contractors, the Chairman's Committee of combined Board Administrative Buildings accorded approval for the enhancement of rates by 29 percent over the tendered rates on works executed after 31-7-1971. The extra cost involved on this amount is Rs. 14,12,450. ಛೇರ್ಮನ್ಸ್ ಕಮಿಟಿಯಲ್ಲಿ ಇರುವವರು ಯಾರು? ನಮ್ಮವರು ಒಬ್ಬರು ಇದ್ದಾರೆ. ಅಗಡಿ ಸಂಗಣ್ಣನವರು ಒಬ್ಬರಿದ್ದಾರೆ. ಕೆ.ಇ.ಬಿ. ಛೇರ್ಮನ್ ಒಬ್ಬರಿದ್ದಾರೆ. ಇದು ಛೇರ್ಮನ್ಸ್ ಕಮಿಟಿ. ಮಾನ್ಯ ಬಸವಲಿಂಗಪ್ಪನವರಿಗೆ ಮನಸ್ಸು ನೋವಾಗ ಬಾರದು. ಅಗಡಿ ಸಂಗಣ್ಣನವರು ಇದಕ್ಕೆ ರುಜು ಹಾಕಿದ್ದಾರೆ. This should be impartially enquired into from the beginning. ೧೯೬೮ ರಿಂದ ಹಿಡಿದು ಇವತ್ತಿನವರೆಗೂ ಒಬ್ಬ ಹೈಕೋರ್ಟ್ ಜಡ್ಜ್, ಅಕೌಂಟೆಂಟ್ ಜನರಲ್, ಎಕ್ಸ್‌ಸ್ಟೇಟ್ ಚೀಫ್ ಇಂಜನಿಯರ್ ಒಳಗೊಂಡಂತೆ ಸಮಿತಿಯವರು ಇದನ್ನು ವಿಚಾರ ಮಾಡಬೇಕು. I am not at all concerned with any of the personalitics ಎರಡು ಐಟಂನಲ್ಲಿ ೩೦ ಲಕ್ಷ ರೂಪಾಯಿ ಹಾರಿಹೋಗಿದೆ.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.—ಫಾರಿನ್ ಕನ್‌ಸಲ್ಟೆನ್ಸಿಗೆ ೬೨ ಲಕ್ಷ ರೂಪಾಯಿ ಕೊಡಬೇಕೆಂದು ತೀರ್ಮಾನ ಮಾಡಿರುವ ಕಡೆ ೮೨.೪೬ ಲಕ್ಷ ರೂಪಾಯಿ ಕೊಟ್ಟು, ೨೦ ಲಕ್ಷ ರೂಪಾಯಿ ಸೇವೆ ಆಯಿತು. ಅದರ ಬಗ್ಗೆ ತಮ್ಮ ಅಭಿಪ್ರಾಯ ಏನು ?

ಶ್ರೀ ಎಚ್. ಡಿ. ದೇವೇಗೌಡ.—ನಾನು ಬಹುಶಃ ಬಹಳ ಸ್ವಚ್ಛ ಕನ್ನಡದಲ್ಲಿ ಹೇಳಿದೆ, ೧೯೬೭ರಲ್ಲಿ ಈ ಸ್ಕೀಂ ಪ್ರಾರಂಭವಾದ ದಿವಸದಿಂದ ಈ ದಿವಸದವರೆಗೂ ವೆಚ್ಚ ಆಗಿರುವ ಬಗ್ಗೆ ವಿಚಾರಣೆ ಮಾಡಬೇಕು ಎಂದು. That includes every expenditure. ಯಾರೂ ಯಾರೂ ನಿರ್ಣಯ ಮಾಡಿದ್ದಾರೆ, ಯಾರ ಯಾರ ಕಾಲದಲ್ಲಿ ಏನು ಏನು ನಿರ್ಣಯ ಮಾಡಿದ್ದಾರೆ; ಯಾವ ಯಾವ ತರಹ ಎಕ್ಸ್‌ಪೆಂಡಿಚರ್ ಆಗಿದೆ. ಪ್ರತಿಯೊಂದರ ಬಗ್ಗೆಯೂ ಕೂಲಂಕಷವಾಗಿ ವಿಚಾರಣೆಯಾಗಬೇಕು.

ಶ್ರೀ ಟಿ. ಆರ್. ಶಾಮಣ್ಣ.—ಶ್ರೀಮಾನ್ ನಾಯ್ಡುರವರು ಈಗ ತಾನೇ ರಾಜಕೀಯಕ್ಕೆ ಬಂದಿದ್ದಾರೆ.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.—ಶ್ರೀಮಾನ್ ಶಾಮಣ್ಣನವರದ್ದು ತಪ್ಪು ಅಭಿಪ್ರಾಯ, ೨೯ ವರ್ಷಗಳಿಂದ ನಾನು ರಾಜಕೀಯದಲ್ಲಿದ್ದೇನೆ.

ಶ್ರೀ ಎಚ್. ಡಿ. ದೇವೇಗೌಡ.—ಸರ್ವೆ ನಂ. ೭೯ರಲ್ಲಿ ಸ್ಪೆಸಿಫಿಕೇಶನ್ಸ್ ಚೇಂಜ್ ಮಾಡಿ ಡಿಸೈನ್ಸ್ ಚೇಂಜ್ ಮಾಡಿದಕ್ಕಾಗಿ ೨೦ ಲಕ್ಷ ರೂಪಾಯಿ ಎಕ್ಸ್‌ಟ್ರಾ ಕೊಡುತ್ತಾರೆ. Consultancy fees approximately Rs. 3.00 lakhs ಕೊಟ್ಟಿದ್ದಾರೆ. On account of the resulting deviation Rs. 19.3ª lakhs ಎಕ್ಸ್‌ಟ್ರಾ ಕೊಡಬೇಕಾಗಿದೆ. ಇಲ್ಲಿ ಆ ಕಂಟ್ರಾಕ್ಟರ್‌ಗೆ ೨೯ ಪರ್ಸೆಂಟ್ ಜಾಸ್ತಿ ಕೊಟ್ಟು ಕೆಲಸ ಮಾಡಿಸುವಂತಹ ಅವಶ್ಯಕತೆ ಏನಿತ್ತು? ಈ ತರಹದ ಒಂದು ತೀರ್ಮಾನ ತೆಗೆದುಕೊಳ್ಳುವುದಕ್ಕೆ ಕಾರಣವೇನಿತ್ತು? ಒರಿಜಿನಲ್ ಕಂಟ್ರಾಕ್ಟರ್‌ಗೇ ೨೯ ಪರ್ಸೆಂಟ್ ಜಾಸ್ತಿ ಕೊಟ್ಟು ಮಾಡಿಸುವ ಬದಲು ಮೊದಲಿನ ಕಂಟ್ರಾಕ್ಟರ್‌ನಿಂದಲೇ ಏತಕ್ಕೆ ಮಾಡಿಸಲಿಲ್ಲ?

ಶ್ರೀ ಕಾಗೋಡು ತಿಮ್ಮಪ್ಪ.—ಎಷ್ಟು ಜನ ಮಂತ್ರಿಗಳು ಅದರಲ್ಲಿ ದುಡ್ಡು ನುಂಗಿದರೋ ಗೊತ್ತಿಲ್ಲ.

5–00 P. M.

ಶ್ರೀ ಎಚ್. ಡಿ. ದೇವೇಗೌಡ.—ಅದು ಏನೇ ಇರಲಿ. ಇಲ್ಲಿ ಪಾರ್ಟ್ ಕೊಟೇಷನ್ ಕರೆದು ಪೀಸ್ ವರ್ಕ್ ಮೂಲಕ ೩೦ ಲಕ್ಷ ರೂಪಾಯಿಗಳನ್ನು ಕೊಟ್ಟು ಬೇರೆಯವರಿಂದ ಕೆಲಸ ಮಾಡಿಸಿದ್ದಾರೆ. The Civil Contractor has carried out the work as per the original tender except the construction of canopies in front of A.D. and E. blocks for which the designs were changed subsequently and other works. This work was got done through other agencies since the original tender's contract rate for the revised designs was too high ಜಾಸ್ತಿ ರೇಟ್ ಕೊಟ್ಟರು ಎಂಬ ಕಾರಣದಿಂದ ಅದನ್ನು ರದ್ದು ಮಾಡಿ ಬೇರೆಯವರ ಮೂಲಕ ಕೆಲಸ ಮಾಡಿಸಿದ್ದೀರಿ. ಅಂದರೆ ಇಲ್ಲಿ ಟೆಂಡರ್ ಅಗ್ರಿಮೆಂಟ್ ಪ್ರಕಾರ ಕೆಲಸ ಮಾಡಿಸಿಲ್ಲವೆಂದು ಅರ್ಥವಾಗುತ್ತದೆ. ಅದೇ ರೀತಿ ಅನ್‌-ಫೋರ್‌ಸೀನ್ ಎಕ್ಸ್‌ಪೆಂಡಿಚರ್ ಕೂಡ ೨೯ ಲಕ್ಷ ರೂಪಾಯಿಗಳಾಗಿದೆ. ಇದಕ್ಕೆ ಕಾರಣ, ಡಿಸೈನ್ಸ್ ಬದಲಾವಣೆ ಮಾಡಿದ್ದು, ಎಸ್ಟಾಬ್ಲಿಷ್‌ಮೆಂಟ್ ಖರ್ಚು, ಆರ್ಕಿಟೆಕ್ಟ್ ಫೀ, ಗ್ರಾಂಡ್ ರೆಂಟ್ ಕೊಟ್ಟಿದ್ದು. ಈಗ ಅಲ್ಲಿ ಸದಾ ನೀರು ಬೀಳುವಂತಹ ಒಂದು ಪ್ರತಿಮೆಯನ್ನು ನಿಲ್ಲಿಸಿದ್ದೀರಿ. ಅದಕ್ಕೆ ಬೇರೆ ೨ ಲಕ್ಷ ರೂಪಾಯಿಗಳಷ್ಟು ಖರ್ಚಾಗಿದೆ. ಇವರು ಕಲೋಪಾಸಕರಾದ ಕಾರಣ ಆ ಒಂದು ಕಲೆಗೆ ಇಷ್ಟು ಹಣ ಖರ್ಚು ಮಾಡಿದ್ದಾರೆ. ಇವೆಲ್ಲಾ ಆದಮೇಲೆ ಅದೂ ಸಹ ಇರಬೇಕಾಗುತ್ತದೆ. ಜೊತೆಗೆ ಓಪನ್ ಮಾರ್ಕೆಟ್‌ನಲ್ಲಿ ಮೆಟೀರಿಯಲ್ಸ್‌ನ್ನು ಪ್ರೊಕ್ಯೂರ್‌ಮೆಂಟ್ ಮಾಡಿದ್ದಾರೆ. ಅದಕ್ಕೆ ೩೦ ರಿಂದ ೪೦ ಪರ್ಸೆಂಟ್‌ವರೆಗೆ ಜಾಸ್ತಿ ಹಣ ಕೊಟ್ಟಿದ್ದಾರೆ. ಅಲ್ಲಿ ಚೇರಮನ್ ಕುಳಿತುಕೊಳ್ಳುವ ಕೊಠಡಿಯನ್ನು ಏರ್‌-ಕಂಡೀಷನ್ ಮಾಡಿದ್ದಾರೆ. ಆ ತರಹ ಏರ್ ಕಂಡೀಷನನ್ನು ಮುಖ್ಯಮಂತ್ರಿಗಳ ಮತ್ತು ಮಂತ್ರಿಗಳ ಛೇಂಬರ್‌ಗಳಿಗೆ ಮಾಡಿದಂತೆ ಕಾಣಲಿಲ್ಲ; ಈ ಎರಡು ಕೋಟಿ ರೂಪಾಯಿಗಳಲ್ಲಿ ಈ ಎಲ್ಲ ಎಕ್ಸ್‌ಪೆಂಡಿಚರ್‌ಗಳು ಬಂದಿವೆ. ಅಲ್ಲಿನ ಟೆಕ್ನಿಕಲ್ ಕಮಿಟಿ ಮೊದಲಿನ ಸರ್ಕಾರೀ ಆಜ್ಞೆಯ ಪ್ರಕಾರ ಯಾವ ರೀತಿ ಇತ್ತು ಎಂದರೆ, ಚೀಫ್ ಇಂಜಿನಿಯರ್, ಸಿ ಅಂಡ್ ಬಿ ಅವರು ಚೇರ್‌ಮನ್ ಆಗಿರುತ್ತಿದ್ದರು; ಗೌರ್ನಮೆಂಟ್ ಆರ್ಕಿಟೆಕ್ಟ್ ಅದರಲ್ಲಿ ಒಬ್ಬರು ಮೆಂಬರ್, ಚೀಫ್ ಇಂಜಿನಿಯರ್ ಎಲೆಕ್ಟ್ರಿಕಲ್ ಅವರು ಒಬ್ಬರು ಮೆಂಬರ್, ಮತ್ತು ಹೌಸಿಂಗ್ ಬೋರ್ಡಿನ ಚೇರ್‌ಮನ್ ಅವರು ಒಬ್ಬರು ಮೆಂಬರ್ ಆಗಿರುತ್ತಿದ್ದರು. ಇವರು ಅಲ್ಲಿಗೆ ಪ್ರವೇಶ ಮಾಡಿದಮೇಲೆ ಆ ಆರ್ಡರ್ ಮಾರ್ಪಾಡಾಯಿತು. ಅದು ಮಾರ್ಪಾಟಾದ ಮೇಲೆ ಅದರ ಹೊಣೆಗಾರಿಕೆಯನ್ನು ಇವರೇ ವಹಿಸಿಕೊಂಡರು. ಶ್ರೀ ಮಂಚೆಗಯ್ಯನವರು ಆ ಜಾಗದಿಂದ ಹೋದಮೇಲೆ ಶ್ರೀ ಹಮೀದ್ ಎಂಬುವರನ್ನು ಅವರ ಜಾಗಕ್ಕೆ ನಾಮಿನೇಟ್ ಮಾಡಿಕೊಂಡರು. ಈಗ ಅಲ್ಲಿ ಶ್ರೀಮಾನ್ ಕಾಟ್‌ವೇ ಎಂಬುವರು ಅಡ್ವೈಸರ್ ಆಗಿದ್ದಾರೆ. ಅವರ ಬಗ್ಗೆ ವೈಯುಕ್ತಿಕವಾಗಿ ಹೇಳತಕ್ಕದ್ದು ಏನೂ ಇಲ್ಲ. ಈಗ ಅಲ್ಲಿನ ಟೆಕ್ನಿಕಲ್ ಕಮಿಟಿ ಯಾವ ರೀತಿ ಕೆಲಸ ಮಾಡುತ್ತಿದೆ ಎಂಬುದನ್ನು ಸೂಕ್ಷ್ಮವಾಗಿ ತಿಳಿಸಿದ್ದೇನೆ. ಈ ಒಂದು ಕಟ್ಟಡದ ಬಗ್ಗೆ ೮೦ ಲಕ್ಷ ರೂಪಾಯಿಗಳಷ್ಟು ಅಧಿಕವಾಗಿ ಪೇಮೆಂಟ್ ಆಗಿದೆ. ಈ ಅಧಿಕ ಖರ್ಚಿನ ಒಂದು ಭಾಗವನ್ನು ಬೆಂಗಳೂರಿನ ನಾಗರೀಕರೇ ಹೊರಬೇಕಾಗಿ ಬಂದಿದೆ. ಮುಖ್ಯವಾಗಿ ೨೬ ಕೋಟಿ ರೂಪಾಯಿಗಳ ಯೋಜನೆ ಏನಿದೆ, ಅದರ ಪ್ರಾರಂಭದಿಂದ ಹಿಡಿದು ಅಂತ್ಯದವರೆಗೆ ವಿಚಾರಣೆಯಾಗಬೇಕು. ಅಪ್ರಕೃತವಾದಂಥ ವೆಚ್ಚವನ್ನು ಬೆಂಗಳೂರಿನ ನಾಗರೀಕರ ಮೇಲೆ ಹಾಕುವುದಕ್ಕಾಗುವುದಿಲ್ಲ. ಆದ ಕಾರಣ ಇಲ್ಲಿ ನಡೆದಿರುವ ಎಲ್ಲ ಅವ್ಯವಹಾರಗಳನ್ನು ಹೊರಗೆ ತೆಗೆದು ನೀರಿನ ದರವನ್ನು ನಿಗದಿ ಮಾಡಬೇಕೆಂದು ಸರ್ಕಾರಕ್ಕೆ ಸೂಚನೆ ಕೊಡುವುದಕ್ಕೆ ಬಯಸುತ್ತೇನೆ. ಈ ಮಧ್ಯದಲ್ಲಿ ನಾನು ಮಾಡಿರತಕ್ಕಂಥ ಆಪಾದನೆಗಳೆಲ್ಲಾ ಅಂತಿಮವಾಗಿ ನಿರ್ಣಯವಾಗುವವರೆಗೆ ಜಿ.ಎ.ಡಿ. ಅವರು ಆ ಅಡಿಷನಲ್ ಸೆಕ್ರೆಟರಿಯ ಪೆನ್‌ಷನನ್ನು ತೀರ್ಮಾನ ಮಾಡಬಾರದೆಂದು ಸೂಚನೆ ಕೊಡುತ್ತೇನೆ.

ಅವರು ನಿವೃತ್ತರಾಗಲು ಇನ್ನು ಕೇವಲ ೧೦ ತಿಂಗಳು ಮಾತ್ರವಿದೆ. ಮೊದಲೇ ಪೆನ್‌ಷನ್ ತೀರ್ಮಾನ ಮಾಡಿಬಿಟ್ಟರೆ ನಂತರ ಅವರು ಮಾಡಿದ ತಪ್ಪಿಗೆ ಶಿಕ್ಷೆ ವಿಧಿಸುವುದಕ್ಕೆ ಅವಕಾಶವಿರುವುದಿಲ್ಲ; ಆದಕಾರಣ ಪೆನ್‌ಷನ್ ಸೆಟಲ್ ಮಾಡುವ ಬಗ್ಗೆ ಸರ್ಕಾರದವರು ಯಾವುದೇ ಕಾತುರತೆ ತೋರಿಸಬಾರದೆಂದು ಹೇಳುತ್ತೇನೆ. ಮುಖ್ಯವಾಗಿ ಪ್ರಾರಂಭದಿಂದ ಇಲ್ಲಿಯವರೆಗೆ ನಡೆದಿರುವ ಎಲ್ಲ ಅವ್ಯವಹಾರಗಳ ಬಗ್ಗೆ ವಿಚಾರಣೆ ಮಾಡುವುದರ ಮೂಲಕ ಬೆಂಗಳೂರಿನ ನೀರಿನ ದರವನ್ನು ನಿಗದಿ ಮಾಡಬೇಕೆಂದು ಹೇಳುತ್ತೇನೆ ಅದಕ್ಕಾಗಿ ಒಂದು ಕಮಿಟಿ ರಚನೆ ಮಾಡಬೇಕೆಂದು ತಿಳಿಸುತ್ತೇನೆ, ಮತ್ತು ಸರ್ಕಾರಕ್ಕೆ ಗೌರವ ಬರಬೇಕು, ಗೌರವ ಸಂಪಾದನೆ ಮಾಡಿಕೊಳ್ಳಬೇಕು ಎಂದು ಮನಸ್ಸು ಇದ್ದರೆ ಮಹಾರಾಷ್ಟ್ರ ಸರ್ಕಾರದವರು ಅಲ್ಲಿಯ ಎಲೆಕ್ಟ್ರಿಸಿಟಿ ಬೋರ್ಡಿನ ಚೇರ್‌ಮನ್ ಅವರನ್ನು ಸಸ್ಪೆಂಡ್ ಮಾಡಿದಂತೆ ತಾವು ಸಹ ಈ ಅಧಿಕಾರಿಯ ಬಗ್ಗೆ ಒಂದು ನಿರ್ಣಯ ತೆಗೆದುಕೊಳ್ಳುವುದರಲ್ಲಿ ಮುಂದಾಗಬೇಕೆಂದು ಸೂಚನೆಮಾಡಿ, ನನಗೆ ಮಾತನಾಡಲು ಅವಕಾಶಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಬಸವಲಿಂಗಪ್ಪ (ಉತ್ತರಹಳ್ಳಿ) :.— ಮಾನ್ಯ ಅಧ್ಯಕ್ಷರೇ, ಮಾನ್ಯ ದೇವೇಗೌಡರ ಭಾಷಣವನ್ನು ನಾನು ಬಹಳ ಸೂಕ್ಷ್ಮವಾಗಿ ಕೇಳಿದ್ದೇನೆ, ಅವರು ಭಾಷಣ ಮಾಡುತ್ತಿದ್ದರ ಬಜೆಟ್ಟಿನ ಮೇಲೆ ಭಾಷಣ ಮಾಡುತ್ತಿದ್ದಾರೇನೋ ಎಂದು ನನಗೆ ಭಾಸವಾಗುತ್ತಾ ಇತ್ತು, ಅವರು ಕೆಲವು ಅಂಕಿ ಅಂಶಗಳನ್ನು ಒದಗಿಸಿದ್ದಾರೆ. ಆ ಅಂಕಿಅಂಶಗಳನ್ನು ಯಾವ ಅವರ ಕೈಗೆ ಸಿಕ್ಕಿತೋ ನನಗೆ ಗೊತ್ತಾಗಲಿಲ್ಲ. ಬಹಳ ಪರಿಶ್ರಮ ಪಟ್ಟಿದ್ದಾರೆ ಎಂದು ಕಾಣುತ್ತದೆ. ಜನಗಳ ಮನಸ್ಸಿನಲ್ಲಿ ಕುತೂಹಲ ಬರುವ ರೀತಿಯಲ್ಲಿ ಅವರು ತಮ್ಮ ಭಾಷಣವನ್ನು ಮಾಡಿದ್ದಾರೆ. ಅದಕ್ಕಾಗಿ ಅವರಿಗೆ ಧನ್ಯವಾದಗಳನ್ನು ಅರ್ಪಿಸಬೇಕು. ಆದರೆ ಶ್ರೀಮಾನ್ ದೇವೇಗೌಡರು ಭಾಷಣ ಮಾಡುವಾಗ ಒಂದನ್ನು ಮರೆತಿದ್ದಾರೆ. ವಾಟರ್ ಸಪ್ಲೈ ಅಂಡ್ ಸ್ಯೂಯರೇಜ್ ಬೋರ್ಡ್ ಆಕ್ಟ್ ಏನು ಇದೆ ಅದು ಸ್ವತಂತ್ರವಾದ ಆಕ್ಟ್ ಆಗಿಬಿಟ್ಟಿದೆ. ಅದರಲ್ಲಿ ಕೈ ಹಾಕಲಿಕ್ಕೆ ಸರ್ಕಾರಕ್ಕೂ ಅಧಿಕಾರ ಇಲ್ಲ. ಅದರ ಕೆಲಸ ಕಾರ್ಯಗಳಲ್ಲಿ ಸೂಪರ್‌ವಿಷನ್ ಇರಬೇಕು ಎಂದು ನನ್ನ ಮನಸ್ಸಿಗೆ ಬಂದ ಮೇಲೆ ಒಂದು ಬಿಲ್ಲನ್ನು ಕೂಡ ನಾನು ಮಂಡಿಸಿದ್ದೇನೆ. ಅದರಲ್ಲಿ ಆಗ ತಕ್ಕಂಥ ಕೆಲಸ ಕಾರ್ಯಗಳಲ್ಲಿ ಪರಿಶೀಲನೆ ಮಾಡುವುದಕ್ಕೆ ಸರ್ಕಾರಕ್ಕೆ ಅಧಿಕಾರ ಇರಬೇಕು ಎಂದು ಬಿಲ್ಲನ್ನು ತಂದಿದ್ದೇನೆ. ಅದು ಈ ಸದನದ ಮುಂದೆ ಇದೆ.

SRI T R. SHAMANNA.— Under provisions of the water Supply and Sewarage Board Act, the Government has got powers to declare certain transactions void. The Government has also got powers to interfere in certain other transactions though the Board is an autonomous body. If necessary I will send in writing what are the various of the act. The Government has got powers to interfere.

ಶ್ರೀ ಬಿ. ಬಸವಲಿಂಗಪ್ಪ.— ಮಾನ್ಯ ಶಾಮಣ್ಣನವರಿಗೆ ತೀವ್ರತೆ ಜಾಸ್ತಿ ಎಂದು ಕಾಣುತ್ತದೆ. ನಾನು ಇದನ್ನೆಲ್ಲಾ ನೋಡಿ ತಿಳಿದುಕೊಂಡು ಆಕ್ಟ್‌ಗೆ ಅಮೆಂಟ್‌ಮೆಂಟ್ ತೆಗೆದುಕೊಂಡುಬಂದಿದ್ದೇನೆ. ಬೋರ್ಡ್ ಅಟಾನಾಮಸ್ ಬಾಡಿಯಾದುದರಿಂದ ಅವರು ಕೆಲಸವನ್ನು ನಿರ್ವಹಿಸಿದ್ದಾರೆ. ಶ್ರೀಮಾನ್ ದೇವೇಗೌಡರು ಮಾತನಾಡುವ ಶೈಲಿ ಹೇಗಿತ್ತು ಎಂದರೆ ಯಾರೋ ಒಬ್ಬ ಅಧಿಕಾರಿ ಮೇಲೆ ಅದರಲ್ಲೂ ಛೇರ್ಮನ್ ಆಗಿರ ತಕ್ಕವರ ಮೇಲೆ ನನಗೆ ಒಪ್ಪಿಗೆ ಆಗಲಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಸರ್ಕಾರಕ್ಕೆ ಅಧಿಕಾರ ಇಲ್ಲ ಎಂದು ಹೇಳುತ್ತೀರಿ, ಅಧಿಕಾರಿ ಮೇಲೆ ಹೇಳಬಾರದು ಎನ್ನುವ ಅಭಿಪ್ರಾಯ ಹೇಳುತ್ತೀರಿ, ನಾವು ಯಾರ ಮೇಲೆ ಹೇಳಬೇಕು.

ಶ್ರೀ ಬಿ. ಬಸವಲಿಂಗಪ್ಪ.— ಶ್ರೀಮಾನ್ ಚನ್ನಬಸಪ್ಪನವರು, ಮುಗ್ದುಂ ಅವರು ತಪ್ಪು ಮಾಡಿದ್ದಾರೆ ಎಂದು ಇಲ್ಲಿ ಒಪ್ಪಿದರು, ಅದೇ ಒಂದು ವಾದವನ್ನು ತಾವು ಮುಂದುವರಿಸಿದ್ದೀರಿ.

ಶ್ರೀ ಎಚ್. ಡಿ. ದೇವೇಗೌಡ.— ಇಲ್ಲ ಇಲ್ಲ.

ಶ್ರೀ ಬಿ. ಬಸವಲಿಂಗಪ್ಪ.— ನನಗನ್ನಿಸುತ್ತದೆ. ಮುಗ್ದುಂ ಎಂಬ ಯಾವ ಅಧಿಕಾರಿ ಇದ್ದಾರೆ. ಆ ಅಧಿಕಾರಿ ಬಗ್ಗೆ ಇಲ್ಲಿ ಚರ್ಚೆಮಾಡತಕ್ಕಂಥಾದ್ದು, ಅವರು ಕೆಲಸ ಮಾಡಿದ್ದು ಸರಿಯಲ್ಲ ಅಂದು ಹೇಳ ತಕ್ಕಂಥದ್ದು ಈ ಸದನಕ್ಕೆ ಮೀರಿದ ಮಾತು ಎಂದು ನನ್ನ ಸ್ಪಷ್ಟವಾದಂಥ ಅಭಿಪ್ರಾಯ. ಅದು ಪರ್ಮನೆಂಟ್ ಮಿಷನೆರಿ ಅಧಿಕಾರಿಗಳು ಖಾಯಂ ಆಗಿರತಕ್ಕ ಯಂತ್ರ ಆಗಿರುತ್ತಾರೆ. ಅದನ್ನು ನಿರ್ವಹಿಸತಕ್ಕವರು ನಾವು ಮಂತ್ರಿಗಳು ಆಗಿರುತ್ತೇವೆ. ನಾವು ಪ್ರಜಾಪ್ರಭುತ್ವದ ಪ್ರತಿನಿಧಿಗಳಾಗಿರುತ್ತೇವೆ. ನಾವು ಮಂತ್ರಿಗಳನ್ನು ಟೀಕೆ ಮಾಡುವುದಕ್ಕೆ ಹೊರಟರೆ ಅದಕ್ಕೆ ಕೊನೆ ಎಲ್ಲಿ ಪ್ರಜಾಪ್ರಭುತ್ವದಲ್ಲಿ ಖಾಯಂ ಯಂತ್ರದ ಸ್ವಾತಂತ್ರ್ಯತೆಯನ್ನು ಗೌರವವನ್ನು ಕಾಯದೇ ಹೋದರೆ ಪ್ರಜಾಪ್ರಭುತ್ವದಲ್ಲಿ ನಾವು ಖಾಯಂ

ಆಗಿ ಸರಿಯಾಗಿ ಸರ್ಕಾರ ನಡೆಸಲಿಕ್ಕೆ ಆಗುವುದಿಲ್ಲ ಎನ್ನುವುದು ನನ್ನ ಸ್ಪಷ್ಟವಾದ ಅಭಿಪ್ರಾಯ. ಯಾವ ಮಂತ್ರಿಗಳಿಗೆ ಯಾವ ಸಬ್ಜಕ್ಟ್ ಅವರ ವಶದಲ್ಲಿರುತ್ತದೆ. ಅವರನ್ನು ಕೊಶ್ಚನ್ ಮಾಡಬೇಕೇ ವಿನಾ ಅಧಿಕಾರಿಗಳನ್ನು ಕೊಶ್ಚನ್ ಮಾಡಿದರೆ ಅದಕ್ಕೆ ಕೊನೆ ಎಲ್ಲಿ. ಶ್ರೀಮಾನ್ ದೇವೇಗೌಡರು ನನಗಿಂತ ನಿಪುಣರು, ಅನುಭವಿಗಳು ಎಂದು ನನಗನ್ನಿಸುತ್ತದೆ. ಆದರೆ ಕೆಲಸ ಮಾಡುವವರು ಸ್ಟೆನೋಗ್ರಾಫರ್ಸ್ ಕ್ಲಾರ್ಕ್ಸ್ ಸೂಪರಿಡೆಂಟ್ಸ್ ಯಾರೂ ಇದ್ದಾರೆ ಅವರ ಬಗ್ಗೆ ಕೂಡ ಟೀಕೆ ಮಾಡುತ್ತಾ ಹೋದರೆ ಅದು ಕೊನೆ ಮುಟ್ಟುವುದು ಎಲ್ಲಿ. ಆದುದರಿಂದ ಶ್ರೀಮಾನ್ ಮುಗ್ದುಂರವರ ವಿಚಾರದಲ್ಲಿ ಟೀಕೆ ಮಾಡರುವುದರಿಂದ ನಾನು ಒಂದು ಮಾತು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಶ್ರೀಮಾನ್ ಮುಗ್ದುಂ ಅವರು ನಮ್ಮ ಸರ್ಕಾರದಲ್ಲಿ ವಿಶೇಷವಾಗಿ ಇರತಕ್ಕ ಅಧಿಕಾರಿ, ದಕ್ಷತೆಯ ಅಧಿಕಾರಿ. ಅವರ ಸತ್ಯಾಸತ್ಯದ ಬಗ್ಗೆ ನಾನು ಮಾತನಾಡುವುದಕ್ಕೂ ಹೋಗಿಲ್ಲ, ಪರೀಕ್ಷೆ ಮಾಡುವುದಕ್ಕೂ ಹೋಗಿಲ್ಲ. ಆಕಡೆ ಗಮನಹರಿಸುವುದಕ್ಕೂ ನನ್ನ ಹತ್ತಿರ ಕೆಲಸಮಾಡುತ್ತಾ ಇರುವಾಗ ಅವರು ಛೇರ್ಮನ್ ಆಗಿದ್ದರು. ಈಕೆಲಸ ಇಷ್ಟೇಅವಧಿಯಲ್ಲಿ ಮುಗಿಸಬೇಕ ಪೂರ್ಣಜವಾಬ್ದಾರಿ ಕೊಡುತ್ತೇನೆ. ಎಂದು ಹೇಳಿದ್ದೆ, ಎಲ್ಲ ಅಧಿಕಾರಿಗಳೂ ಇವರ ನೇತೃತ್ವದಲ್ಲಿ ಒಂದು ಟೀಂ ವರ್ಕ್ ಆಗಿ ಕೆಲಸಮಾಡಿ ಜನವರಿ ಮೊದಲನೇ ವಾರದಲ್ಲಿ ಬೆಂಗಳೂರು ಸಿಟಿಗೆ ನೀರನ್ನು ಕೊಡುತ್ತೇವೆ ಎಂದು ಏನು ಹೇಳಿದ್ದೆವು ಅವತ್ತಿನ ದಿವಸ ಕೊಟ್ಟಿದ್ದಾರೆ. ಅವರು ಒಂದು ವೇಳೆ ತಡ ಮಾಡಿದ್ದರು ಎಂದು ಇಟ್ಟುಕೊಳ್ಳೋಣ, ಆಗ ಇನ್ನೂ ಒಂದೆರಡು ಮೂರು ಕೋಟಿ ರೂಪಾಯಿ ಲುಕ್ಸಾನು ಆಗುತ್ತಿತ್ತು ಇಂತಹ ಅಧಿಕಾರಿ ಬಗ್ಗೆ ಲೋಪ ಮಾಡಿದ್ದಾನೆ ಲಾಚ ಹೊಡೆದಿದ್ದಾನೆ, ಯಾವುಯಾವುದೋ ರಥಗಳನ್ನು ನಡೆಸಿದ್ದಾನೆ ಎಂದು ಹೇಳುತ್ತಿದ್ದರಲ್ಲ. ಅಂತಹ ಹೊಸ ಪದಗಳನ್ನು ಪ್ರಯೋಗ ಮಾಡುವುದು ಅಪ್ರಕೃತ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದರ ಬಗ್ಗೆ ಅವರಿಗೆ ಧನ್ಯವಾದಗಳನ್ನು ಹೇಳಬೇಕು ಯಾರು ತಪ್ಪು ಮಾಡದ್ದಾರೆ. ಎಂದು ಸಭೆಯ ಗಮನಕ್ಕೆ ತಂದರೆ ಅವರ ಬಗ್ಗೆ ತನಿಖೆ ಮಾಡಿಸಿ, ಯಾರು ತಪ್ಪಿತಸ್ಥರು ಇರುತ್ತಾರೆ ಅವರಿಗೆ ಶಿಕ್ಷೆ ಮಾಡೋಣ, ವೈಯಕ್ತಿಕವಾಗಿ ತಪ್ಪು ಮಾಡೇ ಇರಬೇಕು ಎಂದು ನಿರ್ಣಯ ಮಾಡುತ್ತಾ ಹೋದರೆ ಸರ್ಕಾರದಲ್ಲಿ ಜವಾಬ್ದಾರಿಯುತವಾಗಿ ಕೆಲಸ ಮಾಡತಕ್ಕ ಅಧಿಕಾರಿಗೆ ಅಧೈರ್ಯವುಂಟಾಗಿ ಮುಂದೆ ಹೆಜ್ಜೆ ಇಟ್ಟು ಕೆಲಸಮಾಡದ ಹಾಗೆ ಮಾಡುತ್ತಾ ಇರುವುದು ಸರಿಯಲ್ಲ ಎಂದು ವೇದನೆಯಿಂದ ಹೇಳಬೇಕಾಗಿದೆ. ಮಂತ್ರಿಗಳನ್ನು ಟೀಕೆ ಮಾಡಿ ಸರ್ಕಾರವನ್ನು ಟೀಕೆ ಮಾಡಿ ನಾವು ಅಧಿಕಾರಗಳನ್ನು ಜಗ್ಗಾಡುವುದಕ್ಕೆ ಶುರು ಮಾಡಿದರೆ ಕೊನೆ ಎಲ್ಲಿ ಹೋಗುತ್ತದೆ ? ಅದು ಅಪ್ರಕೃತ ವೆಂದು ಹೇಳುತ್ತೇನೆ. ನನ್ನ ದೃಷ್ಟಿಯಲ್ಲಿ ಶ್ರೀಮಾನ್ ಮುಗ್ದುಂ ಅವರು ಒಳ್ಳೆಯ ದಕ್ಷ ಅಧಿಕಾರಿ ಎಂದು ಮನವರಿಕೆಯಾಗಿದೆ.

ಶ್ರೀ ಹೆಚ್. ಡಿ. ದೇವೇಗೌಡ.—ಅವರು ಹೇಳುವುದು ಏನೆಂದರೆ ತಹಶೀಲಾದರೋ ಅಮಲ್ದಾರರೊ ಅಥವಾ ಗುಮಾಸ್ತನೋ ತಪ್ಪು ಮಾಡಿದರೆ ಮಂತ್ರಿಯನ್ನು ಬಿಡಿದುಕೊಂಡು ಜಗ್ಗಾಡಿ ಎಂದು ಹೇಳುತ್ತಾರೆ. ಹೆಸರನ್ನು ಬಳಸಿಕೊಳ್ಳುವ ಅವಶ್ಯಕತೆ ಇಲ್ಲವೆಂದು ತಾವು ಹೇಳುತ್ತೀರಿ. ಅಧ್ಯಕ್ಷರು ಒಂದು ರೂಲಿಂಗನ್ನು ಇದರ ಬಗ್ಗೆ ಕೊಡಬೇಕು. ಇವತ್ತು ತಮ್ಮ ಇಲಾಖೆಯಲ್ಲೋ ಅಥವಾ ಬೇರೆ ಯಾವ ಇಲಾಖೆಯಲ್ಲೋ ಕೆಲಸ ಮಾಡುತ್ತಾ ಇರುತ್ತಾರೆ. ಅವರು ತಪ್ಪು ಮಾಡಿದಾಗ ಅವರ ವಿಷಯದಲ್ಲೇ ಈ ಮನೆಯಲ್ಲಿ ಚರ್ಚೆ ಮಾಡತಕ್ಕದ್ದು ತಪ್ಪೆ ? ಅವರ ಹೆಸರನ್ನು ಎತ್ತದೆ ಇದ್ದರೆ ಇಲ್ಲಿ ಹೇಗೆ ಚರ್ಚೆ ಮಾಡಬೇಕು ? ಯಾವ ಆಫೀಸರ್ ತಪ್ಪು ಮಾಡಿದ್ದಾನೆ. ಎನ್ನುವುದು ಸಂಬಂಧಪಟ್ಟ ಮಂತ್ರಿಗಳಿಗೆ ಹೇಗೆ ಗೊತ್ತಾಗಬೇಕು ? ಅವರು ಹೇಗೆ ಉತ್ತರ ಕೊಡಬೇಕು ? ಡೆಪ್ಯುಟಿ ಕಮಿಷನರ್ ಆಗಲಿ, ಡೈರೆಕ್ಟರ್ ಆಗಲಿ, ಅಥವಾ ಛೇರ್ಮನ್ ಆಗಲಿ ಯಾರು ತಪ್ಪು ಮಾಡಿದ್ದಾರೆ ಎಂಬುದು ಗೊತ್ತಾಗದೇ ಹೋದರೆ ಉತ್ತರವನ್ನು ಹೇಗೆ ಕೊಡಬೇಕು. ?

I am sorry I cannot agree with the Hon. Member. Now, I want a ruling from the Chair whether mentioning designation of an officer and bringing the Omissions and Commissions of the Officer, while discharging his official duty is it wrong on the part of any member ?

MR. DEPUTY SPEAKER,— It is true that the Minister is responsible for the Commissions and Omissions of the Officers and also of the important members of various Committee, Directors and all that. The difficulty here is they will have to be referred to as far as possible by there desiginattons. The Minister is responsible. He cannot escape the responsibility. This is a well laid principal well accepted principal

The difficulty here is this. To go on discussing about some officers either name or designation particularly by name, by making certain, derogatory remarks then appreciation, hailing and counter hailing this creates a difficult situation for the Presiding Officers, because, when there is a controversy, it is bound to be shot up from the other side and this creates a very difficult situation for the Presiding Officer. The best thing would be whether to condemn them or hail them or oppreciate them this not the proper fourm. Condemnation should also be restrained as well as the appreciation if at all will have to be restrained only smile and not laughter, because laughter has got its own repercussions and creates further complications. Therefore, Sober, restrained references may be tolerated and I repea again, it should be by designation and nothing further, If at all by way of concemnation, then of course, the rules of Procedure will have to be adhereto. This is all that I can say Δagain I would say restrained behaviour would be very much appreciated.

ಶ್ರೀ ಬಿ. ಬಸವಲಿಂಗಪ್ಪ.— ಮಾನ್ಯ ದೇವೇಗೌಡರು ಹೇಳಿರತಕ್ಕ ಅಂಕಿ ಅಂಶಗಳು ಏನಿವೆ ಅವು ನಿರ್ಣಯಕ್ಕೆ ಅರ್ಹವಾಗಿರುವುವು ಎಂದು ನನ್ನ ಅಭಿಪ್ರಾಯ. ಶ್ರೀಮಾನ್ ನಾಯ್ಕರ್‌ರವರು ಇದಕ್ಕೆ ಸೂಕ್ತ ವಿವರಣೆಯನ್ನು ಕೊಡುತ್ತಾರೆ. ನಾನು ಒಂದು ವಿಷಯವನ್ನು ಹೇಳಬಯಸುತ್ತೇನೆ. ಇಂಜಿಯರಿಂಗ್ ಇಲಾಖೆಯಲ್ಲಿ ದೊಡ್ಡ ದೊಡ್ಡ ಕಾಮಗಾರಿಯಲ್ಲಿ ನೆಗೋಷಿಯೇಷನ್ಸ್ ಆಗಿ ಎಕ್ಸ್‌ಟ್ರಾ ಪೇಮೆಂಟ್ ಕೊಡ ತಕ್ಕದು ಏನಿದೆ ಅದನ್ನು ಬಹುಮಟ್ಟಿಗೆ ಬಿಡತಕ್ಕದ್ದು ಸೂಕ್ತವೆಂದು ನನಗನಿಸುತ್ತದೆ. ನನಗೆ ಬುದ್ಧಿ ಬಂದಾಗಿನಿಂದ ಇವತ್ತಿನವರೆಗೂ ಈ ವ್ಯವಹಾರಗಳನ್ನು ನೋಡುವುದಾದರೆ ಕಂಟ್ರಾಕ್ಟರ್ಸ್ ಕೆಲಸ ಮಾಡು ತ್ತಾಗೆ. ಇಂಜಿನಿಯರ್ ಕೆಲಸ ಮಾಡುತ್ತಾರೆ. ಆದರೆ ನೆಗೋಷಿಯೇಷನ್ ಕ್ಲಾಸ್ ಮಾತ್ರ ಇಟ್ಟಿರುತ್ತಾರೆ. ಎಕ್ಸ್‌ಟ್ರಾ ಪೇಮೆಂಟ್ ಸೂಪರ್‌ವಿಷನ್ ಬದಲಾವಣೆ ಮಾಡಿ ಜಾಸ್ತಿ ಹಣವನ್ನು ಕೊಡುವ ಪ್ರವೃತ್ತಿ ಬೆಳೆದು ಬಂದಿದೆ. ಇದು ಆದಷ್ಟು ಬೇಗ ಕಡಿಮೆಯಾಗಬೇಕು ಎಂದು ನನ್ನ ಅಭಿಪ್ರಾಯ. ಈ ನೆಗೋಷಿ-ಯೇಷನ್ ಮಾಡತಕ್ಕುದು ಕಂಟ್ರಾಕ್ಟರ್ ಜೊತೆಗೆ. ಇಂಜಿನಿಯರ್ ಜೊತೆಗೆ.

ಶ್ರೀ ಕಾಗೋಡು ತಿಮ್ಮಪ್ಪ.— ಈ ಅಭಿಪ್ರಾಯ ತಮಗೆ ಈಗ ಹೊಳೆಯಿತೋ ಅಥವಾ ಮೊದಲೇ ಇತ್ತೋ ?

ಶ್ರೀ ಬಿ. ಬಸವಲಿಂಗಪ್ಪ.— ಇದು ನನಗೆ ಮೊದಲಿನಿಂದ ಇದೆ. ದೇಶದಲ್ಲಿ ಇಂಥ ವ್ಯವಸ್ಥೆ ಕಡಿಮೆ ಯಾಗಬೇಕು. ಇದಕ್ಕೆ ಅವಕಾಶ ಇರಕೂಡದು ಎಂದು ನನ್ನ ಅಭಿಪ್ರಾಯ. ನಮ್ಮ ಮಾನ್ಯ ಸ್ನೇಹಿತರಾದ ಶ್ರೀಮಾನ್ ಶಾಮಣ್ಣನವರು ಏನು ನಿರ್ಣಯವನ್ನು ತಂದಿದ್ದಾರೆ ಅದು ಒಂದು ಮಹತ್ತರವಾದ ನಿರ್ಣಯ ವೆಂದು ಹೇಳಬಯಸುತ್ತೇನೆ. ಮತ್ತು ಅದಕ್ಕಾಗಿ ಅವರಿಗೆ ನನ್ನ ಧನ್ಯವಾದಗಳನ್ನರ್ಪಿಸುತ್ತೇನೆ. ಇದರ ಬಗ್ಗೆ ನಾನು ಅಧಿಕಾರದಲ್ಲಿದ್ದಾಗ ಹಣವನ್ನು ಯಾರ ಬಳಿ, ಯಾವ ರೀತಿಯಲ್ಲಿ ವಸೂಲು ಮಾಡಬೇಕು, ವಾಟರ್ ರೇಟನ್ನು ಯಾವ ರೀತಿಯಲ್ಲಿ ಕಲೆಕ್ಟ್ ಮಾಡಬೇಕು ಎನ್ನುವ ಬಗ್ಗೆ ವಿವರವಾದ ಆದೇಶಗಳನ್ನು ಡಿಪಾರ್ಟ್‌ಮೆಂಟಿಗೆ ಕೊಟ್ಟಿದ್ದೆ. ಆದರೆ ಈಗ ಅದು ಏನಾಯಿತೋ ಗೊತ್ತಿಲ್ಲ. ಇಂಡಸ್ಟ್ರೀಸ್ ರೇಟ್ ಬೇರೆ ಇರಬೇಕಾಗುತ್ತದೆ, ಕಮರ್ಷಿಯಲ್ ರೇಟ್ಸ್ ಬೇರೆ ಇರಬೇಕಾಗುತ್ತದೆ. ಯೂಸರ್ಸ್ ರೇಟ್ ಬೇರೆ ಇರ ಬೇಕಾಗುತ್ತದೆ. ಯಾರು ಯಾರು ಕೊಳಚೆ ಪ್ರದೇಶಗಳಲ್ಲಿ ವಾಸವಾಗಿರುತ್ತಾರೆ ಅವರಿಗೆ ಅತ್ಯುತ್ತಮ ರೀತಿಯಲ್ಲಿ ಸೌಲಭ್ಯಗಳನ್ನು ಒದಗಿಸಿಕೊಡಬೇಕಾಗುತ್ತದೆ. ಎಲ್ಲೆಲ್ಲಿ ಸಿನಿಮಾ ಮಂದಿರಗಳನ್ನು ನಡೆಸುತ್ತಾರೆ ಕಮರ್ಷಿಯಲ್ ಷಾಪ್ಸ್ ಎಲ್ಲಿವೆ, ಅವರಿಗ ಜಾಸ್ತಿ ರೇಟ್ ಹಾಕಿ ಹೀಗೆ ಮಾಡುವುದರಿಂದ ನಮಗೆ ಲುಕ್ಸಾನು ಏನೂ ಆಗುವುದಿಲ್ಲ. ನಾವು ಈಗ ಏನು ಹಣವನ್ನು ಖರ್ಚು ಮಾಡಿದ್ದೇವೆ ಅದನ್ನು ವಸೂಲು ಮಾಡಬೇಕು. ಹೀಗೆ ಬೆಂಗಳೂರು ನಗರದಲ್ಲಿ ವಾಸವಾಗಿರತಕ್ಕ ನಮಗೆಲ್ಲರಿಗೂ ಇದು ಭಾರವಾಗಿದೆ. ಇದರ ಬಗ್ಗೆ ಮಾನ್ಯ ಶಾಮಣ್ಣನವರು ಬಹಳ ವಿಶೇಷವಾದ ಗಮನವನ್ನು ಕೊಟ್ಟಿದ್ದಾರೆ. ಇದಕ್ಕಾಗಿ ಅವರಿಗೆ ನನ್ನ ಧನ್ಯವಾದಗಳನ್ನರ್ಪಿಸುತ್ತೇನೆ. ಮಾನ್ಯ ಮಂತ್ರಿಗಳು ಈಗ ರೇಟ್ಸ್ ಫಿಕ್ಸ್ ಮಾಡುವ ಬಗ್ಗೆ ಇಂಡಸ್ಟ್ರೀಸ್‌ಗೆ ನೀರು ಸರಬರಾಜು ಮಾಡುತ್ತಿರುವ ಬಗ್ಗೆ ಅವರಿಗೆ ಜಾಗ ಕೊಡುವ ಬಗ್ಗೆ ಇನ್ನೂ ಇತ್ಯಾದಿಗಳ ಬಗ್ಗೆ ಅವರಿಂದ ಕ್ಯಾಪಿಟಲ್ ಇನ್‌ವೆಸ್ಟ್‌ಮೆಂಟನ್ನು ಮೊದಲೇ ವಸೂಲು ಮಾಡಿದ್ದರೆ

ಹೊರಗಿನಿಂದ ಇಷ್ಟು ಹಣವನ್ನು ನಾವು ಸಾಲ ತರತಕ್ಕ ಪ್ರಮೇಯವೇ ಬರುತ್ತಾ ಇರಲಿಲ್ಲ. ಅಂಥ ಒಂದು ಸ್ಕೀಂನ್ನು ತಯಾರು ಮಾಡಿ ಇಟ್ಟಿದೆ. ಶ್ರೀಮಾನ್ ನಾಯ್ಕರ್‌ರವರು ಇದರ ಬಗ್ಗೆ ತೀವ್ರ ಗಮನವನ್ನು ಹರಿಸುತ್ತಾರೆಂದು ನನ್ನ ಅಭಿಪ್ರಾಯ. ಈಗ ಮಾನ್ಯ ಸದಸ್ಯರು ಏನು ನಿರ್ಣಯವನ್ನು ತಂದಿದ್ದಾರೆ. ಅದಕ್ಕೆ ನಾವು ತೀವ್ರ ಗಮನವನ್ನು ಕೊಡಬೇಕು; ಅಷ್ಟೇ ಅಲ್ಲ ಬಡವರಿಗೆ ಏನೇನು ರಿಲೀಫ್ ಕೊಡ ಬೇಕೋ ಅದನ್ನು ಅವರಿಗೆ ಕೊಡಬೇಕಾಗುತ್ತದೆ. ಮತ್ತು ಈಗ ಏನು ಸಾಲವನ್ನು ತಂದಿದೆ ಅದನ್ನು ವಾಪಸ್ಸು ಕೊಡಬೇಕು,

5-30 P.M.

† ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥ ಹಳ್ಳಿ) — ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸದಸ್ಯರಾದಂತ ಶ್ರೀ ಮಾನ್ ಟಿ, ಆರ್. ಶಾಮಣ್ಣನವರು ತಂದಿರತಕ್ಕ ನಿರ್ಣಯಕ್ಕೆ ನಾನು ಸಂಪೂರ್ಣವಾದಂಥ ಬೆಂಬಲವನ್ನು ಸೂಚಿಸುತ್ತಾ ಎರಡು ಮಾತುಗಳನ್ನು ಹೇಳಲಿಕ್ಕೆ ಅಪೇಕ್ಷಿಪಡುತ್ತೇನೆ. ಈ ನೀರಿನ ಬೆಲೆ ಏನು ಇದೆ ಅದನ್ನು ಇಳಿಸಬೇಕು ಎನ್ನುವುದರ ಬಗ್ಗೆ ಬೆಂಗಳೂರು ನಗರದಲ್ಲಿ ಕೆಲವು ವರ್ಷಗಳಿಂದೆ ಹೋರಾಟ ನಡೆದಾಗ ಶ್ರೀಮಾನ್ ನಾಗಣ್ಣನವರು ಮತ್ತು ಶ್ರೀಮಾನ್ ಶಾಮಣ್ಣನವರ ಜೊತೆಯಲ್ಲಿ ಚಳುವಳಿಯಲ್ಲಿ ಭಾಗವಹಿಸಿ ಜೈಲಿಗೆ ಹೋದಂಥವರ ಪೈಕಿ ನಾನು ಒಬ್ಬ. ಆ ಕಾಲದಿಂದಲೂ ಬೆಂಗಳೂರು ನಗರದ ಜನತೆಗೆ ಅದರಲ್ಲೂ ಬಡವರಿಗೆ ಮುಫತ್ತಾಗಿ ಸಾಕಷ್ಟು ಕಡಿಮೆ ಬೆಲೆಯಲ್ಲಿ ನೀರನ್ನು ಕೊಡಬೇಕು ಎಂದು ಹೋರಾಟ ಬೆಂಗಳೂರಿನಲ್ಲಿ ನಡೆದುಕೊಂಡೇಬಂದಿದೆ. ಆದರೆ ಈಗ ನೋಡಿದರೆ ಯಾವ ರಾಜ ಧಾನಿಗೆ ಕಾವೇರಿ ನೀರನ್ನು ತಂದುಕೊಟ್ಟಿದ್ದಾರೋ ಆ ನೀರನ್ನು ಕುಡಿದಾಗ ಇಲ್ಲಿ ಎಲ್ಲರಿಗೂ ಕಾವುಏರಿತ್ತದೆ ನೀವು ಏರಿಸಿರತಕ್ಕಂಥ ಬೆಲೆ ಏನು ಇದೆ ಇದನ್ನು ನೋಡಿದರೆ ಕಾವೇರಿನೀರು ಕುಡಿದಂಥ ಜನರಿಗೆ ಕಾವು ಏರಿ ಹಣ ಕೊಡದೇಇರತಕ್ಕ ಪರಿಸ್ಥಿತಿಗೆ ಬಂದು ಮುಟ್ಟಿದ್ದಾರೆ. ಶ್ರೀಮಾನ್ ದೇವೇಗೌಡರು ಒದಗಿಸಿದಂಥ ಖಿಲಾತಿಗಳುಮತ್ತು ಅದರ ಆಧಾರದಮೇಲೆ ನಾವುನೋಡಿದರೆ ಇಷ್ಟುಬೆಲೆ ಹೆಚ್ಚು ಮಾಡಲಿಕ್ಕೆ ಕಾರಣ ಏನು ಎನ್ನುವುದು ಸ್ಪಷ್ಟವಾಗುತ್ತದೆ. ಆದುದರಿಂದ ಯಾರೋ ಮಾಡಿದ ತಪ್ಪಿಗೆ ಯಾರೋ ದಂಡ ತರಬೇಕಾದುದುದರೀತಿಯಾಗಿಯೂ ನ್ಯಾಯ ಸಮ್ಮತವಾದುದಲ್ಲ.ಅಷ್ಟೊಂದು ಖರ್ಚು ಏತಕ್ಕೆ ಆಯಿತು ? ಅನಾವಶ್ಯಕವಾಗಿ ಖರ್ಚುಮಾಡಿದ್ದಕ್ಕೆ ಕಾರಣಕರ್ತರು ಯಾರು ? ಸರ್ಕಾರದವರು ಯಾವುದೋ ಕಾರಣವನ್ನು ಮುಂದೊಡ್ಡಿ ಬೆಂಗಳೂರು ನಗರದ ನಾಗರಿಕರಮೇಲೆ ಹೊರೆಯನ್ನು ಹೆಚ್ಚಿಗೆ ಹಾಕಬಾರದು ಎನ್ನುವ ಮಾತನ್ನು ಸ್ಪಷ್ಟವಾಗಿ ಹೇಳಲಿಕ್ಕೆ ಆಪೇಕ್ಷಿಪಡುತ್ತೇನೆ. ಸ್ವಾಮಿ, ಕಷ್ಟಪಟ್ಟು ಶ್ರೀಮಾನ್ ಬಸವ ಲಿಂಗಪ್ಪನವರು ಅಧಿಕಾರದಲ್ಲಿದ್ದಾಗ ಕಾವೇರಿ ನೀರನ್ನು ರಾಜಧಾನಿಗೆ ತಂದರು. ಅವರು ಮಾಡಿದಂಥ ಒಳ್ಳೆಯ ಕೆಲಸಗಳಲ್ಲಿ, ಕಾವೇರಿ ನೀರನ್ನು ಬೆಂಗಳೂರನಗರಕ್ಕೆ ತಂದದು, ತಲೆಯಮೇಲೆ ಮಲವನ್ನು ಹೊರುವ ಪದ್ಧತಿಯನ್ನು ತಪ್ಪಿಸಿದ್ದು, ಕೊಳಚೆ ಪ್ರದೇಶಗಳ ನಿರ್ಮೂಲನೆ. ಸೈಟುಗಳನ್ನು ಹಂಚಿದ್ದು ಈ ನಾಲ್ಕು ಒಳ್ಳೆಯ ಕೆಲಸಗಳನ್ನು ಅವರು ಮಾಡಿದ್ದಾರೆ. ಅವರು ಮಾಡಿದ ಈ ಒಳ್ಳೆಯ ಕೆಲಸಗಳಿಗೆ ಅವರನ್ನು ಬೆಂಗಳೂರು ನಗರದ ನಾಗರಿಕರ ಪರವಾಗಿ ಅಭಿನಂದಿಸುತ್ತೇನೆ. ಯಾರು ಒಳ್ಳೆಯ ಕೆಲಸ ವನ್ನು ಮಾಡದಾಗ ಅವರನ್ನು ಕೆಳಕ್ಕೆ ಇಳಿಸಿದರೋ ಅವರೇ ಈಗ ಹತ್ತಿರದ ಸ್ನೇಹಿತರಾಗಿದ್ದಾರೆ. ಹೆಚ್ಚಿಗೆ ಪ್ರಸ್ತಾಪಿಸುವುದಕ್ಕೆ ಹೋಗುವುದಿಲ್ಲ. ಅದೇನೇ ಇರಲಿ, ಶ್ರೀಮಾನ್ ಬಸವಲಿಂಗಪ್ಪನವರನ್ನು ಧೃತರಾಷ್ಟ್ರ ಆಲಿಂಗನೆ ಮಾಡಬಾರದು. ಮಾಡಿದರೆ ಸಂತೋಷ, ಅದರಿಂದ ನಮಗೆ ಅಪಾಯವಿಲ್ಲ. ಅದೇನೇ ಇರಲಿ, ಬೆಂಗಳೂರು ನಗರದ ನಾಗರೀಕರಿಗೆ ಕಾವೇರಿ ನೀರನ್ನು ಕೊಡಿಸಿದರು. ಸ್ವಾಮಿ, ನಮ್ಮ ಸರ್ಕಾರ ದವರು ಎಲ್ಲದಕ್ಕೂ ತೆರಿಗೆಯನ್ನು ಹಾಕಿದ್ದಾರೆ. ಆದರೆ ಗಾಳಿಯೊಂದಕ್ಕೆ ತೆರಿಗೆಯನ್ನು ಹಾಕುವುದು ಬಿಟ್ಟಿದ್ದಾರೆ, ಕೊಡಗಿನ ಕಾವೇರಿ ಬೆಂಗಳೂರು ನಗರಕ್ಕೆ ಬಂತು ಇದಕ್ಕೆ ಸಂತೋಷ ಪಡಬೇಕು, ಆದರೆ ನೀರನ್ನು ಕುಡಿದರೆ ಹೊರಕ್ಕೆ ಬರುವ ಸ್ಥಿತಿ ಬಂದಿದೆ. ಏತಕ್ಕೆಂದರೆ ದುಡ್ಡನ್ನು ಕೊಡುವುದಕ್ಕೆ ಆಗುವು ದಿಲ್ಲ, ಜೊತೆಗೆ ಡಿ.ಡಿ ಟಿ. ಬೆರೆಸಿ ನೀರು ಕುಡಿಸುತ್ತಿದ್ದಾರೆ, ನೆಕ್ಸ್ಟ್ ಸ್ಟೇಜ್ ಫಾಲಿಡಾಲ್ ಹಾಕಿ ಕುಡಿ ಸುತ್ತಾರೋ ಏನೋ ಆದುದರಿಂದ ಸರ್ಕಾರದವರು ಬಹಳ ಒಳ್ಳೆಯ ರೀತಿಯೊಳಗೆ ಯೋಜನೆಗಳನು ಮಾಡಿದ್ದಾರೆ. ಅಂಥ ಯೋಜನೆಗಳನ್ನು ಕಾರ್ಯಗತ ಗೊಳಿಸುತ್ತಲೇ ಇರಿ. ಜನ ನಿಮಗೆ ತಕ್ಕ ರೀತಿ ಯಲ್ಲಿ ಬೆಂಬಲ ಕೊಡುತ್ತಾಇರುತ್ತಾರೆ.

ಶ್ರೀ ಎಸ್. ಎಂ, ಶೀರ್‌ನಾಳಿ ಚಂದ್ರಶೇಖರ್,—ಮಾನ್ಯ ಸದಸ್ಯರು ನೀರಿನ ಬಗ್ಗೆ ಬಹಳ ಕಾಳಜಿ ವಹಿಸುತ್ತಿದ್ದಾರೆ, ಯಾಕೋ ಗೊತ್ತಾಗುವುದಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ನೀವು ತುಂಗಾನದಿ ಜನ ಎಂದು ಗೊತ್ತಿದೆ. ನೀರು ಕುಡಿಯು ವುದು ನಮ್ಮ ಅಭ್ಯಾಸ. ಬೇರೆ ವಿಷಯ ನಮಗೆ ಅಷ್ಟಾಗಿ ಬೇಡ. ಅಧ್ಯಕ್ಷರೆ, ಸರ್ಕಾರದವರು ಬೆಂಗಳೂರು ನಾಗರಿಕರಿಗೆ ನೀರಿನ ಬೆಲೆಯನ್ನು ಹೆಚ್ಚುಮಾಡಿ ನೀರನು ಕುಡಿಸುವುದಕ್ಕೆ ಪ್ರಯತ್ನ

ಮಾಡುತ್ತಾ ಇದ್ದಾರೆ. ಆ ಪ್ರಯತ್ನವನ್ನು ಖಂಡಿತವಾಗಿಯೂ ಕೈ ಬಿಡಬೇಕು. ನಿಜವಾಗಿಯೂ ಅಷ್ಟು ಹಣವನ್ನು ನಿಗದಿಮಾಡಬಾರದು. ಶ್ರೀ ಶಾಮಣ್ಣನವರು ಹೇಳಿದಹಾಗೆ ಇದಕ್ಕೆ ಒಂದು ಕಮಿಟಿಯನ್ನು ನೇಮಕ ಮಾಡಿ ಆ ಮೂಲಕ ನೀರಿನ ದರವನ್ನು ನಿಗದಿ ಗೊಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ಕೆಲಸ ನಡೆಯ ಬೇಕಾದರೆ ಹೀಗೆಯೇ ನಡೆಯುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಜಲಮಂಡಳಿಗೆ ಕೊಟ್ಟರೆ ಪ್ರೆಸ್ ಕ್ಲಬ್ ಪಕ್ಕದಲ್ಲಿಯೇ ಇದೆ.

ಶ್ರೀ ಟಿ. ವಿ. ಮುನಿಸ್ವಾಮಿ.—ಮುಫತ್ತಾಗಿ ನೀರನ್ನು ಕೊಟ್ಟು ರೈತರ ಮೇಲೆ ತೆರಿಗೆಯನ್ನು ಹಾಕಿ ಎಂದು ಹೇಳುತ್ತೀರಾ ?

ಶ್ರೀ ಕೋಣಂದೂರು ಲಿಂಗಪ್ಪ.—ಎಷ್ಟು ಖರ್ಚು ಮಾಡಿದ್ದಾರೆ ಅದನ್ನು ಮಾತ್ರ ಬೆಂಗಳೂರು ನಾಗರಿಕರಿಗೆ ಹಾಕಿ. ಸ್ವಾಮಿ, ಸರ್ಕಾರದವರು ಅನಾವಶ್ಯಕವಾಗಿ ಖರ್ಚುಮಾಡಿದನ್ನು ನಮ್ಮ ಬೆಂಗಳೂರು ನಗರದ ನಾಗರಿಕರ ಮೇಲೆ ತೆರಿಗೆಯ ರೂಪದಲ್ಲಿ ಹಾಕುವುದನ್ನು ಕೈಬಿಡಬೇಕೆಂದು ಹೇಳುತ್ತೇನೆ ನಾಗರಿಕರು ಎಷ್ಟು ಹಣವನ್ನು ಕೊಡಲಿಕ್ಕೆ ಸಾಧ್ಯವೋ ಅಷ್ಟನ್ನು ಮಾತ್ರ ಅವರಿಂದ ವಸೂಲು ಮಾಡಬೇಕೇ ಹೊರತು, ಹೆಚ್ಚು ಹೊರೆಯನ್ನು ಹೊರಿಸಬಾರದು. ಹೆಚ್ಚು ಹೊರೆಯನ್ನು ಹೊರಿಸಿದರೆ ಬಡವರಿಗೆ ತುಂಬಾ ತೊಂದರೆಯಾಗುತ್ತದೆ ಎಂದು ಹೇಳುತ್ತೇನೆ. ಶ್ರೀಮಾನ್ ದೇವೇಗೌಡರು ಹೇಳಿದಹಾಗೆ, ಕೋಟಿಗಟ್ಟಲೆ ಲಕ್ಷಗಟ್ಟಲೆ ಲೂಟಿ ಹೊಡೆಯುತ್ತಿದ್ದಾರೆ,ಅದರ ಬಗ್ಗೆ ಕಾಳಜಿ ಇಲ್ಲ, ವಿಂಧ್ಯ ಪರ್ವತದಿಂದ ಚಾಮುಂಡಿ ಬೆಟ್ಟದವರೆಗೆ ವಿಶೇಷವಾಗಿ ಏನೆಲ್ಲ ಬಡವರನ್ನು ಉದ್ಧಾರ ಮಾಡುವುದಕ್ಕೆ ಅವತಾರ ಎತ್ತಿ ಬಂಥ ದೈವಾಂಶ ಸಂಭೂತರು, ಪುಣ್ಯಾತ್ಮರು ಅಂಥ ಕಾರ್ಲ್ ಮಾರ್ಕ್ಸ್ ಮತ್ತು ಡಾ. ಲೋಹಿಯಾ ಅವರು ಬಂದರು. ಆದರೆ ಇವರು ಇಲ್ಲಿ ಕ್ವಾರಲ್ ಮಾರ್ಕ್ಸ್ ಆಗಿದ್ದಾರೆ. ಸ್ವಾತಂತ್ರ ಸಮಾಜವಾದ ಮಾಡುತ್ತೇವೆಂದು ಕ್ವಾರಲ್ ಮಾರ್ಕ್ಸ್ ಆಗಿ ಕೂತಿದ್ದಾರೆ, ಬಡವರನ್ನು ಉದ್ಧಾರ ಮಾಡುವುದಕ್ಕೆ ನಿಮ್ಮಲ್ಲಿ ಪ್ರಾಮಾಣಿಕತೆ, ಕಳಕಳಿ ಇದ್ದರೆ,...

MR. DEPUTY SPEAKAR —Whose follower is the hon. Member ?

SRI KONANDUR LINGAPPA.—I am a follower of Dr. Lohia.

MR. DEPUTY SPEAKER —Does he believe in Karlmrax ?

SRI KONANDUR LINGAPPA.—We respect him aud we believe in Dr. Lohia.

MR. DEPUTY SPEAKAR.—Then, the hon. Member must believe in his Cangress manifesto. He is landing in truble

ಶ್ರೀಮತಿ ಇ. ಇ. ವಾಜ್.—ಉದ್ಧಾರ ಮಾಡುವವರನ್ನು ಬಡವರು ನಂಬುತ್ತಾರೆ.

MR. DEPUTY SPEAKER.—The tenents of socialism and communism are different and the hon. Member is landing him self in trouble.

ಶ್ರೀ ಕೋಣಂದೂರು ಲಿಂಗಪ್ಪ.—ಬಡವರನ್ನು ಉದ್ಧಾರಮಾಡುತ್ತೇವೆಂದು ಹೇಳುತ್ತೀರಿ. ಕನಿಷ್ಟ ಪಕ್ಷ ಬೆಂಗಳೂರು ನಾಗರಿಕರಿಗೆ ನೀರನ್ನು ಕೊಡಿ ಸಾಕು. ಮಾನ್ಯ ಅಧ್ಯಕ್ಷರೆ, ಭೂಮಿಯನ್ನು ಹಂಚುತ್ತೇವೆಂದು ಹೊರಟರು. ೧೯೭೦ನೇ ಇಸವಿಯಲ್ಲಿ ಸಮಾಜವಾದ. ಬಂತು, ಅದು ಎಂಥ ಸಮಾಜವಾದ ಮಾರ್ವಾಡಿ ಸಮಾಜವಾದ ಮಾರ್ವಾಡಿ ಸಮಾಜವಾದ, ತಂದಿರತಕ್ಕ ಇವರು ಎಲ್ಲರಿಗೂ ಹೇಳುತ್ತಾರೆ, ಅದರೆ ಭೂಮಿ ಮಾತ್ರ ಇಲ್ಲ. ಆಕಾಶ ಹಂಚುತ್ತೇವೆಂದು ಹೇಳಿದರು, ಅದು ಬಡವರಿಗೆ ವಿಶೇಷವಾಗಿ ಈರೀತಿ ಬರಿಯ ಮಾತುಗಳಲ್ಲಿಯೇ ಘೋಷಣೆಗಳನ್ನು ಕೊಟ್ಟು, ಅವರಿಗೆ ನೀರನ್ನು ಕುಡಿಸಿ ಹೊಟ್ಟೆ ತುಂಬಿಸುವುದು ಬೇಡ. ತಮ್ಮಲ್ಲಿರತಕ್ಕ ಅಧಿಕಾರವನ್ನು ಉಪಯೋಗಿಸಿಕೊಂಡು ನಿಜವಾಗಿಯೂ ಬಡವರಿಗೆ ಎಷ್ಟು ಅಭಿವೃದ್ಧಿ ಮಾಡಲು ಸಾಧ್ಯವೋ ಅಷ್ಟು ಮಾಡಿ. ಕೋಟಿಗಟ್ಟಲೆ ಹಣ ಲೂಟಿ ಮಾಡಿ ಬಡವರು ಕಣ್ಣೀರನ್ನು ಸುರಿಸುವುದಕ್ಕೆ ಅವಕಾಶ ಕೊಡಬೇಡಿ. ಚಾಮರಾಜಪೇಟೆ ಚುನಾವಣೆ ಬರುತ್ತಿದೆ ಶ್ರೀ ಬಸವಲಿಂಗಪ್ಪನವರು ಬರುತ್ತಾರೋ ಏನೋ, ಆರೋಗ್ಯದೃಷ್ಟಿಯಿಂದ ಬರದೆ ಇದ್ದರೆ ಒಳ್ಳೆಯದು, ಏತಕ್ಕೆಂದರೆ, ಕೆಲವು ಏರಿಯಾದಲ್ಲಿ ಕೆಲವರಿಗೆಮಾತ್ರ ಗೌರವವಿರುತ್ತದೆ. ಅವರು ಬಂದರೆ ಅವರ ಮೂಲಕ ಯಾರಿಗಾದರೂ ಗೌರವ ತರುವ ಕೊಡುವ ಪರಿಪಾಠಕ್ಕೆ ಏತಕ್ಕ ಹೋಗಬೇಕು ಬಡವರ ಬಗ್ಗೆ ಕನಿಷ್ಟಪಕ್ಷ ನೀರನ್ನಾದರೂ ಕೊಡಿ. ಕೇಳಿಕೊಳ್ಳುತ್ತಾ ಇದ್ದೇನೆ.

MR. DEPUTY SPEAKER.—ನಾನ್ ಅಫಿಶಿಯಲ್ ರೆಸಲ್ಯೂಶನ್ ಚರ್ಚೆಮಾಡುವಾಗ we have to restrite to the scope of the Resolution. One cannot go on speaking like a political philosopher.

ಶ್ರೀ ಕೋಣಂದೂರು ಲಿಂಗಪ್ಪ.—ಈಗ ಪಬ್ಲಿಕ್ ಫೌಂಟನ್ಸ್ ಕೀಳುತ್ತಾ ಇರುವುದರಿಂದ ಬೆಂಗಳೂರು ನಾಗರೀಕರಿಗೆ ಬಹಳ ತೊಂದರೆಯಾಗುತ್ತಿದೆ.

ಶ್ರೀ ಎ. ವಿ. ಮುನಿಸ್ವಾಮಿ.—ಈಗ ಸರ್ಕಾರದವರು ರೈತರಿಂದ ಲೆವಿ ವಸೂಲಿ ಮಾಡಿ ಪಟ್ಟಣಗಳಿಗೆ ನೀರು ಸಪ್ಲೈ ಮಾಡುತ್ತಿದ್ದಾರೆ. ಹಾಗೆ ರೈತರಿಗೆ ಕಂದಾಯ ಹಾಕಿಬಿಟ್ಟು ಬೆಂಗಳೂರಿನಲ್ಲಿ ಫ್ರೀ ನೀರು ಕೊಡಬೇಕು ಎಂದು ಹೇಳುತ್ತೀರಾ ?

ಶ್ರೀ ಕೋಣಂದೂರು ಲಿಂಗಪ್ಪ.—ಅಧ್ಯಕ್ಷರೆ, ಇವೊತ್ತು ಪಬ್ಲಿಕ್ ಟ್ಯಾಪ್‌ಗಳನ್ನು ಕೀಳಿಸಿ ಬಡವರನ್ನು ಉದ್ಧಾರ ಮಾಡುತ್ತೇವೆ ಎಂದು ಹೇಳುವ ಸರ್ಕಾರ ಇವತ್ತಿನ ದಿವಸ ಸ್ಲಮ್ ಏರಿಯಾಗಳಲ್ಲಿ ಇದ್ದಂಥ ಟ್ಯಾಪ್‌ಗಳನ್ನು ತೆಗೆಸಿ ಅಲ್ಲಿಂದ್ದಂಥ ಬಡ ಜನರಿಗೆ ನೀರು ಸಿಕ್ಕದಂತೆ ಮಾಡಿದಂತೆ ಮಾಡಿದ್ದಾರೆ. ಮಿತವ್ಯಯ ಮಾಡಬೇಕು ಎಂದು ಈ ರೀತಿ ಮಾಡುತ್ತಿದ್ದಾರೆ. ಈಗ ಮಾನ್ಯ ವಿರೋಧ ಪಕ್ಷದ ನಾಯಕರಾದ ಮಾನ್ಯ ದೇವೇಗೌಡರು ಕೊಟ್ಟಂಥ ಉತ್ತರವನ್ನು ನೋಡಿದರೆ ಎಲ್ಲಿ ಮಿತವ್ಯಯ ಆಗಿದೆ ಎನ್ನುವುದು ಚನ್ನಾಗಿ ಗೊತ್ತಾಗುತ್ತದೆ. ಇವೊತ್ತಿನ ದಿವಸ ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ಪಿ.ಡಬ್ಲ್ಯು.ಡಿ. ಮಂತ್ರಿಗಳ ಮನೆಯ ಪಕ್ಕದಲ್ಲಿರತಕ್ಕ ಅಶೋಕ ಹೋಟಲನ್ನು ಮತ್ತೆ ಎಕ್ಸ್‌ಟೆಂಡ್ ಮಾಡುತ್ತಿದ್ದಾರೆ ಅಲ್ಲಿಗೆ ಕೋಲೆಗಟ್ಟಲೆ ಹಣವನ್ನು ಇವರು ತೆಗೆದುಕೊಂಡು ಹೋಗಿ ಖರ್ಚುಮಾಡುತ್ತಾರೆ. ಅದರ ಬದಲು ಆ ಹಣವನ್ನು ಪಬ್ಲಿಕ್ ಟ್ಯಾಪ್‌ಗಳನ್ನು ಹಾಕುವುದಕ್ಕೆ ಕೊಟ್ಟರೆ ಅನುಕೂಲವಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಅಲ್ಲದೇ ಇವರು ಈಗ ಬಡವರಿಗೆ ನೀರನ್ನು ಕೊಡುತ್ತಾ ಇಲ್ಲ, ಈಗ ಕೊಟ್ಟಿರತಕ್ಕ ನೀರಿನ ನಲ್ಲಿಗಳನ್ನು ಕೀಳಿಸುತ್ತಾ ಇದ್ದಾರೆ. ಸ್ವಾಮಿ, ಇವರು ಬಡವರನ್ನು ಉದ್ಧಾರ ಮಾಡುತ್ತೇವೆ ಎಂದು ಅವರ ಹೆಸರನ್ನು ಹೇಳಿಕೊಂಡು ಬೇಕಾದಷ್ಟು ದುಡ್ಡು ಖರ್ಚುಮಾಡುತ್ತಿದ್ದಾರೆ. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಲಿಕ್ಕೆ ಇಚ್ಛಿಸುತ್ತೇನೆ, ಬೆಂಗಳೂರಿನ ನಾಗರೀಕರಾದ 20 ಲಕ್ಷ ಜನರು ಈ ನೀರಿನ ರೇಟನ್ನು ಹೆಚ್ಚಿಸುತ್ತಾ ಇರುವುದನ್ನು ನೋಡಿ, ಕಾವೇರಿ ತಮ್ಮ ವಿಧಾನಸೌಧವನ್ನು ಮುತ್ತಿಗೆ ಹಾಕಿ ತಮಗೆ ನೀರು ಕುಡಿಸಿ ಕಳುಹಿಸುತ್ತಾರೆ. ಅಂತಹ ಅವಕಾಶ ಕಲ್ಪಿಸಿ ಕೊಳ್ಳುವುದಕ್ಕೆ ತಾವು ಸಿದ್ಧರಾಗಿದ್ದೀರಿ. ಇಂತಹ ಒಂದು ಪರಿಸ್ಥಿತಿ ನಾಳೆ ವಿಕೋಪಕ್ಕೆ ಹೋಗತಕ್ಕದ್ದನ್ನು ತಪ್ಪಿಸಿಕೊಳ್ಳಬೇಕು ಎನ್ನುವುದಾದರೆ ಶ್ರೀಮಾನ್ ಶಾಮಣ್ಣನವರು ಏನು ಒಂದು ನಿರ್ಣಯ ತಂದಿದ್ದಾರೆ ಅದನ್ನು ಒಪ್ಪಿಕೊಳ್ಳಬೇಕೆಂದು ಹೇಳುತ್ತೇನೆ. ಇದರಿಂದ ನಿಮ್ಮ ಸರ್ಕಾರಕ್ಕೆ ಏನೂ ಅವಿಶ್ವಾಸ ಬರುವಂತೆ ಮಾಡಿಲ್ಲ. ಇದರ ಬಗ್ಗೆ ಸರಿಯಾದ ಲೆಕ್ಕಾಚಾರ ಹಾಕಿ ನೀರಿನ ದರ ನಿಗದಿ ಮಾಡಬೇಕು. ಇದರಲ್ಲಿ ಪ್ರಿಸ್ಟೀಜ್ ಪ್ರಶ್ನೆ ಏನು ಇದೆ ? ಆದುದರಿಂದ ತಾವು ಪ್ರಿಸ್ಟೀಜ್ ಪ್ರಶ್ನೆ ಇಟ್ಟುಕೊಳ್ಳದೇ ಇವೊತ್ತು ಒಂದು ಸಮಿತಿಯನ್ನು ರಚನೆ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ನಾನು ಮತ್ತೊಮ್ಮೆ ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುವುದು ಏನು ಎಂದರೆ, ಮಾನ್ಯ ಶಾಮಣ್ಣನವರು ತಂದಿರತಕ್ಕ ನಿರ್ಣಯವನ್ನು ಒಪ್ಪಿಕೊಳ್ಳಬೇಕು ಎಂದು ಹೇಳಿ, ಇಷ್ಟು ಹೊತ್ತು ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಸಿ. ಬೈರೇಗೌಡ (ವೇಮಗಲ್).—ಮಾನ್ಯ ಅಧ್ಯಕ್ಷರೆ, ಈ ದಿವಸ ಈ ಸದನದ ಹಿರಿಯ ಸದಸ್ಯರಲ್ಲಿ ಒಬ್ಬರಾದ ಮತ್ತು ಬೆಂಗಳೂರು ನಗರದಿಂದ ಬಂದಿರತಕ್ಕಂಥ ಶ್ರೀಮಾನ್ ಶಾಮಣ್ಣನವರು ಬೆಂಗಳೂರು ನಗರ ವಾಸಿಗಳಿಗೆ ನೀರನ್ನು ಕೊಡುವುದರಲ್ಲಿ ಒಂದು ತಜ್ಞರ ಸಮಿತಿಯನ್ನು ನೇಮಕ ಮಾಡಿ ಅದರ ಬೆಲೆಯನ್ನು ನಿಗದಿಪಡಿಸಬೇಕು ಎಂದು ನಿರ್ಣಯ ತಂದಿದ್ದಾರೆ. ಈ ನಿರ್ಣಯವನ್ನು ನಾನು ಸ್ವಾಗತಿಸಿ ಕೆಲವು ಮಾತುಗಳನ್ನು ಹೇಳಲಿಕ್ಕೆ ಇಚ್ಛಿಸುತ್ತೇನೆ. ಅಧ್ಯಕ್ಷರೆ, ಈ ನಿರ್ಣಯದ ಮೇಲೆ ವಿರೋಧ ಪಕ್ಷದ ನಾಯಕರಾದ ಮಾನ್ಯ ದೇವೇಗೌಡರು ಮಾತನಾಡುತ್ತಾ ಈ ಕೆಲಸ ನಡೆಯತಕ್ಕ ಸಂದರ್ಭದಲ್ಲಿ ಯಾವರೀತಿ ದುಂದು ವೆಚ್ಚವಾಗಿದೆ ಎನ್ನುವುದನ್ನು ಕಾರಣ ಕೊಟ್ಟು ತಿಳಿಸಿದ್ದಾರೆ. ಅಲ್ಲದೇ ಪ್ರತಿಯೊಂದು ಹಂತದಲ್ಲೂ ಯಾವರೀತಿ ಹಣ ಪೋಲಾಗಿದೆ ಎನ್ನುವುದರ ಬಗ್ಗೆ ವಿವರವಾಗಿ ಹೇಳಿದ್ದಾರೆ. ಅದೇರೀತಿಯಲ್ಲಿ ಹಿಂದೆ ಸ್ವಲ್ಪ ಕಾಲ ಈನಗರದ ಜಲಮಂಡಲಿಯ ಕರ್ತವ್ಯವನ್ನು ನಿರ್ವಹಿಸಿದ ಶ್ರೀಮಾನ್ ಬಸವಲಿಂಗಪ್ಪನವರೂ ಇದ್ದಾರೆ. ಮಾನ್ಯ ವಿರೋಧಪಕ್ಷದ ನಾಯಕರಾದ ದೇವೇಗೌಡರು ಮಾಡಿದಂತ ಕೆಲವು ಗುರುತರವಾದ ಆಪಾದನೆಗಳ ಬಗ್ಗೆ ಶ್ರೀಮಾನ್ ಬಸವಲಿಂಗಪ್ಪನವರು ಮಾತನಾಡುತ್ತಾ ಅಲ್ಲಿರತಕ್ಕ ಅಧಿಕಾರಿಗಳ ಮೇಲೆ ಏಕೆ ಶ್ರೀಮಾನ್ ದೇವೇಗೌಡರು ಚಾರ್ಜಸ್ ಮಾಡಬೇಕು ಎಂದು ಹೇಳಿದರು.

ಉಪಾಧ್ಯಕ್ಷರು :—ಅದನ್ನೆಲ್ಲಾ ನಾವು ಕೇಳಿದ್ದೇವೆ, ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ಹೇಳಬೇಕು.

ಶ್ರೀ ಸಿ. ಬೈರೇಗೌಡ.—ಇವೊತ್ತು ನನಗೆ ಬಂದರತಕ್ಕ ಸಂಶಯ ಏನು ಎಂದರೆ, ಮಾನ್ಯ ಬಸವ ಲಿಂಗಪ್ಪನವರು ಒಂದೊಂದು ಸಂದರ್ಭದಲ್ಲಿ ಒಂದೊಂದು ತರಹ ಮಾತನಾಡುತ್ತಾರೆ ಅವರು ತಮ್ಮ ಮಂತ್ರಿಪದವಿ ಬಿಟ್ಟು ಬಂದಮೇಲೆ ಕೆಲವು ರೀತಿ ನೀತಿಗಳನ್ನು ಕಾರ್ಯಗತ ಮಾಡಲಿಕ್ಕೆ ಇವೊತ್ತಿನ ದಿವಸ ಅಧಿಕಾರಿಗಳು ಅಡ್ಡಿ ಬರುತ್ತಾರೆ ಎಂದು ಮಾನ್ಯ ಬಸವಲಿಂಗಪ್ಪನವರು ಹೇಳಿರತಕ್ಕ ಮಾತನ್ನು ಅವರಿಗೆ ನೆನಪು ಮಾಡಿಕೊಡುತ್ತೇನೆ ಇವೊತ್ತು ಆಡಳಿತ ನಡೆಸುತ್ತಾ ಇರತಕ್ಕ ಪಕ್ಷದವರು ಸರಿಯಾದ ರೀತಿಯಲ್ಲಿ, ನ್ಯಾಯವಾದ ಬೆಲೆಯಲ್ಲಿ ನೀರು ಕೊಡಬೇಕು ಎಂದು ತೀರ್ಮಾನ ಮಾಡಬೇಕು. ಇವೊತ್ತಿನ ದಿವಸ ಮಾನ್ಯ ದೇವೇಗೌಡರು ಮೊದಲಿಂದ ಕಡೆಯವರೆಗೂ ಯಾವರೀತಿ ಹಣ ದುರುಪಯೋಗವಾಗಿದೆ ಎಂದು ತಿಳಿಸಿದ್ದಾರೆ, ಇವೊತ್ತಿನದಿವಸ ನಾವು ಯಾರನ್ನು ಕೇಳಬೇಕು ? ಮಾನ್ಯ ಬಸವಲಿಂಗಪ್ಪನವರು ಸರ್ಕಾರ ಕೊಟ್ಟಂಥ ನಿರ್ದೇಶನ ಕಾರ್ಯಗತ ಮಾಡುತ್ತಾ ಇಲ್ಲ ಎಂದು ಹೇಳುತ್ತಾರೆ. ಆದರೆ ಇವೊತ್ತು ಕಾರ್ಯಕರ್ತರಾಗಿರತಕ್ಕವರು ಯಾರು ? ಮಾನ್ಯ ದೇವೇಗೌಡರು ಹೇಳಿದರು ಯಾರು ಅಧಿಕಾರಿಗಳು ಇದ್ದಾರೆ, ಅವರು ಮಾಡತಕ್ಕಂಥ ದುಂದುಗಾರಿಕೆಗೆ ಅಲ್ಲಿ ನಡೆದಿರತಕ್ಕ ಭ್ರಷ್ಟಾಚಾರಕ್ಕೆ ಬೆಂಗಳೂರಿನ ಜನತೆ ಉಪಯೋಗಿಸತಕ್ಕ ನೀರಿನ ಮೇಲೆ ಬೆಲೆ ಜಾಸ್ತಿ ಬೀಳಬೇಕಾಗಿ ಬಂದಿದೆ ಎಂದು.

ಉಪಾಧ್ಯಕ್ಷರು :—ಅವರು ಹೇಳಿದ್ದು ಕೇಳಿ ಆಯಿತು, ತಮ್ಮ ಅಭಿಪ್ರಾಯ ಹೇಳಿ.

ಶ್ರೀ ಸಿ ಬೈರೇಗೌಡ.—ಆದುದರಿಂದ, ಈಗ ಏನಾಗಿದೆ ಎಂದರೆ, ಈ ಅಧಿಕಾರಿಗಳು ಮಾಡಿರತಕ್ಕ ದುರ್ವ್ಯವಹಾರದಿಂದ ಬೆಂಗಳೂರು ನಗರದ ನಾಗರೀಕರು ಹೆಚ್ಚು ಹಣವನ್ನು ಕೊಡತಕ್ಕ ಪರಿಸ್ಥಿತಿ ಬಂದಿದೆ ಕೆಲವು ಜನ ಮಾನ್ಯ ಸದಸ್ಯರು, ನೀರು ಪಡೆಯುತ್ತಾ ಇರತಕ್ಕವರು ಹಣ ಕೊಡಬಾರದೇ ಗ್ರಾಮಾಂತರ ಪ್ರದೇಶದಲ್ಲಿರತಕ್ಕವರಿಗೆ ಈ ಸೌಲಭ್ಯವನ್ನು ಒದಗಿಸಿಕೊಡುತ್ತಿದ್ದಾರೆಯೇ ಎಂದು ಕೇಳಿದರು. ಅಂಥಾ ಮಾನ್ಯ ಸದಸ್ಯರಿಗೆ ನಾನು ಉತ್ತರ ಹೇಳುವುದು ಏನೆಂದರೆ ಬೆಂಗಳೂರು ನಗರದ ನಾಗರೀಕರು ಪುಕ್ಕಟೆಯಾಗಿ ನೀರು ಕೊಡಿ ಎಂದೇನೂ ಕೇಳುತ್ತಾ ಇಲ್ಲ. ನಾಗರೀಕರಿಗೆ ನೀರು ಕೊಡುವಾಗ, ಕೊಡುವ ನೀರಿಗೆ ಯೋಗ್ಯವಾದ ಬೆಲೆಯನ್ನು ನಿಗದಿ ಮಾಡಬೇಕೆಂಬುದು ಈಗ ತಂದಿರತಕ್ಕ ನಿರ್ಣಯದ ಸಾರಾಂಶವಾಗಿದೆ. ಹಾಗೆ, ಒಂದು ಯೋಗ್ಯವಾದ ಬೆಲೆಯನ್ನು ನಿಗದಿ ಮಾಡುವ ಸಲುವಾಗಿಯೇ ಒಂದು ಸಮಿತಿ ಮಾಡ ಬೇಕೆಂದು ಅಭಿಪ್ರಾಯವೇ ವಿನಃ ಕೆಳಮಟ್ಟದ ವರ್ಗವಾಗಲೀ ಮೇಲ್ಮಟ್ಟದ ವರ್ಗವಾಗಲೀ ಪುಕ್ಕಟೆಯಾಗಿ ನಮಗೆ ನೀರನ್ನು ಸರಬರಾಜು ಮಾಡಿ ಎಂದು ಕೇಳುತ್ತಾ ಇಲ್ಲ. ಮಾನ್ಯ ಸದಸ್ಯರಾದ ಶ್ರೀಮಾನ್ ಶಾಮಣ್ಣನವರ ಉದ್ದೇಶವಾದರೂ ಕೂಡ ಇದೇ. ಕಾವೇರಿ ನದಿ ನೀರನ್ನು ಬೆಂಗಳೂರು ನಗರದ ನಾಗರೀಕರಿಗೆ ಒದಗಿಸುವ ಯೋಜನೆ ಮೊಟ್ಟಮೊದಲು ೧೯೬೪ನೇ ಇಸವಿಯಲ್ಲಿ ಪ್ರಾರಂಭವಾಗಿ, ೧೯೬೯ ರೊಳಗೆ ಅಂದರೆ, ೫ ವರ್ಷದ ಅವಧಿಯೊಳಗೆ ಮುಗಿಯಬೇಕಾಗಿತ್ತು ಒರಿಜನಲ್ ಎಸ್ಟಿಮೇಟ್ ಪ್ರಕಾರ ೬೦ ಮಿಲಿಯನ್ ನೀರನ್ನು ಸರಬರಾಜು ಮಾಡುವುದಕ್ಕೆ ೩೯ ಕೋಟಿ ರೂಪಾಯಿ ಅಂದಾಜು ಮಾಡಲಾಗಿತ್ತು. ಅದಲ್ಲದೆ, ಈ ಕೆಲಸ ೫ ವರ್ಷದೊಳಗೇ ಮುಗಿಯಬೇಕೆಂದು ಕೂಡ ನಿಗದಿಗೊಳಿಸಲಾಗಿತ್ತು. ಮೊದಲು ಎಸ್ಟಿಮೇಟ್ ಮಾಡುವಾಗ, ಸಿಮೆಂಟ್ ಪೈಪುಗಳನ್ನು ಉಪಯೋಗಿಸಿ, ತನ್ಮೂಲಕ ಕಡಮೆ ಖರ್ಚಿನಲ್ಲಿ ಬೆಂಗಳೂರು ನಗರದ ನಾಗರಿಕರಿಗೆ ನೀರನ್ನು ಒದಗಿಸುವ ಯೋಜನೆ ಆಗಿತ್ತು. ಆದರೆ, ಸಿಮೆಂಟ್ ಪೈಪ್ ಹಾಕುವುದನ್ನು ಕೈಬಿಟ್ಟು ಉಕ್ಕಿನ ಪೈಪುಗಳನ್ನು ಏತಕ್ಕೆ ಹಾಕಿದರು ಎಂಬುದು ನನಗೆ ಇನ್ನು ಅರ್ಥವಾಗುತ್ತಾ ಇಲ್ಲ ಏಕೆಂದರೆ ಹೊರ ದೇಶದಿಂದ ಬಿನ್ನಿ ಅಂಡ್ ಕಂಪನಿ ಅವರು ವರ್ಲ್ಡ್ ಬ್ಯಾಂಕಿನ ಕನ್ಸಲ್ಟೆಂಟ್ಸ್ ಬಂದು............

ಶ್ರೀ ಬಿ ಬಸವಲಿಂಗಪ್ಪ.—ಈಗ ಅದೆಲ್ಲಾ ಮುಗಿದು ಹೋಗಿದೆ, ಹೊಸದೇನಾದರೂ ಇದ್ದರೆ ಹೇಳಿ.

ಶ್ರೀ ಸಿ. ಬೈರೇಗೌಡ —ಏನೇನು ನಡೆದಿದೆ ಎಂಬುದನ್ನು ಮಾನ್ಯ ಸದಸ್ಯರೇ ಹೇಳಿಬಿಟ್ಟರೆ, ಅದೇ ಹೊಸ ಕಥೆಯಾಗುತ್ತದೆ. ಅವರು ಅಲ್ಲಿ ಆಡಳಿತದಲ್ಲಿ ಇದ್ದಂಥವರು; ಅಧಿಕಾರ ನಡೆಸಿದಂಥವರು; ತಮಗೆ ಮೊದಲಿನಿಂದ ಕೊನೆಯವರೆಗೆ ನಡೆದದ್ದೆಲ್ಲಾ ಗೊತ್ತಿರುತ್ತದೆ. ಆದುದರಿಂದ, ಮಾನ್ಯ ಬಸವ ಲಿಂಗಪ್ಪನವರು ಅದನ್ನು ಹೇಳದೇ ಇರುವುದರಿಂದ, ನಾವು ನಮಗೆ ಗೊತ್ತಿರುವುದನ್ನು ಹೇಳಬೇಕಾಗುತ್ತದೆ ನಾನು ಈಗಲೂ ಕೇಳುತ್ತೇನೆ, ಸಿಮೆಂಟಿನಲ್ಲಿ ಮಾಡಿದಂಥ ಪೈಪುಗಳನ್ನು ಕೈ ಬಿಟ್ಟು ಉಕ್ಕಿನ ಪೈಪುಗಳನ್ನು ಹಾಕಿರುವುದು ಏತಕ್ಕೆ ಎನ್ನುವುದು ನನಗೆ ಇನ್ನೂ ಅರ್ಥವಾಗಿಲ್ಲ. ಎಂದು ಕಾವೇರಿ ನದಿಯಿಂದ ಬೆಂಗಳೂರು ನಗರಕ್ಕೆ ನೀರು ತರಬೇಕಾದರೆ, ೬೦ ಮಿಲಿಯನ್ ಗ್ಯಾಲನ್‌ಗೆ ೩೯ ಕೋಟಿ ರೂಪಾಯಿಗಳು ಖರ್ಚಾಗುತ್ತದೆ ಎಂದು ಅಂದಾಜು ವೆಚ್ಚ ಮಾಡಲಾಗಿತ್ತು. ಆದರೆ, ಈಗ ಬೆಂಗಳೂರು ನಗರಕ್ಕೆ ಬರುತ್ತಾ ಇರತಕ್ಕದ್ದು ಕೇವಲ ೩೦ ಮಿಲಿಯನ್ ಗ್ಯಾಲನ್ ನೀರು ಮಾತ್ರ ಇದಕ್ಕಾಗಿ ಈಗ ೩೬ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಅಂದರೆ, ಈಗ ಬರುತ್ತಾ ಇರುವುದು ನಮಗೆ ಅರ್ಧದಷ್ಟು

ನೀರು ಮಾತ್ರ ಹಣ ಖರ್ಚಾಗಿರತಕ್ಕದ್ದು ಪೂರ್ತಿ, ಆದರೆ ನೀರು ಬರುತ್ತಾ ಇರುವುದು ಅರ್ಧ. ಯಾವುದೇ ಸರಕಾರ ಆಡಳಿತದಲ್ಲಿರಲಿ, ಅದು ನಮಗೆ ಮುಖ್ಯವಲ್ಲ. ಯಾವುದೇ ಅಧಿಕಾರಿ ಇರಲಿ, ನಮಗೆ ಅದು ಮುಖ್ಯವಲ್ಲ, ಇಲ್ಲಿ ಕುಳಿತಿರತಕ್ಕ ತಾವುಗಳು ನಮಗೆ ಖಂಡಿತವಾಗಿಯೂ ಮುಖ್ಯವಲ್ಲ ಎಂದು ಹೇಳುತ್ತೇನೆ. ನಮಗೆ ಮುಖ್ಯವಾಗಿ ಬೇಕಾಗಿರತಕ್ಕದ್ದು ಏನು ಎಂದರೆ, ಇವತ್ತಿನ ದಿವಸ ಜನರು ನೀರು ಕುಡಿಯದೆ ಬದುಕಿರಲಾರರು, ಅವರು ನೀರು ಕುಡಿಯಬೇಕಾದುದು ಅತಿ ಅವಶ್ಯಕವಾಗಿದೆ. ಇವತ್ತಿನ ದಿವಸ ನಮಗೆ ನದಿಯಲ್ಲಿ ನೀರು ಸಿಗುತ್ತಾ ಇದೆ ಆ ನದಿಯಿಂದ ನೀರನ್ನು ತರುವಾಗ, ಅದು ಯಾವುದೇ ಸರಕಾರ ಇರಲಿ, ವ್ಯವಹಾರಿಕವಾಗಿ, ಈ ಯೋಜನೆಯನ್ನು ಮಾಡಿದ್ದರೆ, ಕೇವಲ ಅರ್ಧದಷ್ಟು ನೀರನ್ನು ತರುವುದಕ್ಕೆ ೩೬ ಕೋಟಿ ರೂಪಾಯಿಗಳಷ್ಟು ಹಣ ಖರ್ಚು ಆಗುತ್ತಾ ಇರಲಿಲ್ಲವೆಂದು ನಾನು ಈ ಸಂದರ್ಭದಲ್ಲ ಹೇಳಬೇಕಾಗಿದೆ. ಇದನ್ನು ಮಾನ್ಯ ಮುಖ್ಯ ಮಂತ್ರಿಗಳೂ ಕೂಡ ಹಿಂದೆ ಪ್ರಸ್ತಾಪ ಮಾಡಿದ್ದರು. ಬಂಡವಾಳಶಾಹೀ ಪದ್ಧತಿಯಲ್ಲಿ ಲಂಚಗುಳಿತನವನ್ನು ತಡೆಗಟ್ಟುವುದು ಕಷ್ಟಸಾಧ್ಯ ಎಂದು ಹೇಳುತ್ತಿದ್ದರು. ಮಾನ್ಯ ಮುಖ್ಯ ಮಂತ್ರಿಗಳು ಮಂಡಿಸಿದಂಥ ವಾದವನ್ನು ನಾನಾದರೂ ಕೂಡ ಸ್ವಲ್ಪಮಟ್ಟಿಗೆ ಒಪ್ಪುತ್ತೇನೆ. ಏಕೆಂದರೆ ಬಂಡವಾಳಶಾಹಿ ಪದ್ಧತಿ ಎಂದರೆ ಕರಪ್‌ಕ್ಷನ್ ಕರಪ್‌ಷನ್ ಎಂದರೆ ಬಂಡವಾಳಶಾಹಿ ಪದ್ಧತಿ. ಮಾನ್ಯ ಮುಖ್ಯ ಮಂತ್ರಿಗಳು ಹೇಳುವಂಥ ವಾದಕ್ಕೆ ನಾನೇನೂ ಬಹಳ ದೂರದಲ್ಲಿಲ್ಲ. ಹತ್ತಿರದಲ್ಲೆ ಇದ್ದೇನೆ. ಇವೊತ್ತಿನ ದಿವಸ ಆ ಒಂದು ಪರಿಸ್ಥಿತಿ ಉದ್ಭವಿಸಿ, ಕೇವಲ ಅರ್ಧದಷ್ಟು ನೀರು ಪಡೆಯಲಿಕ್ಕೆ ಪೂರ್ತಿ ಹಣವನ್ನು ಖರ್ಚು ಮಾಡಿದ್ದಾರೆ ಅಂದಾಜಾಗಿದ್ದ ೩೯ ಸಾವಿರದಲ್ಲಿ ಮೂರು ಕೋಟಿ ಮಾತ್ರ ಕಡಮೆಯಾಗಿದೆ ೧೯೬೩ನೇ ಇಸವಿಯಲ್ಲಿ ಪ್ರಾರಂಭವಾದ ಈ ಯೋಜನೆಯನ್ನು ೧೯೬೮ ರೊಳಗೆ ಮುಗಿಯಬೇಕೆಂದು ಇತ್ತು. ಆದರೆ, ಯೋಜನೆ ಪ್ರಾರಂಭವಾದ ಹತ್ತು ವರ್ಷಗಳ ಮೇಲೆ ಅಂದರೆ, ೧೯೭೩ನೇ ಜನವರಿಯಲ್ಲಿ ನಮಗೆ ನೀರು ಬಂದಿದೆ. ಸುಮಾರು ಐದು ವರ್ಷದಲ್ಲಿ ಮುಗಿಯತಕ್ಕ ಯೋಜನೆ ಕಾರ್ಯಗತವಾಗುವುದಕ್ಕೆ ಇನ್ನೂ ಐದು ವರ್ಷಗಳನ್ನು ತೆಗೆದು ಕೊಂಡಿತು ಹಾಗಿದ್ದರೂ ಕೂಡ ನಾವು ಇವತ್ತಿನ ದಿವಸ ಪಡೆಯುತ್ತಾ ಇರತಕ್ಕದ್ದು ಕೇವಲ ಅರ್ಧದಷ್ಟು ನೀರು ಮಾತ್ರ ಹಣ ಮಾತ್ರ ಪೂರ್ತ ಖರ್ಚಾಗಿದೆ, ಇದು ಇವತ್ತಿನ ದಿವಸ ಇರತಕ್ಕ ವಾಸ್ತವಾಂಶ. ಮಾನ್ಯ ವಿರೋಧೀ ಪಕ್ಷದ ನಾಯಕರಾದ ಶ್ರೀಮಾನ್ ದೇವೇಗೌಡರು ಇವರ ಬಗ್ಗೆ ಬಹಳ ಗುರುತರವಾದಂಥ ಅಪಾದನೆಗಳನ್ನು ಮಾಡಿದ್ದಾರೆ ಅದಕ್ಕೆ ಸಂಬಂಧಪಟ್ಟ ಹಾಗೆ ಅನೇಕ ಅಂಕಿ-ಅಂಶಗಳನ್ನೂ ಇಟ್ಟಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರು ತಿಳಿಸಿದ ಹಾಗೆ ಅವರು ಮಾಡಿರತಕ್ಕ ಆಪಾದನೆಗಳ ಬಗ್ಗೆ ಅಡಿಯಿಂದ ಹಿಡಿದು ಮುಡಿಯುವರೆಗೆ ವಿಚಾರಣೆ ಆಗಲೇಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ. ಇದರಲ್ಲಿ ಯಾರು ಯಾರದು ಎಷ್ಟೆಷ್ಟು ಪಾಲು ಇದೆ ? ಯಾರು ಯಾಗು ಇದರಲ್ಲಿ ಏನೇನು ಮಾಡಿದ್ದಾರೆ ? ಯಾವ ಯಾವ ವ್ಯವಹಾರಗಳು ಎಷ್ಟೆಷ್ಟು ಶುದ್ಧವಾಗಿವೆ, ಮತ್ತು ದಕ್ಷತೆಯಿಂದ ಇವೆ ಎನ್ನುವುದು ಇವತ್ತಿನ ದಿವಸ ನಿರ್ಧಾರವಾಗಬೇಕಾಗುತ್ತದೆ. ಆದುದರಿಂದ, ಇಲ್ಲಿ ನಡದಿರತಕ್ಕ ವ್ಯವಹಾರಗಳ ಬಗ್ಗೆ ನಿಷ್ಪಕ್ಷಪಾತವಾಗಿ ವಿಚಾರಣೆ ಮಾಡಲಿಕ್ಕೆ ಒಂದು ಸಮಿತಿಯನ್ನು ರಚನೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಸರಕಾರವನ್ನು ಒತ್ತಾಯ ಮಾಡುತ್ತೇನೆ. ಇಷ್ಟು ಮಾತನಾಡಲು ವೇಳೆ ಕೊಟ್ಟದ್ದಕ್ಕಾಗಿ ಉಪಾಧ್ಯಕ್ಷರನ್ನು ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಡಿ. ಕೆ. ನಾಯ್ಕರ್.—ಮಾನ್ಯ ಉಪಾಧ್ಯಕ್ಷರೇ ....

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಉಪಾಧ್ಯಕ್ಷರೇ ಈ ಒಂದು ಖಾಸಗೀ ನಿರ್ಣಯದ ಬಗ್ಗೆ ಸುಮಾರು ಎರಡು ಗಂಟೆಗಳ ಕಾಲ ಮಾತನಾಡುತ್ತಾ, ಹಲವಾರು ಆಪಾದನೆಗಳನ್ನು ಮಾಡಿದ್ದೇನೆ. ಆದರೆ, ಮಾನ್ಯ ಮಂತ್ರಿಗಳು ಈಗ ಐದು ನಿಮಿಷದಲ್ಲಿ ಉತ್ತರ ಹೇಳಿಬಿಟ್ಟರೆ ಅದು ಹೇಗೆ ಆಗುತ್ತದೆ ?

ಶ್ರೀ ಡಿ ಕೆ. ನಾಯ್ಕರ್.—ನಾನು ಉತ್ತರ ಏನು ಹೇಳುತ್ತೇನೆ ಎಂಬುದನ್ನು ತಾವು ಮೊದಲು ಕೇಳಿ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಮಂತ್ರಿಗಳು, ನಾನು ಮಾಡಿರುವಂಥ ಆಪಾದನೆಗಳ ಬಗ್ಗೆ ಅಧ್ಯಯನ ಮಾಡಿ, ನಾಳೆ ಈ ಸದನಕ್ಕೆ ಉತ್ತರ ಕೊಡಲಿ. ಈಗ ಅಧ್ಯಗಂಟೆಚರ್ಚೆ ಬೇರೆ ಇದೆ. ಹಾಗೇನಾದರೂ ಮಾನ್ಯ ಮಂತ್ರಿಗಳು ಉತ್ತರ ಕೊಡುವುದೇ ಆದರೆ, ತಮ್ಮ ಉತ್ತರವನ್ನು ಕೇಳುವುದಕ್ಕೆ ನಾವು ತಯಾರಿಲ್ಲ, ವಾಕ್ ಔಟ್ ಮಾಡಬೇಕಾಗುತ್ತದೆ.

6-00 P.M.

SRI T. R. SHAMANNA.—There is half-an-hour discussion also. So, the reply cannot be taken up today.

MR. DEPUTY SPEAKER.—If they are anxious to reply, what am I to do ?

SRI T. R. SHAMANNA.—It is not a question of anxiety; it is a question of giving a convincing reply.

MR. DEPUTY SPEAKER.—Why not sit for a while and dispose of this matter ?

SRI H. D. DEVE GOWDA.—I have made very serious charges, and if this is the attitude of Government, then I will have to take a different attitude.

MR. DEPUTY SPEAKER.—I may inform the House that in the Bombay Assembly Government's reply would be on the same day on which the charges are made because the Government wanted to ensure that along with the charges the reply must appear at all stages.

SRI H. D. DEVE GOWDA.—To the charges I made the Chief Minister replied after 20 days.

MR. DEPUTY SPEAKER.—I myself said that the reply to the Demands might be taken up the next day. I am given to understand that the reply must be today itself. I am helpless. How much time will the Hon. Minister require for his reply ?

SRI D. K. NAIKAR.—By 6-30 p.m. I will finish.

SRI H. D. DEVE GOWDA.—If this is the kind of reply for all charges we have made, I am sorry we cannot agree to it.

MR. DEPUTY SPEAKER.—I think we can have the reply tomorrow The House will now adjourn and meet tomorrow at 8-30 A.M.

The House adjourned at Five Minutes past Six of the Clock to meet again at Thirty Minutes Past Eight of the Clock, on Saturday, the 5th April 1975.